ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಫೆಬ್ರವರಿ 11 ಮಂಗಳವಾರ 2025

ಸಂಪುಟ: 45 | ಸಂಚಿಕೆ: 294 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ತಿರುಮಕೂಡಲು ನರಸೀಪುರದ ತ್ರಿವೇಣಿ ಸಂಗಮದಲ್ಲಿ ಮೂರು ದಿನಗಳ

ಕುಂಭಮೇಳ ಪುಣ್ಯಸ್ನಾನ ಪ್ರಾರಂಭ

- ಸ್ವಾಮೀಜಿಗಳಿಂದ ಪುಣ್ಯಕಾರ್ಯಕ್ಕೆ ವಿಧ್ಯುಕ್ತ ಚಾಲನೆ
- ದಕ್ಷಿಣ ಭಾರತದ ಪವಿತ್ರ ಕುಂಭಮೇಳ ಖ್ಯಾತಿಯ ಧಾರ್ಮಿಕ ಉತ್ಸವವಿದು
- ವಿವಿಧ ಜಿಲ್ಲೆ ಮಾತ್ರವಲ್ಲ ಹೊರರಾಜ್ಯಗಳಿಂದಲೂ ಭಕ್ತರ ಆಗಮನ
- ಪೊಲೀಸರು, ಅಗ್ನಿಶಾಮಕ ದಳದಿಂದ ಸಕಲ ಎಚ್ಚರಿಕಾ ಕ್ರಮ





ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಸೋಮವಾರ 13ನೇ ಕುಂಭಮೇಳಕ್ಕೆ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ, ಕಾಗಿನೆಲೆ ಕನಕಗುರು ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಬೆಂಗಳೂರಿನ ಕೈಲಾಸ ಆಶ್ರಮದ ಶ್ರೀ ಜಯೇಂದ್ರ ಪುರಿ ಸ್ವಾಮೀಜಿ ಇತರ ಧಾರ್ಮಿಕ ಗುರುಗಳು ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡುತ್ತಿರುವ ಭಕ್ತರನ್ನು ಕಾಣಬಹುದು.

ತಿ.ನರಸೀಪುರ, ಫೆ.10(ಎಂಟಿವೈ)– ದಕ್ಷಿಣ ಭಾರತದ 'ತ್ರಿವೇಣಿ ಸಂಗಮ' ಖ್ಯಾತಿಯ ತಿ.ನರಸೀಪುರದ ದೈವಿಸ್ಥಾನದಲ್ಲಿ ಸೋಮವಾರ 13ನೇ ಕುಂಭಮೇಳಕ್ಕೆ ವಿಧ್ಯುಕ್ತ ಚಾಲನೆ ದೊರೆತಿದ್ದು, ಮೊದಲ ದಿನವೇ ಅಪಾರ ಸಂಖ್ಯೆಯಲ್ಲಿ ಭಕ್ತರು ಪವಿತ್ರ ಸ್ನಾನ ಮಾಡುವ ಮೂಲಕ ಭಕ್ತಿ ಮೆರೆದರು.

ಕನ್ನಡ ನಾಡಿನ ಜೀವನದಿ ಕಾವೇರಿ, ಕಪಿಲ ಹಾಗೂ ಸ್ಫಟಿಕ ಸರೋವರದ ಸಂಗಮ ಸ್ಥಳವಾದ ತಿರುಮಕೂಡಲು ನರಸೀಪುರದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಈ ಧಾರ್ಮಿಕ ಉತ್ಸವ ದಕ್ಷಿಣ ಭಾರತದ ಏಕೈಕ ಕುಂಭಮೇಳ ಎಂಬ ಕೀರ್ತಿಗೆ ಪಾತ್ರವಾಗಿದ್ದು, ಇಂದಿನಿಂದ ಮೂರು ದಿನಗಳ ಕಾಲ ನಡೆಯಲಿದೆ. ಕೋವಿಡ್ ಹಿನ್ನೆಲೆಯಲ್ಲಿ 2022ರಲ್ಲಿ ಕುಂಭಮೇಳ ಕೇವಲ ಸಾಂಪ್ರದಾಯಿಕ ಪೂಜೆಗಷ್ಟೇ ಸೀಮಿತಗೊಂಡಿತ್ತು. ಈ ಬಾರಿ ಆರಂಭವಾಗಿರುವ ಕುಂಭಮೇಳಕ್ಕೆ ರಾಜ್ಯದ ವಿವಿಧ ಜಿಲ್ಲೆ ಮಾತ್ರವಲ್ಲದೆ, ತಮಿಳುನಾಡು, ಕೇರಳ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, ಪುಣ್ಯಸ್ನಾನ ಮಾಡುತ್ತಿದ್ದಾರೆ.

ಮಠಾಧೀಶರಿಂದ ಚಾಲನೆ: ಮೂರು ದಿನಗಳ ಕುಂಭಮೇಳಕ್ಕೆ ಇಂದು ಮಧ್ಯಾಹ್ನ 1 ಗಂಟೆಗೆ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ, ಕಾಗಿನೆಲೆ ಕನಕಗುರು ಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ಬೆಂಗಳೂರಿನ ಕೈಲಾಸ ಆಶ್ರಮದ ಶ್ರೀ ಜಯೇಂದ್ರ ಪುರಿ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ಮಂತ್ರಘೋಷದ ನಡುವೆ ತ್ರಿವೇಣಿ ಸಂಗಮ ಸ್ಥಳದ ನದಿ ಮಧ್ಯದಲ್ಲಿ ನಿರ್ಮಿಸಿರುವ ಕುಟೀರದ ಬಳಿ ಧ್ವಜಾರೋಹಣ ನೆರವೇರಿಸಿದರು. ಬಳಿಕ ನದಿ ಮಧ್ಯದಲ್ಲಿರುವ ನಡುಹೊಳೆ ಬಸಪ್ಪನ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡಿ, ತ್ರಿವೇಣಿ ಸಂಗಮ ಸ್ಥಳದಲ್ಲಿ ನದಿಗೆ ಪುಷ್ಪ ಸಮರ್ಪಿಸಿ, ಪ್ರೋಕ್ಷಣೆ ಮೂಲಕ ಪುಣ್ಯಸ್ನಾನಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದರು. ■6ನೇ ಪುಟಕ್ಕೆ

ಮೈಸೂರು ಜಿಲ್ಲೆಯ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಇಂದು 13ನೇ ಕುಂಭಮೇಳಕ್ಕೆ ಚಾಲನೆ ದೊರೆತಿದೆ. ಸರ್ಕಾರ ಹಾಗೂ ಜಿಲ್ಲಾಡಳಿತ ಎಲ್ಲಾ ವ್ಯವಸ್ಥೆ ಮಾಡಿದೆ. ಮೂರೂ ನದಿಗಳ ಸಂಗಮ ಕ್ಷೇತ್ರ ತ್ರಿವೇಣಿ ಸಂಗಮ. ಸುತ್ತೂರು ಶ್ರೀಗಳು, ಬಾಲಗಂಗಾಧರನಾಥಸ್ವಾಮಿಗಳು ಇಲ್ಲಿ ಕುಂಭಮೇಳ ಆರಂಭಿಸಿದರು. ಈ ಬಾರಿ 13ನೇ ಕುಂಭಮೇಳ ನಡೆಯುತ್ತಿದೆ. ಗಂಗಾರತಿ ಮಾದರಿಯಲ್ಲಿ ಕಾವೇರಿ ಆರತಿ ಮಂಗಳವಾರ ನಡೆಯಲಿದೆ. ಮಾಘ ಮಾಸದ ಪೂರ್ಣಿಮೆಯ ಮೂರು ದಿನ ಪುಣ್ಯಸ್ನಾನಕ್ಕೆ ಪ್ರಶಸ್ತ ದಿನ. ಸಹಸ್ರಾರು ಭಕ್ತರು ಪುಣ್ಯಸ್ನಾನ ಮಾಡುತ್ತಾರೆ.

– ಶ್ರೀಸೋಮನಾಥ ಸ್ವಾಮೀಜಿ, ಆದಿಚುಂಚನಗಿರಿ ಶಾಖಾಮಠ.

ಇಂದು ಕಾಶಿಯ ಪುರೋಹಿತರಿಂದ ಕಾವೇರಿ ಆರತಿ

ತಿ.ನರಸೀಪುರ,ಫೆ.10(ಎಂಟಿವೈ)– ತಿ.ನರಸೀಪುರದಲ್ಲಿ ಆರಂಭವಾಗಿರುವ ಕುಂಭಮೇಳದ ಯಶಸ್ಸಿಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ನಾಳೆ(ಫೆ.11) ಸಂಜೆ 6.30ಕ್ಕೆ ಕಾಶಿಯ ಪುರೋಹಿತರ ತಂಡದಿಂದ ಕಾವೇರಿ ಆರತಿ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ. ಕುಂಭಮೇಳ ನಡೆಯುವ ತ್ರಿವೇಣಿ ಸಂಗಮ ಕ್ಷೇತ್ರಕ್ಕೆ ಸೋಮವಾರ ಅಧಿಕಾರಿಗಳೊಂದಿಗೆ ಆಗಮಿಸಿ, ಕೈಗೊಂಡಿರುವ ಸಿದ್ಧತೆ ಕುರಿತಂತೆ ಪರಿಶೀಲನೆ ಮಾಡಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇಂದಿನಿಂದ ಆರಂಭವಾದ ಕುಂಭಮೇಳದ ಯಶಸ್ಸಿಗೆ ಕ್ರಮ ಕೈಗೊಳ್ಳಲಾಗಿದೆ. ಮೂರು ದಿನಗಳ ಧಾರ್ಮಿಕ ಕಾರ್ಯಕ್ರಮದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಕುಂಭಮೇಳದ ಮೊದಲ ದಿನವಾದ ಇಂದು ಈಗಾಗಲೇ ಅಪಾರ ಸಂಖ್ಯೆಯ ಭಕ್ತರು ಪುಣ್ಯಸ್ನಾನ ಮಾಡಿದ್ದಾರೆ. ಭಕ್ತರ ಅನುಕೂಲಕ್ಕಾಗಿ ಮೂರು ಸ್ಥಳಗಳಲ್ಲಿ ಪುಣ್ಯಸ್ನಾನಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದರು. ಕುಂಭಮೇಳಕ್ಕೆ ಮೊದಲ ದಿನ ■6ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯರ ಪತ್ನಿ ಪಾರ್ವತಿ, ಸಚಿವ ಭೈರತಿ ಸುರೇಶ್‌ಗೆ ಇಡಿ ಸಮನ್ಸ್ ಪ್ರಕರಣದ ವಿಚಾರಣೆ ಫೆ.20ಕ್ಕೆ ಮುಂದೂಡಿಕೆ



ಪಾರ್ವತಿ



ಭೈರತಿ ಸುರೇಶ್

ಬೆಂಗಳೂರು, ಫೆ.10(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಿಂದ 14 ನಿವೇಶನಗಳ ಹಂಚಿಕೆಯಲ್ಲಿನ ಹಣದ ವಹಿವಾಟಿನ (ಮನಿ ಲ್ಯಾಂಡರಿಂಗ್) ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಪತ್ನಿ ಪಾರ್ವತಿ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ.) ನೀಡಿರುವ ನೋಟಿಸ್ ರದ್ದು ಕೋರಿದ ಅರ್ಜಿಯ ಮುಂದಿನ ವಿಚಾರಣೆಯನ್ನು ಫೆಬ್ರವರಿ 20ಕ್ಕೆ ರಾಜ್ಯ ಹೈಕೋರ್ಟ್ ಮುಂದೂಡಿದೆ.

ಇದರೊಂದಿಗೆ ಮುಖ್ಯಮಂತ್ರಿ ಪತ್ನಿ ಪಾರ್ವತಿ ಹಾಗೂ ಸಚಿವ ಭೈರತಿ ಸುರೇಶ್ ಅವರುಗಳಿಗೆ ನೀಡಿರುವ ಇ.ಡಿ. ಸಮನ್ಸ್‌ಗೆ ತಡೆಯಾಜ್ಞೆಯೂ ವಿಸ್ತರಣೆಯಾಗಲಿದೆ ಎಂದು ನ್ಯಾಯಪೀಠ ತಿಳಿಸಿದೆ. ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ, ವಾದ–ಪ್ರತಿವಾದ ಆಲಿಸಿ, ಮುಂದಿನ ವಿಚಾರಣೆಯನ್ನು ■6ನೇ ಪುಟಕ್ಕೆ

ರಾಜ್ಯ ರಾಜಕಾರಣಕ್ಕೆ ಮಲ್ಲಿಕಾರ್ಜುನ ಖರ್ಗೆ ಕರೆತರುವ ಮತ್ತೊಂದು ಯತ್ನ

- ಪರಿಶಿಷ್ಟ ಸಮುದಾಯದ ಸಚಿವರಿಂದ ಆಹ್ವಾನ
- ಭವಿಷ್ಯದ ಡಿ.ಕೆ.ಶಿವಕುಮಾರ್ ನಾಯಕತ್ವಕ್ಕೆ ಸೆಡ್ಡು!



ಬೆಂಗಳೂರು, ಫೆ.10(ಕೆಎಂಶಿ)– ರಾಷ್ಟ್ರ ರಾಜಕಾರಣ ಬಿಟ್ಟು ರಾಜ್ಯ ರಾಜಕಾರಣಕ್ಕೆ ಬರುವಂತೆ ಪರಿಶಿಷ್ಟ ಸಮುದಾಯದ ಸಚಿವರುಗಳು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಿದ್ದಾರೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ನಾಯಕತ್ವದಲ್ಲಿ ಸಮುದಾಯದ ಶಾಸಕರು ಹಾಗೂ ಸಚಿವರು, ನಾಳೆ ದೆಹಲಿಗೆ ತೆರಳಿ ಖರ್ಗೆ ಅವರನ್ನು ಭೇಟಿ ಮಾಡಿ ಈ ಆಹ್ವಾನ ನೀಡಲಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಈಗಾಗಲೇ ದೆಹಲಿಯಲ್ಲೇ ಬಿಡಾರ ಹೂಡಿದ್ದಾರೆ. ಇವರ ಜೊತೆ ಉಳಿದವರು ಸೇರಿಕೊಂಡು ಖರ್ಗೆ ಅವರನ್ನು ಭೇಟಿ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಸದ್ಯಕ್ಕೆ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ ಆದರೂ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ದೊರೆಯಬಹುದಾದ ನಾಯಕತ್ವ ಸಾಧ್ಯತೆಗೆ ಸೆಡ್ಡು ಹೊಡೆದಿರುವ ಇವರುಗಳು, ಖರ್ಗೆ ಅವರನ್ನು ರಾಜ್ಯ ರಾಜಕಾರಣಕ್ಕೆ ತರಲು ವೇದಿಕೆ ಸಿದ್ಧಗೊಳಿಸುತ್ತಿದ್ದಾರೆ. ದಲಿತ ಸಮುದಾಯಕ್ಕೆ ಕರ್ನಾಟಕದಲ್ಲಿ ಆಡಳಿತದ ನಾಯಕತ್ವ ದಕ್ಕಿಸಿಕೊಳ್ಳುವ ■6ನೇ ಪುಟಕ್ಕೆ

ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಮೂತ್ರಪಿಂಡದ ಕಲ್ಲುಗಳು; ಪ್ರಾಸ್ಟೇಟ್ ಆರೋಗ್ಯದ ಕುರಿತು ಜಾಗೃತಿ ಕಾರ್ಯಕ್ರಮ



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಮೂತ್ರಪಿಂಡದ ಕಲ್ಲುಗಳು, ಪ್ರಾಸ್ಟೇಟ್ ಸಮಸ್ಯೆಗಳ ಬಗ್ಗೆ ಜಾಗೃತಿ ಕಾರ್ಯಕ್ರಮ ನಡೆಯಿತು.

ಮೈಸೂರು,ಫೆ.10– ಮೂತ್ರಪಿಂಡದ ಕಲ್ಲುಗಳು ಮತ್ತು ಪ್ರಾಸ್ಟೇಟ್ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ನೇತೃತ್ವವನ್ನು ಹೆಸರಾಂತ ತಜ್ಞ ಕನ್ಸಲ್ಟೆಂಟ್ ಯೂರೋಲಾಜಿಸ್ಟ್, ಆಂಡ್ರಾಲಜಿ ಮತ್ತು ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಸರ್ಜನ್ ಡಾ.ಕೆ.ಎ. ತಿಮ್ಮಯ್ಯ ಮತ್ತು ಕನ್ಸಲ್ಟೆಂಟ್ ಯೂರೋಲಾಜಿಸ್ಟ್, ಆಂಡ್ರಾಲಜಿ ಮತ್ತು ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಸರ್ಜನ್ ಡಾ.ದಿನೇಶ್ ಕುಮಾರ್ ವಹಿಸಿದ್ದರು. ಈ ಪರಿಸ್ಥಿತಿಗಳಿಂದ ಬಳಲುತ್ತಿರುವ ಜನರ ಜೀವನದ ಗುಣಮಟ್ಟವನ್ನು ಸುಧಾರಿಸಲು ಆರಂಭಿಕ ಹಂತದ ಪತ್ತೆ, ತ್ವರಿತ ಚಿಕಿತ್ಸೆ ಮತ್ತು ತಡೆಗಟ್ಟುವ ಕ್ರಮಗಳ ಮಹತ್ವವನ್ನು ಒತ್ತಿ ಹೇಳುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿತ್ತು.

ಮೂತ್ರಪಿಂಡದ ಕಲ್ಲುಗಳು ಮತ್ತು ಪ್ರಾಸ್ಟೇಟ್ ಸಮಸ್ಯೆಗಳು ಭಾರತದಲ್ಲಿ ಸಾಮಾನ್ಯ ಮೂತ್ರಶಾಸ್ತ್ರೀಯ ಸಮಸ್ಯೆಗಳಾಗಿದ್ದು, ಇವು ಚಿಕ್ಕ ವಯಸ್ಸಿನವರಿಂದ ಹಿಡಿದು ವೃದ್ಧರವರೆಗೆ ಎಲ್ಲಾ ವಯಸ್ಸಿನ ಜನರ ಮೇಲೆ ಪರಿಣಾಮ ಬೀರುತ್ತವೆ. ಸುಧಾರಿತ ವೈದ್ಯಕೀಯ ಆರೈಕೆಯನ್ನು ಒದಗಿಸುವುದಕ್ಕೆ ಹೆಸರುವಾಸಿಯಾಗಿರುವ ಮೈಸೂರಿನ ಮಣಿಪಾಲ್ ಆಸ್ಪತ್ರೆಯು 2009ರಿಂದ 50ರಿಂದ 95 ವರ್ಷ ವಯಸ್ಸಿನ ರೋಗಿಗಳಿಗೆ ಚಿಕಿತ್ಸೆ ನೀಡುವ ಮೂಲಕ 1,200ಕ್ಕೂ ಹೆಚ್ಚು ಹೋಲೆಪ್ (ಹೋಲ್ಮಿಯಮ್ ಲೇಸರ್ ಈನ್ಯೂಕ್ಲಿಯೇಶನ್ ಆಫ್ ಪ್ರಾಸ್ಟೇಟ್) ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸಿದೆ. ಆಸ್ಪತ್ರೆಯು 8ರಿಂದ 90 ವರ್ಷ ವಯಸ್ಸಿನ 5,000 ಕ್ಕೂ ಹೆಚ್ಚು ಮೂತ್ರಪಿಂಡದ ಕಲ್ಲಿನ ರೋಗಿಗಳಿಗೆ ಚಿಕಿತ್ಸೆ ನೀಡಿದೆ. ಈ ಸಂಖ್ಯೆಗಳು ಈ ಪರಿಸ್ಥಿತಿಗಳಿಗೆ ಚಿಕಿತ್ಸೆ ನೀಡುವಲ್ಲಿ ಆಸ್ಪತ್ರೆಯ ಅತ್ಯುತ್ತಮ ದಾಖಲೆಯನ್ನು ಮತ್ತು ಸಮುದಾಯದಲ್ಲಿ ಹೆಚ್ಚಿನ ಜಾಗೃತಿಯ ಅಗತ್ಯವನ್ನು ತೋರಿಸುತ್ತವೆ ಎಂದರು.

ವಿವಿಧ ಮೂತ್ರಶಾಸ್ತ್ರೀಯ ಪರಿಸ್ಥಿತಿಗಳಿಗೆ ಚಿಕಿತ್ಸೆ ನೀಡುವಲ್ಲಿ ಹಲವು ವರ್ಷಗಳ ಅನುಭವ ಹೊಂದಿರುವ ಡಾ.ತಿಮ್ಮಯ್ಯ ಮತ್ತು ಡಾ.ದಿನೇಶ್‌ಕುಮಾರ್, ಸಾರ್ವಜನಿಕ ವೇದಿಕೆಯಲ್ಲಿ ಅಮೂಲ್ಯವಾದ ವಿಷಯಗಳನ್ನು ಹಂಚಿಕೊಂಡರು.

ಆರೋಗ್ಯ ಉಚಿತ ತಪಾಸಣಾ ಶಿಬಿರ...



ಮೈಸೂರು ತಾಲೂಕು ಮಂಡಕಳ್ಳಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಬ್ರಿಗೇಡ್ ವತಿಯಿಂದ ಮಂಡಕಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಆರೋಗ್ಯ ಉಚಿತ ತಪಾಸಣಾ ಶಿಬಿರವನ್ನು ಕಡಕೊಳ ಗ್ರಾಪಂ ಮಾಜಿ ಅಧ್ಯಕ್ಷ ಬೀರೇಗೌಡ ಉದ್ಘಾಟಿಸಿದರು. ಶಿಬಿರದಲ್ಲಿ ನಾರಾಯಣ ಹೃದಯಾಲಯದ ವೈದ್ಯರು, ನರ್ಸ್, ಸಿಬ್ಬಂದಿ, ಲಯನ್ಸ್ ಸಂಸ್ಥೆ ಅಧ್ಯಕ್ಷರು, ರೈತ ಸಂಘದ ಪದಾಧಿಕಾರಿಗಳು, ಕಡಕೊಳ ಗ್ರಾಪಂ ಮುಖ್ಯಾಧಿಕಾರಿ, ಶಿಕ್ಷಕರು, ಗ್ರಾಮಸ್ಥರು ಹಾಜರಿದ್ದರು.

ನಾಳೆ ಶನಿ ಮಹಾಶಾಂತಿ

ಮೈಸೂರು, ಫೆ.10– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಫೆ.12ರಂದು ಬುಧವಾರ ಬೆಳಗ್ಗೆ 9 ಗಂಟೆಗೆ ಕರ್ಕಾಟಕ, ತುಲಾ, ಮಕರ, ಕುಂಭ, ಮೀನ ರಾಶಿಯವರಿಗೆ ಶನಿ ಮಹಾಶಾಂತಿ ಮತ್ತು ಬಾಧಾ ನಿವಾರಕ ಸುದರ್ಶನ ಹೋಮ, ಮಹಾ ಮೃತ್ಯುಂಜಯ ಹೋಮ, ಕುಜದೋಷ ನಿವೃತ್ತಿ ಶಾಂತಿ, ರಾಹು ಮತ್ತು ಕೇತು ಶಾಂತಿ ಏರ್ಪಡಿಸಲಾಗಿದೆ. ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ ಮತ್ತು ಮಹಾ ಮಂಗಳಾರತಿ.


ಹಣ್ಣು–ಹಂಪಲು ವಿತರಣೆ...



ಮೈಸೂರಿನ ಅರವಿಂದನಗರದಲ್ಲಿರುವ ಜೆಎಸ್‌ಎಸ್ ವೃದ್ಧಾಶ್ರಮದ ಹಿರಿಯ ನಾಗರಿಕರಿಗೆ ಹಣ್ಣು ಹಂಪಲು ಹಾಗೂ ದಿನಸಿ ಸಾಮಗ್ರಿಗಳನ್ನು ವಿತರಿಸುವ ಮೂಲಕ ರಮಾಬಾಯಿ ಅಂಬೇಡ್ಕರ್ ಅವರ 127ನೇ ಜನ್ಮ ದಿನ ಆಚರಿಸಲಾಯಿತು. ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ್, ಸುಬ್ರಮಣಿ, ವೀರಭದ್ರಸ್ವಾಮಿ, ಛಾಯ, ಯಶ್ವಂತ್‌ಕುಮಾರ್, ಮಹದೇವ್, ಮಹೇಶ್, ಮಹದೇವಸ್ವಾಮಿ, ಅಕ್ಷಯ್ ಪ್ರಿಯದರ್ಶನ್, ಹರ್ಷಿತ್ ಎಸ್.ನಾಗೇಶ್ ಇತರರು ಈ ವೇಳೆ ಹಾಜರಿದ್ದರು.

ಪೊಲೀಸ್, ಅಬಕಾರಿ ಪಿಸಿ, ಪಿಎಸ್‌ಐ ಪರೀಕ್ಷೆಗಳಿಗೆ ಉಚಿತ ತರಬೇತಿ

ಮೈಸೂರು,ಫೆ.10– ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಪೊಲೀಸ್ ಮತ್ತು ಅಬಕಾರಿ ಇಲಾಖೆಯ ಪಿಸಿ ಮತ್ತು ಪಿಎಸ್‌ಐ ಹುದ್ದೆಗಳಿಗಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಉಚಿತ ತರಬೇತಿಯನ್ನು ನೀಡಲಾಗುವುದು. ಆಸ್ತಕರು ಫೆ.17ರ ಸಂಜೆ 5.30ರಿಂದ 7.30ರವರೆಗೆ ಮೈಸೂರಿನ ಲಕ್ಷ್ಮಿಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನ ಆವರಣದಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಸಂಯೋಜಕ ಸಿ.ಕೆ.ಕಿರಣ್‌ಕೌಶಿಕ್: 9972830857, ಕೆ.ವೈ ನಾಗೇಂದ್ರ: 8296788251 ನ್ನು ಸಂಪರ್ಕಿಸಬಹುದು ಎಂದು ಕಾರ್ಯದರ್ಶಿ ಹೆಚ್.ಬಾಲಕೃಷ್ಣ (9448117455) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಿಶಾಂತ್ ಪಟೇಲ್ ಚಾಮರಾಜ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ

ಮೈಸೂರು, ಫೆ.10– ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಯುವ ಸಮಿತಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ಸ್ಪರ್ಧಿಸಿದ್ದ ನಿಶಾಂತ್ ಪಟೇಲ್ 2260 ಮತ ಪಡೆದು ಚುನಾಯಿತರಾಗಿದ್ದಾರೆ. ಇವರು ಮೈಸೂರು ನಗರ ಯುವ ಕಾಂಗ್ರೆಸ್ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.



ನಿತೀಶ್‌ಗೆ ಪಿಹೆಚ್.ಡಿ ಪದವಿ

ಮೈಸೂರು: ಡಾ.ಜೆ.ಹನುಮಂತಪ್ಪ ಅವರ ಮಾರ್ಗದರ್ಶನದಲ್ಲಿ ಎ.ನಿತೀಶ್ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಕುಂಭಮೇಳದ ತ್ರಿವೇಣಿ ಸಂಗಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪವಿತ್ರ ಸ್ನಾನ

ಪ್ರಯಾಗ್ ರಾಜ್, ಫೆ.10– ಜಗತ್ತಿನ ಅತಿದೊಡ್ಡ ಧಾರ್ಮಿಕ ಕಾರ್ಯಕ್ರಮವಾದ ಪ್ರಯಾಗ್‌ರಾಜ್‌ನ ಮಹಾ ಕುಂಭಮೇಳದಲ್ಲಿ ಪವಿತ್ರ ಸ್ನಾನ ಮಾಡಲು ಭಕ್ತರ ದಂಡು ದೇಶ ವಿದೇಶಗಳಿಂದ ಆಗಮಿಸುತ್ತಿದೆ. ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಪ್ರಮುಖ ರಾಜಕೀಯ ನಾಯಕರುಗಳು ಕೂಡ ತ್ರಿವೇಣಿ ಸಂಗಮಕ್ಕೆ ಭೇಟಿ ನೀಡುತ್ತಿದ್ದಾರೆ. ಇದೀಗ ರಾಷ್ಟ್ರಪತಿ ದ್ರೌಪದಿ ಮುರ್ಮು ಕೂಡ ಆಗಮಿಸಿ ಪವಿತ್ರ ಸ್ನಾನ ನಡೆಸಿದ್ದಾರೆ.

ಇಂದು ಉತ್ತರಪ್ರದೇಶದ ಪ್ರಯಾಗ್‌ರಾಜ್‌ಗೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು, ಗಂಗಾ – ಯಮುನಾ – ಸರಸ್ವತಿ ನದಿ ಸೇರುವ ತ್ರಿವೇಣಿ ಸಂಗಮದಲ್ಲಿ ಮುಳುಗೆದ್ದು, ಪ್ರಾರ್ಥನೆ ಸಲ್ಲಿಸಿದರು. ಇದಕ್ಕೂ ಮುನ್ನ ಉತ್ತರಪ್ರದೇಶ ರಾಜ್ಯಪಾಲರಾದ ಅನಂದಿಬೇನ್ ಪಾಟೇಲ್, ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇಂದು ಬೆಳಗ್ಗೆ ರಾಷ್ಟ್ರಪತಿಗಳನ್ನು ಆತ್ಮೀಯವಾಗಿ ಬರಮಾಡಿಕೊಂಡರು. ತ್ರಿವೇಣಿ ಸಂಗಮಕ್ಕೆ ಆಗಮಿಸಿದ ಅವರು ಇದೆ ವೇಳೆ, ಅಲ್ಲಿದ್ದ ಪಕ್ಷಿಗಳಿಗೂ ಕಾಳುಗಳನ್ನು ನೀಡಿದ್ದು ಕಂಡು ಬಂದಿತು. ಈ ನಡುವೆ ಉತ್ತರಾಖಂಡ್ ಸಿಎಂ ಪುಷ್ಕರ್ ಸಿಂಗ್ ಧಾಮಿ ಕೂಡ ಅವರ ಕುಟುಂಬದೊಂದಿಗೆ ಆಗಮಿಸಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ನಡೆಸಿದ್ದಾರೆ. ಈ ವೇಳೆ ಮಾತನಾಡಿದ ಅವರು, ಈ ರೀತಿಯ





ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಸ್ವಾಗತಿಸಿದ ಯುಪಿ ಸಿಎಂ ಯೋಗಿ ಆದಿತ್ಯನಾಥ್

ಅದ್ಭುತ ಅವಕಾಶ ಲಭ್ಯವಾಗಿರುವುದಕ್ಕೆ ಕೃತಜ್ಞತೆ ಹೊಂದಿರುವುದಾಗಿ ತಿಳಿಸಿದರು. 2027ರಲ್ಲಿ ಹರಿದ್ವಾರದಲ್ಲಿ ನಡೆಯಲಿರುವ ಕುಂಭಮೇಳಕ್ಕೆ ತಯಾರಿ ನಡೆಸುವುದಾಗಿ ತಿಳಿಸಿದರು. ಜಗತ್ತಿನ ಎಲ್ಲ ಮೂಲೆಯಿಂದ ಜನರು ಇಲ್ಲಿ ಪವಿತ್ರ ಸ್ನಾನಕ್ಕೆ ಆಗಮಿಸುತ್ತಿದ್ದಾರೆ. ಇಂದು ನಾನು ಇಲ್ಲಿರುವುದು ಅದೃಷ್ಟವೇ ಸರಿ.

420 ಮಿಲಿಯನ್ ಭಕ್ತರಿಂದ ಸ್ನಾನ: ಭಾನುವಾರ ಒಂದೇ ದಿನದಂದು 8.429 ಮಿಲಿಯನ್ ಭಕ್ತರು ಪವಿತ್ರ ಸ್ನಾನ ನೆರವೇರಿಸಿದ್ದಾರೆ. ಮಹಾಕುಂಭ ಆರಂಭವಾದಾಗಿನಿಂದ ಇಲ್ಲಿಯವರೆಗೆ 420 ಮಿಲಿಯನ್ ಭಕ್ತರು ಪವಿತ್ರ ಸ್ನಾನ ನಡೆಸಿದ್ದಾರೆ. ಜ.13ರ ಪುಷ್ಯ ಪೂರ್ಣಿಮೆಯಿಂದ ಆರಂಭವಾಗಿರುವ ಮಹಾ ಕುಂಭಮೇಳ. ಜಗತ್ತಿನ ಅತಿದೊಡ್ಡ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕಾರ್ಯವಾಗಿದ್ದು, ಎಲ್ಲೆಡೆಯಿಂದ ಜನರನ್ನು ಆಕರ್ಷಿಸುತ್ತಿದೆ. ಈ ಮಹಾ ಕುಂಭಮೇಳ ಫೆ.26ರಂದು ಮುಕ್ತಾಯವಾಗಲಿದೆ.

ಕಾಂಗ್ರೆಸ್‌ನ ಕೆಲವರು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮಗ್ಗುಲ ಮುಳ್ಳಾಗಿದ್ದಾರೆ!

ಸಿದ್ದರಾಮಯ್ಯ 11 ಕೆವಿಎ ಅಲ್ಲ, 660 ಕೆವಿಎ ಕರೆಂಟ್; ಬಿಜೆಪಿ ಶಾಸಕ ಮುನಿರತ್ನ ಹೇಳಿಕೆ

ಬೆಂಗಳೂರು, ಫೆ.10– ಬಿಜೆಪಿಯ ಬಣ ಬಡಿದಾಟಕ್ಕೆ ಫುಲ್‌ಸ್ಟಾಪ್ ಹಾಕಬೇಕಿದೆ. ಇದು ಹೀಗೆ ಮುಂದುವರೆದರೆ ಮುಂದಿನ ದಿನಗಳಲ್ಲಿ ಕಷ್ಟವಿದೆ. ಕಾಂಗ್ರೆಸ್‌ನಲ್ಲಿ ಅವರವರೇ ಕಿತ್ತಾಡಿಕೊಳ್ಳುತ್ತಿದ್ದಾರೆ. ಆದರೆ ಜನರಿಗೆ ಕಾಂಗ್ರೆಸ್‌ಗಿಂತ ಹೆಚ್ಚಾಗಿ ನಮ್ಮದೇ ಗೊಂದಲ ಎಂಬ ರೀತಿ ಕಾಣಸುತ್ತಿದೆ ಎಂದು ಶಾಸಕ ಮುನಿರತ್ನ ಹೇಳಿದರು.

ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಯಾವುದೇ ಕ್ಷಣದಲ್ಲಿ ರಾಜಕಾರಣದಲ್ಲಿ ಏನು ಬೇಕಾದರೂ ಆಗಬಹುದು. ಮುಡಾ ಹಗರಣವನ್ನು ಸಿಬಿಐಗೆ ಕೊಟ್ಟರೆ ಸಾಕು, ಸಿದ್ದರಾಮಯ್ಯನವರನ್ನು ಸಿಲುಕಿಸಿದರೆ ಸಾಕು ಅಂತ ಕಾಯುತ್ತಾ ಇರುವವರು ಕಾಂಗ್ರೆಸ್‌ನಲ್ಲಿದ್ದಾರೆ. ಕೇಜ್ರಿವಾಲ್ ತರ ಸಿದ್ದರಾಮಯ್ಯನವರು ಅರೆಸ್ಟ್ ಆದರೆ ನಾವು ಸಿಎಂ ಆಗಬಹುದು ಎಂದು ಕಾಯುತ್ತಿದ್ದಾರೆ ಎಂದರು.

ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದರೆ 6 ತಿಂಗಳಲ್ಲಿ ಚುನಾವಣೆ ಬರುತ್ತದೆ. ನಾವು ಅದಕ್ಕೆ ಸಿದ್ಧವಾಗಬೇಕಿದೆ. ಸಿದ್ದರಾಮಯ್ಯನವರು ಬರುವುದಕ್ಕೂ ಮುನ್ನ ಕಾಂಗ್ರೆಸ್ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಗೆ ಹೊರಟು ಹೋಗುತ್ತದೆ. ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಬರುವ ಮುನ್ನ ಆ ಪಕ್ಷದಲ್ಲಿ ವೋಟ್ ತರುವವರೇ



ಇರಲಿಲ್ಲ. ಸಿದ್ದರಾಮಯ್ಯ ಅವರಿಂದಲೇ ಕಾಂಗ್ರೆಸ್ ಬೆಳೆದಿದ್ದು. ಸಿದ್ದರಾಮಯ್ಯ ಹೊರತಾಗಿ ಕಾಂಗ್ರೆಸ್ ಶೂನ್ಯ, ಇಂತಹ ಪರಿಸ್ಥಿತಿಯಲ್ಲಿ ನಾವು ಒಗ್ಗಟ್ಟಾಗಿರಬೇಕು ಎಂದರು.

ನಮ್ಮ ವರಿಷ್ಠರು ರಾಜ್ಯಾಧ್ಯಕ್ಷರು ಯಾರಾಗಬೇಕು ಎಂದು ತೀರ್ಮಾನ ಮಾಡುತ್ತಾರೆ. ನಾವು ನಾವೇ ಕಿತ್ತಾಡೋದು ಸರಿಯಲ್ಲ. ನಾವೆಲ್ಲಾ ಒಟ್ಟಾಗಿ ಹೋಗಬೇಕು. ಆರ್.ಅಶೋಕ್ ಅವರು ನೇತೃತ್ವ ವಹಿಸಿ ಎಲ್ಲರನ್ನೂ ಒಟ್ಟಾಗಿ ಕೂರಿಸಿ, ಚರ್ಚಿಸಿ ಮುನ್ನಡೆಸಬೇಕಾಗಿದೆ. ಅವರು ನಾನು ತಟಸ್ಥವಾಗಿರುತ್ತೇನೆ. ನೀವು ನೀವು ಕಿತ್ತಾಡಿ ಅಂತ ಸುಮ್ಮನೆ ಇದ್ದರೆ ಹೇಗೆ ಅವರು ಎಲ್ಲರನ್ನು ಕರೆಸಿ ಮಾತಾಡಿಸಬೇಕು. ವಿಪಕ್ಷನಾಯಕರಾಗಿದ್ದು ಅಶೋಕ್ ಅವರಿಗೆ ಜವಾಬ್ದಾರಿ ಇದೆ. ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ಕೆಲಸ ಮಾಡಬೇಕು. ಅವರ ಮಾತನ್ನು ಯತ್ನಾಳ್, ರಮೇಶ್ ಜಾರಕಿಹೊಳಿ ಕೂಡಾ ಕೇಳ್ತಾರೆ ಎಂದು ಶಾಸಕ ಮುನಿರತ್ನ ಹೇಳಿದರು.

ಡಾ.ಸುಧಾಕರ್ ಬಿಜೆಪಿಯಲ್ಲೇ ಇರ್ತಾರೆ: ಬಿಜೆಪಿ ರಾಜ್ಯಾಧ್ಯಕ್ಷರ ಘೋಷಣೆ ಆದ ಮೇಲೆ ಮೊದಲನೆಯದಾಗಿ ಸಂಸದ ಡಾ.ಸುಧಾಕರ್ ಅವರನ್ನು ಸಂಪರ್ಕಿಸಿ ಸಲಹೆ ಪಡೆಯಿರಿ ಎಂದು ನಾನೇ ಹೇಳಿದ್ದೇನೆ. ಸುಧಾಕರ್ ಅವರು ಕಾಂಗ್ರೆಸ್‌ಗೆ ಹೋಗುವ ಪ್ರಶ್ನೆಯೇ ಇಲ್ಲ. ಬಿಜೆಪಿಯಲ್ಲಿ ಇದ್ದುಕೊಂಡೇ ಉತ್ತಮ ಕೆಲಸ ಮಾಡುತ್ತಿದ್ದಾರೆ. ಅಮಿತ್ ಶಾ, ಮೋದಿ ಜೀ ಜೊತೆ ಚೆನ್ನಾಗಿದ್ದಾರೆ. ರಾಜ್ಯಕ್ಕೆ ಉತ್ತಮ ಕೊಡುಗೆ ನೀಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಾರೆ ಎಂದು ಸುಧಾಕರ್ ಪರವಾಗಿ ಮಾತಾಡಿದರು.

> **“ಸಿದ್ದರಾಮಯ್ಯನವರು ಕಾಂಗ್ರೆಸ್‌ನಿಂದ ಆಚೆ ಹೋದರೆ ಪರಿಣಾಮ ಏನಾಗುತ್ತದೆ ಅನ್ನೋದು ಅವರ ನಾಯಕರಿಗೆ ಗೊತ್ತಿಲ್ಲ. ಅವರೇನು 11 ಕೆವಿ ಕರೆಂಟಲ್ಲ. ಅದು 660 ಕೆವಿಎ ಕರೆಂಟ್. ಅದನ್ನು ಮುಟ್ಟೋದು ಅಷ್ಟು ಸುಲಭ ಅಲ್ಲ. ಅದನ್ನು ಮುಟ್ಟಿ ಗೆಲ್ತೀವಿ, ಚಲಾವಣೆ ಆಗ್ತೀವಿ ಅಂದುಕೊಂಡರೆ ಅದು ಭ್ರಮೆ. ಸಿದ್ದರಾಮಯ್ಯನವರ ಜೊತೆ 5 ವರ್ಷ ಕೆಲಸ ಮಾಡಿದ್ದೇನೆ. ಅವರ ಒಡನಾಟ ಇಟ್ಟುಕೊಂಡಿದ್ದೇನೆ. ಅವರ ಮನಸ್ಥಿತಿ ಗೊತ್ತಿದೆ. ಅವರ ಶಕ್ತಿ ನೋಡಿದ್ದೇನೆ. ಇವತ್ತು ಅವರು 2 ಗಂಟೆಗೆ ಭಾಷಣಕ್ಕೆ ಬರ್ತಾರೆ ಅಂದರೆ 6 ಗಂಟೆವರೆಗೆ ಜನ ಕಾಯ್ತಾರೆ. ಅವರ ಒಂದು ಕರೆಗೆ 10 ಲಕ್ಷ ಜನ ಸೇರ್ತಾರೆ. ಅಂತಹ ಶಕ್ತಿ ಇರುವವರು ಕಾಂಗ್ರೆಸ್‌ನಲ್ಲಿ ಇನ್ಯಾರಿದ್ದಾರೆ ಹೇಳಿ.**
> **–ಮುನಿರತ್ನ, ಶಾಸಕ**

ಸೀವೆಜ್ ಫಾರಂಗೆ ಬೆಂಕಿ: ನಗರಪಾಲಿಕೆ ಅಧಿಕಾರಿಗಳು, ಗುತ್ತಿಗೆದಾರನ ನಿರ್ಲಕ್ಷ್ಯ

ಮಾಜಿ ಮೇಯರ್ ಶಿವಕುಮಾರ್ ಗಂಭೀರ ಆರೋಪ

ಮೈಸೂರು,ಫೆ.10(ಆರ್‌ಕೆ)– ಮೈಸೂರಿನ ವಿದ್ಯಾರಣ್ಯಪುರಂನ ಸೀವೆಜ್ ಫಾರಂಗೆ ಬೆಂಕಿ ಬಿದ್ದು ನೂರಾರು ಟನ್ ಘನತ್ಯಾಜ್ಯ ಸುಟ್ಟು ಹೋಗಿದೆ. ಈ ವೇಳೆ ಭಾರಿ ಹೊಗೆಯಿಂದ ಪರಿಸರಕ್ಕೆ ಹಾನಿಯಾಗಿದೆ. ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು ಹಾಗೂ ತ್ಯಾಜ್ಯ ವಿಲೇವಾರಿ ಗುತ್ತಿಗೆದಾರನ ನಿರ್ಲಕ್ಷ್ಯವೇ ಕಾರಣ ಎಂದು ಮಾಜಿ ಮೇಯರ್ ಎಂ.ಶಿವಕುಮಾರ್ ಆರೋಪ ಮಾಡಿದ್ದಾರೆ.



ಎಂ.ಶಿವಕುಮಾರ್

ಸೀವೆಜ್ ಫಾರಂನಲ್ಲಿ ಶೇಖರಣೆಯಾಗಿರುವ ಘನತ್ಯಾಜ್ಯವನ್ನು ಬೇರ್ಪಡಿಸಿ ವೈಜ್ಞಾನಿಕವಾಗಿ ವಿಲೇ ಮಾಡುವ ಸಲುವಾಗಿ ಕೇಂದ್ರ ಸರ್ಕಾರದ ಎಸ್‌ಡಬ್ಲ್ಯೂಎಂ ಯೋಜನೆಯಡಿ 63 ಕೋಟಿ ರೂ.ಗಳಿಗೆ ಗುತ್ತಿಗೆ ನೀಡಿದೆ. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಭೂವಿಜ್ಞಾನ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಕಸ ವಿಲೇವಾರಿ ಪ್ರಕ್ರಿಯೆ ಆರಂಭಿಸಿರುವ ಗುತ್ತಿಗೆದಾರ, ಇಲಾಖೆಗಳ ಷರತ್ತಿನಂತೆ ಎಲ್ಲಾ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದರೆ ಬೆಂಕಿ ಬೀಳುತ್ತಿರಲಿಲ್ಲ ಎಂದು ತಿಳಿಸಿದ್ದಾರೆ.

ಅಗತ್ಯ ಸುರಕ್ಷತಾ ಕ್ರಮ ಕೈಗೊಂಡು ಹಸಿ ಕಸವನ್ನು ಬೇರ್ಪಡಿಸಿ ಕಾಂಪೋಸ್ಟ್ ಗೊಬ್ಬರ, ಒಣ ಕಸ ಮರು ಬಳಕೆ ವಸ್ತುವನ್ನಾಗಿ ಪರಿವರ್ತಿಸಬೇಕೆಂಬ ಕಾರಣಕ್ಕೆ ಗುತ್ತಿಗೆದಾರನಿಗೆ 63 ಕೋಟಿ ರೂ.ಗೆ ಟೆಂಡರ್ ನೀಡಲಾಗಿದೆ. ಅಧಿಕಾರಿಗಳು ಹಾಗೂ ಗುತ್ತಿಗೆದಾರನ ನಿರ್ಲಕ್ಷ್ಯದಿಂದಾಗಿ ಬೆಂಕಿ ಹೊತ್ತಿ ಉರಿದಿದೆ. ನೂರಾರು ಟನ್ ಕಸ ಭಸ್ಮವಾಗಿದೆ. ಭಾರಿ ಹೊಗೆಯಿಂದ ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಗುತ್ತಿಗೆದಾರನನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಅದರ ಮೇಲ್ವಿಚಾರಣೆ ನಡೆಸದೇ ತಾತ್ಸಾರ ತೋರಿರುವ ಪಾಲಿಕೆ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಮುಂದೆ ಇಂತಹ ಘಟನೆಗಳು ನಡೆಯದಂತೆ ಎಚ್ಚರ ವಹಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಅಭಿನಂದನೆ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದ ಪಡುವಾರಹಳ್ಳಿ ಎಂ.ರಾಮಕೃಷ್ಣ ಅವರನ್ನು ನಗರಪಾಲಿಕೆ ಮಾಜಿ ಸದಸ್ಯರಾದ ಗುರುವಿನಾಯಕ, ಎಂ.ಮಹೇಶ್, ಅನಿಲ್, ಚಾಮರಾಜ ಕ್ಷೇತ್ರದ ಎಸ್‌ಟಿ ಮೋರ್ಚಾ ಅಧ್ಯಕ್ಷ ಮಹೇಶ್, ಶಿವಣ್ಣ ಅಭಿನಂದಿಸಿದರು.

ಫೆ.15ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಮೈಸೂರು ಜಿಲ್ಲಾ ಪ್ರವಾಸ



ಮೈಸೂರು,ಫೆ.10– ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಫೆ.15ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಫೆ.15ರಂದು ಬೆಳಗ್ಗೆ 10 ಗಂಟೆಗೆ ಸರ್ಕಾರಿ ಅತಿಥಿ ಗೃಹ ಮೈಸೂರು ಇಲ್ಲಿ ಜಿಲ್ಲಾ ಕನ್ನಡಪರ ಸಂಘಟನೆ ಹಾಗೂ ಹೋರಾಟಗಾರರೊಂದಿಗೆ ಸಭೆ ನಡೆಸುವರು. ಬೆಳಗ್ಗೆ 11 ಗಂಟೆಗೆ ಮೈಸೂರು ಡಿಸಿ ಕಚೇರಿಯಲ್ಲಿ ಕನ್ನಡ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 1 ಗಂಟೆಗೆ ಡಿಸಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ಹಮ್ಮಿಕೊಂಡಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ.

ಮೈಕ್ರೋ ಫೈನಾನ್ಸ್ ಹಾವಳಿಯಿಂದ ದಿಕ್ಕೆಟ್ಟ ರೈತ ಕುಟುಂಬಗಳಿಗೆ ರೈತ ಮುಖಂಡರ ಅಭಯ

ಮೈಸೂರು, ಫೆ.10(ಎಂಕೆ)– ಮೈಕ್ರೋ ಫೈನಾನ್ಸ್ ಕಂಪನಿಯೊಂದರ ಹಾವಳಿಯಿಂದ ಮನೆ ತೊರೆದಿದ್ದ ಕುಟುಂಬಸ್ಥರನ್ನು ವಾಪಸ್ ಕರೆಸಿ ಧೈರ್ಯ ತುಂಬಿದ ರೈತ ಮುಖಂಡರು, ಮನೆ ಗೋಡೆ ಮೇಲೆ ಬರೆದಿದ್ದ ಅಕ್ಷರಗಳಿಗೆ ಬಿಳಿ ಬಣ್ಣ ಬಳಿದ ಘಟನೆ ನಡೆಯಿತು.

ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮಕ್ಕೆ ಸೋಮವಾರ ಭೇಟಿ ನೀಡಿದ ರೈತ ಮುಖಂಡರು, ಮೈಕ್ರೋ ಫೈನಾನ್ಸ್‌ನಿಂದ ಮನೆ ತೊರೆದಿದ್ದ 62 ವರ್ಷದ ಕೃಷಿಕ ವೃದ್ಧರನ್ನು ವಾಪಸ್ ಕರೆಸಿ, ಮನೆಯಲ್ಲೇ ಇರುವಂತೆ ಧೈರ್ಯ ಹೇಳಿದರು. ಅಲ್ಲದೆ ಸಾಲ ಮರುಪಾವತಿ ಮಾಡುವಂತೆ ಮನೆ ಗೋಡೆ ಮೇಲೆ ಕಪ್ಪು ಬಣ್ಣದಲ್ಲಿ ಬರೆದಿದ್ದ ಅಕ್ಷರಗಳಿಗೆ ಬಿಳಿ ಬಣ್ಣ ಬಳಿದು, ಇದೇ ರೀತಿ ರೈತರಿಗೆ ಕಿರುಕುಳ




ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಯೊಂದರಿಂದ ನೊಂದ ಕುಟುಂಬಕ್ಕೆ ರೈತ ಮುಖಂಡರು ಧೈರ್ಯ ತುಂಬುತ್ತಿರುವುದು.

ನೀಡಿದರೆ, ರೈತ ಸಂಘಟನೆಯಿಂದ ಮೈಕ್ರೋ ಫೈನಾನ್ಸ್ ಕಂಪನಿಯನ್ನು ಮುಟ್ಟಿಗೊಲು ಹಾಕಿಕೊಳ್ಳುತ್ತೇವೆ ಎಂಬ ಎಚ್ಚರಿಕೆ ನೀಡಲಾಯಿತು. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ ರೈತ ಮುಖಂಡ ಮಂಜು ಕಿರಣ್, ಹುಲ್ಲಹಳ್ಳಿ ಗ್ರಾಮದ 62 ವರ್ಷದ ವೃದ್ಧರಿಗೆ ಮೈಕ್ರೋ ಫೈನಾನ್ಸ್ ಕಂಪನಿಯೊಂದು ಅವರ ಮನೆಯನ್ನು ಅಡಮಾನ ಇಟ್ಟುಕೊಂಡು 4.24 ಲಕ್ಷ ರೂ. ಸಾಲ ನೀಡಿದೆ. ಮೂರು ಕಂತು ಸಾಲ ಕಟ್ಟಿಲ್ಲ ಎಂದೇಳಿ ಮನೆ ಜಪ್ತಿ ಮಾಡಲಾಗುವುದು ಎಂದು ಮನೆಯ ಗೋಡೆ ಮೇಲೆ ಕಪ್ಪು ಬಣ್ಣದಿಂದ ಬರೆದಿದ್ದಾರೆ. ಇದರಿಂದ ಭಯಭೀತಿಗೊಂಡು ಕುಟುಂಬ ಸಮೇತ ಮನೆ ತೊರೆದು ಕೊಡಗಿನ ಕಾಫಿ ತೋಟದಲ್ಲಿ ಕೂಲಿ ಕೆಲಸಕ್ಕೆ ಸೇರಿಕೊಂಡು. ಅಲ್ಲಿ ಮೋಟರ್ ಮನೆಗಳಲ್ಲಿ ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ಬದುಕುತ್ತಿದ್ದರು. ಅವರನ್ನು ವಾಪಸ್ ಕರೆಸಿ, ಧೈರ್ಯ ತುಂಬಿ ಮನೆಯಲ್ಲೇ ವಾಸವಾಗಿರುವಂತೆ ತಿಳಿಸಿದ್ದೇವೆ. ಗ್ರಾಮೀಣ ಪ್ರದೇಶಲ್ಲಿ ಕುಟುಂಬಕ್ಕೆ ಆಧಾರವಾಗಿರುವ ಹಾಗೂ ಕೃಷಿಯೇ ಮೂಲ ಆದಾಯವಾಗಿರುವುದರಿಂದ ಮನೆ ಜಪ್ತಿ ಮಾಡುವುದು ಕಾನೂನು ಉಲ್ಲಂಘನೆಯಾಗಿದೆ ಎಂದರು.

ಪ್ರೊಎಂಡಿಎನ್ ಹಾದಿಯಲ್ಲಿ ಹೋರಾಟ: ಪ್ರೊ.ಎಂಡಿಎನ್ ಅವರ ನೇರ ಹೋರಾಟದ ಹಾದಿಯಲ್ಲಿ ಮೈಕ್ರೋ ಫೈನಾನ್ಸ್‌ಗಳ ರೈತ ಸಂಘಟನೆಗಳು ಹೋರಾಟ ನಡೆಸಲಿವೆ. ಮನೆ ಹರಾಜು ಮಾಡುತ್ತೇವೆ ಎಂದು ಕಪ್ಪು ಬಣ್ಣದಲ್ಲಿ ಬರೆದಿದ್ದ ಅಕ್ಷರಗಳ ಮೇಲೆ ಬಣ್ಣ ಬಳಿಯುತಿದ್ದು, ಮುಂದಿನ ದಿನಗಳಲ್ಲಿ ಮೈಕ್ರೋ ಫೈನಾನ್ಸ್ ಕಂಪನಿಗಳು ಗ್ರಾಮೀಣ ಭಾಗದಲ್ಲಿರುವ ಕೃಷಿ ಸಂಬಂಧಿತ ಕುಟುಂಬಗಳ ಮನೆಯ ಮೇಲೆ ಇಂತಹ ಕೃತ್ಯಕ್ಕೆ ಕೈ ಹಾಕಿದರೆ ಮೈಕ್ರೋ ಫೈನಾನ್ಸ್ ಕಚೇರಿ ಮೇಲೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು. ರೈತ ಮುಖಂಡರಾದ ಸಿದ್ದಲಿಂಗಪುರ ಮೋಹನ್, ಗಳಿಗರ ಹುಂಡಿ ವೆಂಕಟೇಶ್ ಹಾಗೂ ಹುಲ್ಲಹಳ್ಳಿ ಹೋಬಳಿಯ ರೈತ ಪ್ರಮುಖರಾದ ಸತೀಶ್, ಚಿಕ್ಕಣ್ಣ, ರತ್ನಮ್ಮ ಹಾಗೂ ಮಹೇಶ್ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.02.2025 ಮಂಗಳವಾರ, ಮಳೆ ನಕ್ಷತ್ರ: ಧನಿಷ್ಠ 06.02.2025 ರಿಂದ 18.02.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಥೈರಾಯಿಡ್ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.
- **ಶ್ರೀ ಮಂಟೇಸ್ವಾಮಿ, ಶ್ರೀ ರಾಚಪ್ಪಾಜಿ, ಶ್ರೀ ದೊಡ್ಡಮ್ಮ ತಾಯಿ, ಶ್ರೀ ಚೆನ್ನಾಜಮ್ಮ ತಾಯಿ, ಶ್ರೀ ಘನನೀಲ ಸಿದ್ದಪ್ಪಾಜಿ ಹಾಗೂ ಶ್ರೀ ಸುಬ್ರಮಣ್ಯ ಸ್ವಾಮಿ ದೇವಸ್ಥಾನ:** ಶ್ರೀ ಶ್ರೀ ಘನನೀಲ ಸಿದ್ದಪ್ಪಾಜಿ ದೇವಸ್ಥಾನದ 9ನೇ ವರ್ಷದ ವಾರ್ಷಿಕೋತ್ಸವ ಹಾಗೂ 21ನೇ ವರ್ಷದ ಕಂಡಾಯ ಉತ್ಸವ, ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿಶ್ವಕರ್ಮ ಕಾಲೋನಿ, ಗಾಯತ್ರಿಪುರಂ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಚರ್ಮರೋಗಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.
- **ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಟೆಂಪಲ್ ಟ್ರಸ್ಟ್ :** 59ನೇ ವರ್ಷದ ತೈಪೂಸಂ ಮಹೋತ್ಸವ–2025 ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಶ್ರೀ ದುರ್ಗಾ ನೃತ್ಯ ಅಕಾಡೆಮಿ ಚಾರಿಟಬಲ್ ಟ್ರಸ್ಟ್‌ನ ಶ್ರೀ ವಿದ್ಯಾರಾವ್ ಅವರಿಂದ ನೃತ್ಯ ಪ್ರದರ್ಶನ, ಸ್ಥಳ: ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ವಿಶ್ವೇಶ್ವರನಗರ.
- **ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಕಬೀರ್ ರಸ್ತೆ, ಮಂಡಿ ಮೊಹಲ್ಲಾ, ಬೆಳಗ್ಗೆ 9.30 ರಿಂದ.
- **ಶ್ರೀ ಎಲ್ಲಮ್ಮತಾಯಿ ಅಮ್ಮನವರ ದೇವಸ್ಥಾನ:** ಭರತ ಹುಣ್ಣಿಮೆ ಅಂಗವಾಗಿ ಶ್ರೀ ಎಲ್ಲಮ್ಮತಾಯಿ ಅಮ್ಮನವರ 21ನೇ ವರ್ಷದ ಪೂಜಾ ಮಹೋತ್ಸವ, ಸಂಜೆ 6ಕ್ಕೆ ಗೋಧೂಳಿ ಮುಹೂರ್ತದಲ್ಲಿ ಗಂಗಾ ಪೂಜೆಯೊಂದಿಗೆ ಸೀತಾರಾಮರಾವ್ ರಸ್ತೆಯಲ್ಲಿರುವ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದಿಂದ ಅಮ್ಮನವರ ಕಳಸವನ್ನು ವೀರಭದ್ರ ಕುಣಿತ ಮಂಗಳವಾದ್ಯ, ಶ್ರೀ ಅಮ್ಮನವರ ಶ್ರೀ ರಾಜರಾಜೇಶ್ವರಿ ನಿಲಯ ಮನೆಗೆ ತರುವುದು, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಮಾನುಜ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 5.50 ಶ್ರದ್ಧೆಯ ಶಿಲ್ಪ– ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ. ವೈ. ಪುಟ್ಟಿ, ಎಂ.ಎ. ಶೋಭಾ, ಟಿ.ಎಸ್. ಸ್ನೇಹಾ, ವ್ಯಾಖ್ಯಾನ–ಡಾ. ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 8.30 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ರಾಘವೇಂದ್ರ– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್, ಚೈತ್ರಿಕಾ. ಎಸ್ ಹಾಗೂ ಕಾರ್ತಿಕ್. ಎಂ.ಎಸ್.

ಮಧ್ಯಾಹ್ನ: 12.05 ವನಿತಾ ವಿಹಾರ–ಸ್ತ್ರೀಚೇತನ–ಕನ್ನಡದ ಕವಯತ್ರಿ, ಅಂಕಣಕಾರ್ತಿ ಹಾಗೂ ಕನ್ನಡದ ಅಧ್ಯಾಪಕಿ ಜ್ಯೋತಿ ಗುರುಪ್ರಸಾದ್ ಅವರೊಂದಿಗೆ ಮಾತುಕತೆ, ಪ್ರಸ್ತುತಿ : ಅಬ್ದುಲ್ ರಶೀದ್, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ – ನಾಟಕರಂಗದ ಇಂದಿನ ಸ್ಥಿತಿಗತಿಗಳು, ಮಾತನಾಡುತ್ತಾರೆ–ಆಲೂರು ದೊಡ್ಡನಿಂಗಪ್ಪ, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಾಂಬೆ ಜಯಶ್ರೀ–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ–ಭಕ್ತ ಜಯದೇವ, ಪ್ರಸ್ತುತಿ: ವಿದ್ವಾನ್. ಆರ್.ಗುರುರಾಜುಲು ನಾಯ್ಡು, 6.10 ಕ್ಯಾನ್ಸರ್‌ನ ಮಿಥ್ಯೆಗಳು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 6.50 ಕೃಷಿರಂಗ–ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಾವಯವ ಬೇಸಾಯ ಮತ್ತು ನೇರ ಮಾರಾಟ ಕುರಿತು ಸಂವಾದ. ಭಾಗವಹಿಸುತ್ತಾರೆ– ಮೈಸೂರು ತಾಲೂಕು ಗದ್ದಿಗೆ ಗ್ರಾಮದ ಎಂ. ಆರ್. ವೇಣುಗೋಪಾಲ್ ಮತ್ತು ಇನಾಂ ಉತ್ತನಹಳ್ಳಿ ಗ್ರಾಮದ ಥಾಮಸ್ ದೇವಾಸಿಯಾ ಕೊನ್ನಕಲ್, ಪ್ರಸ್ತುತಿ : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಸಂಸದ್ ಸಮೀಕ್ಷಾ, 8.15 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಅಬ್ದುಲ್ ಲತೀಫ್ ಖಾನ್ – ಸಾರಂಗಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಭರತ್ ಸುಂದರ್ – ಹಾಡುಗಾರಿಕೆ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಬೆಂಗಳೂರಲ್ಲಿ ಏರ್ ಶೋ 2025ಕ್ಕೆ ರಾಜನಾಥ್‌ಸಿಂಗ್ ಚಾಲನೆ

ಬೆಂಗಳೂರಲ್ಲಿ ವಿಮಾನ, ಹೆಲಿಕಾಪ್ಟರ್ ತಯಾರಿಕೆ ಪ್ರೋತ್ಸಾಹಿಸುವಂತೆ ರಕ್ಷಣಾ ಸಚಿವರಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ





ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಏರೋ ಇಂಡಿಯಾದ ಏರ್ ಶೋ-2025ರ ಉದ್ಘಾಟನೆ ಮಾಡಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್ ಇದ್ದರು.







ಬೆಂಗಳೂರು, ಫೆ.10(ಕೆಎಂಶಿ)–ಏರೋಸ್ಪೇಸ್ ಉದ್ಯಮದಲ್ಲಿ ಬೆಂಗಳೂರು ಅತ್ಯುತ್ತಮ ಪ್ರತಿಭೆಗಳನ್ನು ಹೊಂದಿದ್ದು, ವಿಮಾನ ಮತ್ತು ಹೆಲಿಕಾಪ್ಟರ್ ತಯಾರಕರಿಗೆ ಪ್ರೋತ್ಸಾಹ ನೀಡುವ ಮೂಲಕ ಪ್ರತಿಭಾ ಪಲಾಯನ ತಡೆಗಟ್ಟಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಮನವಿ ಮಾಡಿದ್ದಾರೆ.

ನಗರದಲ್ಲಿ ಆರಂಭವಾದ ಏರೋ ಇಂಡಿಯಾದ ಏರ್ ಶೋ–2025ರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ರಕ್ಷಣಾ ಸಚಿವ ರಾಜನಾಥ್‌ಸಿಂಗ್, ಕರ್ನಾಟಕದಲ್ಲಿ ಏರೋಸ್ಪೇಸ್ ಉದ್ಯಮ ಸ್ಥಾಪನೆ ಹಾಗೂ ವಿಮಾನ ಮತ್ತು ಹೆಲಿಕಾಪ್ಟರ್‌ಗಳ ತಯಾರಕರನ್ನು ಬೆಂಗಳೂರಿನ ಕಡೆಗೆ ಗಮನಹರಿಸುವಂತೆ ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರು. ಭಾರತದ ತಾಂತ್ರಿಕ ಮತ್ತು ಕೈಗಾರಿಕಾ ಪ್ರಗತಿಯಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ, ವಿಶ್ವ ದರ್ಜೆಯ ಸಂಶೋಧನಾ ಸಂಸ್ಥೆ ಹಾಗೂ ಅತ್ಯಾಧುನಿಕ ಏರೋಸ್ಪೇಸ್ ಕಂಪನಿಗಳ ಕೌಶಲ ಪೂರ್ಣ ಕಾರ್ಯಪಡೆಯನ್ನೇ ಹೊಂದಿದೆ.

ದೇಶದ ಒಟ್ಟು ದೇಶೀಯ ಉತ್ಪನ್ನ, ಕೈಗಾರಿಕಾ ಬೆಳವಣಿಗೆ ಮತ್ತು ಹೂಡಿಕೆಯ ಒಳಹರಿವು ಸೇರಿದಂತೆ ಪ್ರಮುಖ ಆರ್ಥಿಕ ಕ್ಷೇತ್ರಗಳಲ್ಲಿ ಕರ್ನಾಟಕ ಅಗಾಧ ಬೆಳವಣಿಗೆ ಕಂಡಿದೆ. ಕೈಗಾರಿಕಾ ನೀತಿ ಪೋಷಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದರು. ಏರೋ ಇಂಡಿಯಾ ಪ್ರದರ್ಶನ ಮೊದಲ ಬಾರಿಗೆ 1996ರಲ್ಲಿ ಪ್ರಾರಂಭವಾಗಿ ಏರೋಸ್ಪೇಸ್ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಭಾರತದ ಸಾಮರ್ಥ್ಯ ಬೆಳೆಯುತ್ತಿರುವುದಕ್ಕೆ ಸಾಕ್ಷಿ ಮತ್ತು ಅಂತರರಾಷ್ಟ್ರೀಯ ಪಾಲುದಾರಿಕೆಗಳನ್ನು ಬೆಳೆಸುವ ವೇದಿಕೆಯಾಗಿದೆ. ಏರೋಸ್ಪೇಸ್ ನೀತಿ ಘೋಷಿಸಿದ ಮೊದಲ ರಾಜ್ಯ ಕರ್ನಾಟಕ ದೇವನಹಳ್ಳಿ ಬಳಿ ಏರೋಸ್ಪೇಸ್ ಕಂಪನಿಗಳಿಗಾಗಿ ಒಂದು ಸಾವಿರ ಎಕರೆ ಮೀಸಲಿಟ್ಟು ಏರೋಸ್ಪೇಸ್ ಪಾರ್ಕ್ ಸ್ಥಾಪಿಸಿದೆ. ಅಂತರರಾಷ್ಟ್ರೀಯ ಮಟ್ಟಕ್ಕೆ ಏರೋಸ್ಪೇಸ್ ಉದ್ಯಮ ಕೊಂಡೊಯ್ಯಲು ಬೆಂಗಳೂರು ಉತ್ತಮ ನಗರವಾಗಿದೆ. ಅಲ್ಲದೆ, ವ್ಯಾಪಾರ ಒಪ್ಪಂದ, ಉದ್ದಿಮೆಗಳ ಉತ್ಪನ್ನಗಳ ಪರೀಕ್ಷೆಗೆ ಸೂಕ್ತ ಸ್ಥಳವಾಗಿದೆ. ಏರೋಸ್ಪೇಸ್ ಭವಿಷ್ಯ ರೂಪುಗೊಳ್ಳುತ್ತಿರುವ ಸ್ಥಳವಾಗಿದೆ ಎಂದರು.

ಭಾರತದ ಏರೋಸ್ಪೇಸ್ ರಾಜಧಾನಿ ಬೆಂಗಳೂರು, ಉತ್ಪಾದನೆ ಮತ್ತು ರಕ್ಷಣಾ ಸಂಶೋಧನೆಯಲ್ಲಿ ಶೇ.60 ಕ್ಕಿಂತ ಹೆಚ್ಚು ಕೊಡುಗೆ ನೀಡುವ ರಾಜ್ಯವಾಗಿದೆ. ಎಚ್‌ಎಎಲ್, ಇಸ್ರೋ ಮತ್ತು ಬೋಯಿಂಗ್ ಇಂಡಿಯಾ ಸಂಸ್ಥೆಗಳು ಭಾರತದ ರಕ್ಷಣಾ ಮತ್ತು ಬಾಹ್ಯಾಕಾಶ ಸಾಮರ್ಥ್ಯಕ್ಕೆ ಸಾಕಷ್ಟು ಕೊಡುಗೆ ನೀಡಿವೆ. ಬೆಂಗಳೂರು ಏರೋಸ್ಪೇಸ್ ವಲಯದಲ್ಲಿ 1,50,000ಕ್ಕೂ ಜನ ಉದ್ಯೋಗದಲ್ಲಿದ್ದಾರೆ. ವಿದೇಶಿ ಹೂಡಿಕೆ ಆಕರ್ಷಿಸುವಲ್ಲಿ ಹಾಗೂ ಜಾಗತಿಕ ಏರೋಸ್ಪೇಸ್ ನಗರಗಳಲ್ಲಿ ಬೆಂಗಳೂರು ಮೂರನೇ ಸ್ಥಾನ ಪಡೆದಿದೆ.

ಕರ್ನಾಟಕ ಸರ್ಕಾರ ಬೆಂಗಳೂರು, ಬೆಳಗಾವಿ, ಮೈಸೂರು, ತುಮಕೂರು ಮತ್ತು ಚಾಮರಾಜನಗರಗಳಲ್ಲಿ ಏರೋಸ್ಪೇಸ್ ಮತ್ತು ರಕ್ಷಣಾ ಕೇಂದ್ರಗಳನ್ನು ಅಭಿವೃದ್ಧಿಪಡಿಸುತ್ತಿದೆ.

ವಾಣಿಜ್ಯ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಕ್ರಾಂತಿ ಮಾಡುತ್ತಿರುವ ಡ್ರೋನ್ ತಂತ್ರಜ್ಞಾನ ಮತ್ತು ಮಾನವರಹಿತ ವೈಮಾನಿಕ ತಂತ್ರಜ್ಞಾನದ ರೂವಾರಿಯಾಗಿ ಬೆಂಗಳೂರು ಬೆಳೆಯುತ್ತಿದೆ.

ಭಾರತದ ಅತಿ ಹೆಚ್ಚು ಸಾಫ್ಟ್‌ವೇರ್ ಕಂಪನಿಗಳನ್ನು ಹೊಂದಿದ ಬೆಂಗಳೂರನ್ನು ದೇಶದ ಸಿಲಿಕಾನ್ ಸಿಟಿ ಎನ್ನುತ್ತಾರೆ. ನಗರದಲ್ಲಿ 21 ಎಂಜಿನಿಯರಿಂಗ್ ಕಾಲೇಜುಗಳಿವೆ. ವಿಶ್ವದ ಯಾವುದೇ ನಗರಗಳಿಗೆ ಹೋಲಿಸಿದರೆ ಮೊದಲ ಸ್ಥಾನದಲ್ಲಿ ನಿಲ್ಲುತ್ತೇವೆ. ಬೆಂಗಳೂರಿನ ವಿಶಿಷ್ಟ ಪರಿಸರ, ಪ್ರತಿಭೆ ಬಳಸಿಕೊಳ್ಳುವ, ಬೆಳೆಸುವ, ಕನಸು ನನಸು ಮಾಡುವ ಸ್ಥಳವಾಗಿದೆ. ಅಮೆರಿಕ, ಫ್ರಾನ್ಸ್, ರಷ್ಯಾದೊಂದಿಗಿನ ಪಾಲುದಾರಿಕೆ ಮೂಲಕ ಭಾರತದ ಏರೋಸ್ಪೇಸ್ ಉದ್ಯಮವು ಬೆಳೆಯುತ್ತಿದೆ. ಬೆಂಗಳೂರು ಏರ್ ಶೋ ಬಾಹ್ಯಾಕಾಶದಲ್ಲಿ ಭಾರತದ ಶಕ್ತಿ, ಪ್ರಗತಿ ಮತ್ತು ನಾಯಕತ್ವದ ಸಂಕೇತ, ಬಾಹ್ಯಾಕಾಶ ಮತ್ತು ರಕ್ಷಣಾ ಹೂಡಿಕೆದಾರರು, ಉದ್ಯಮಿ ಗಳ ಮೊದಲ ಆಯ್ಕೆ ಕರ್ನಾಟಕವಾಗಬೇಕು ಎಂದು ಮನವಿ ಮಾಡಿದರು.

ಮೈಸೂರಲ್ಲಿ ಸೆರೆ ಹಿಡಿದು ಭದ್ರ ಅಭಯಾರಣ್ಯಕ್ಕೆ ಬಿಟ್ಟಿದ್ದ ಹುಲಿ ಅನುಮಾನಾಸ್ಪದ ಸಾವು

ಹಾಸನ: ಮೂರು ವರ್ಷ ಪ್ರಾಯದ ಗಂಡು ಹುಲಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ ಘಟನೆ ಹಾಸನದ ಬೇಲೂರು ತಾಲೂಕಿನ ರಾಮದೇವರಹಳ್ಳದ ಬಳಿ ನಡೆದಿದೆ.

ಹುಲಿಯನ್ನು ಕೆಲ ದಿನಗಳ ಹಿಂದೆ ಮೈಸೂರಿನಲ್ಲಿ ಸೆರೆ ಹಿಡಿಯಲಾಗಿತ್ತು. ಬಳಿಕ ರೇಡಿಯೋ ಕಾಲರ್ ಅಳವಡಿಸಿ ಚಿಕ್ಕಮಗಳೂರು ಜಿಲ್ಲೆಯ ಭದ್ರ ಅಭಯಾರಣ್ಯಕ್ಕೆ ಬಿಡಲಾಗಿತ್ತು.

ಸೋಮವಾರ (ಫೆ.10) ಹಳ್ಳದ ನೀರಿನಲ್ಲಿ ಕೊಳೆತ ಸ್ಥಿತಿಯಲ್ಲಿ ಹುಲಿಯ ಮೃತದೇಹ ಸ್ಥಳೀಯರಿಗೆ ಕಾಣಿಸಿದೆ. ಕೂಡಲೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಹುಲಿಯ ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಹಳೇಬೀಡು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಯತ್ನಾಳ್‌ಗೆ ಬಿಜೆಪಿ ಹೈಕಮಾಂಡ್ ಶಿಸ್ತು ಸಮಿತಿಯಿಂದ ನೋಟಿಸ್

ನವದೆಹಲಿ, ಫೆ.10– ಕರ್ನಾಟಕದ ಬಿಜೆಪಿ ನಾಯಕರ ವಿರುದ್ಧ ತಮ್ಮ ಟೀಕಾಸ್ತ್ರವನ್ನು ಸತತವಾಗಿ ಪ್ರಯೋಗಿಸುತ್ತಲೇ ಬಂದಿರುವ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಬಿಜೆಪಿ ಹೈಕಮಾಂಡ್‌ನ ಶಿಸ್ತು ಪಾಲನಾ ಸಮಿತಿ ನೋಟಿಸ್ ಜಾರಿ ಮಾಡಿದೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಇನ್ನಿತರ ನಾಯಕರ ವಿರುದ್ಧ ಬಹಿರಂಗವಾಗಿ ಆರೋಪಗಳನ್ನು ಮಾಡುತ್ತಿರುವ ಯತ್ನಾಳ್ ಅವರು ನೋಟಿಸ್ ತಲುಪಿದ 78 ಗಂಟೆಗಳೊಳಗೆ ಶಿಸ್ತು ಸಮಿತಿ ಮುಂದೆ ಹಾಜರಾಗಿ ಉತ್ತರಿಸಬೇಕೆಂದು ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿಯೂ ಯತ್ನಾಳ್ ಅವರಿಗೆ ಶಿಸ್ತುಪಾಲನಾ ಸಮಿತಿಯಿಂದ ನೋಟಿಸ್ ಜಾರಿಗೊಳಿಸಲಾಗಿತ್ತು. ಆದರೆ ಆ ನೋಟಿಸ್‌ಗೆ ಯತ್ನಾಳ್ ಕ್ಯಾರೇ ಅಂದಿರಲಿಲ್ಲ. ಅದಕ್ಕೂ ಮುನ್ನವೂ ಜಾರಿಗೊಳಿಸಲಾಗಿದ್ದ ನೋಟಿಸ್‌ಗೆ ಯತ್ನಾಳ್ ಉತ್ತರಿಸುವ ಗೋಜಿಗೇ ಹೋಗಿರಲಿಲ್ಲ. ಅದಕ್ಕಾಗಿ ಈಗ ಮತ್ತೊಂದು ನೋಟಿಸ್ ಜಾರಿಗೊಳಿಸಲಾಗಿದೆ. ಈಗ ಯತ್ನಾಳ್ ಅವರು ಏನು ಮಾಡುತ್ತಾರೆ, ಶಿಸ್ತುಪಾಲನಾ ಸಮಿತಿ ಮುಂದೆ ಹಾಜರಾಗುತ್ತಾರೋ ಅಥವಾ ದೂರ ಉಳಿಯುತ್ತಾರೋ. ಹಾಗೊಂದು ವೇಳೆ ದೂರ ಉಳಿದರೆ ಬಿಜೆಪಿ ಹೈಕಮಾಂಡ್ ಯಾವ ಕ್ರಮ ಕೈಗೊಳ್ಳಲಿದೆ ಎಂಬಿತ್ಯಾದಿ ಕುತೂಹಲ ಮೂಡಿದೆ.

ತೀವ್ರಗೊಂಡಿರುವ ಭಿನ್ನಾಭಿಪ್ರಾಯ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜ ಯೇಂದ್ರ ಮತ್ತು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನಡುವೆ ಆಂತರಿಕ ಭಿನ್ನಾಭಿಪ್ರಾಯಗಳು ತೀವ್ರಗೊಂಡಿವೆ. ಇತ್ತೀಚೆಗೆ, ಇಬ್ಬರೂ



ನಾಯಕರು ದೆಹಲಿಗೆ ತೆರಳಿ ಪಕ್ಷದ ವರಿಷ್ಠರನ್ನು ಭೇಟಿಯಾಗಿ ತಮ್ಮ ಬೇಡಿಕೆಗಳನ್ನು ಇಟ್ಟಿದ್ದಾರೆ. ಯತ್ನಾಳ್ ಅವರು ಕರ್ನಾಟಕ ಬಿಜೆಪಿ ಮೇಲೆ ಯಡಿಯೂರಪ್ಪ ಹಾಗೂ ಅವರ ಪುತ್ರರ ಹಿಡಿತವನ್ನು ಸಡಿಲಿಸುವ ಇರಾದೆ ಹೊಂದಿದ್ದಾರೆ. ಯತ್ನಾಳ್ ಹಾಗೂ ರೆಬೆಲ್ ತಂಡದ ಆಣತಿಯಿಂತೆ ಬಿಜೆಪಿ ಹೈಕಮಾಂಡ್ ಕೂಡ ಬಿಜೆಪಿ ರಾಜ್ಯಾಧ್ಯಕ್ಷ ಪಟ್ಟಕ್ಕೆ ಸದ್ಯದಲ್ಲೇ ಚುನಾವಣೆ ನಡೆಸುವುದಾಗಿ ಹೇಳಿದೆ.

ರಾಜ್ಯಾಧ್ಯಕ್ಷ ಚುನಾವಣೆಗೆ ಯತ್ನಾಳ್ ಬಣದ ಒಬ್ಬರು ನಿಲ್ಲುವುದು ಪಕ್ಕಾ ಆಗಿದೆ. ಅತ್ತ ಬಿ.ವೈ. ವಿಜಯೇಂದ್ರ ಹಾಗೂ ಅವರ ಆಪ್ತರ ಬಣದಲ್ಲಿ ಒಬ್ಬರು (ಪ್ರಾಯಶಃ ವಿಜಯೇಂದ್ರ ನಿಂತರೂ ಅಚ್ಚರಿಯಿಲ್ಲ) ಚುನಾವಣೆಗೆ ನಿಲ್ಲಬಹುದು. ಆದರೆ, ಯಾರೇ ನಿಂತರೂ ತಮ್ಮ ಅಭ್ಯರ್ಥಿಯೇ ಗೆಲ್ಲುತ್ತಾರೆ ಎಂದು ಯತ್ನಾಳ್ ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಯಾವುದೇ ಪ್ರತಿಭಟನೆ ನಡೆಸಿದರೂ ಅದರಲ್ಲಿ ಯತ್ನಾಳ್ ಬಣ ಪಾಲ್ಗೊಳ್ಳದೇ ತಾವೇ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಲು ಮುಂದಾಗುವ ಮೂಲಕ ವಿಜಯೇಂದ್ರ ಅವರ ನಾಯಕತ್ವಕ್ಕೆ ಸಡ್ಡು ಹೊಡೆದಿದ್ದರು. ಸಿದ್ದರಾಮಯ್ಯನವರ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಬಿ.ವೈ. ವಿಜಯೇಂದ್ರ ನಾಯಕತ್ವದಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಬಿಜೆಪಿ ನಾಯಕರು ಪಾದಯಾತ್ರೆ ನಡೆಸಿದ್ದಾಗ ಅದರಲ್ಲಿ ಯತ್ನಾಳ್ ಭಾಗವಹಿಸಿರಲಿಲ್ಲ. ಅವರ ಜೊತೆಗೆ, ಬಿಜೆಪಿಯ ಕುಮಾರ್ ಬಂಗಾರಪ್ಪ ಪ್ರತಾಪ್ ಸಿಂಹ, ಅರವಿಂದ ಲಿಂಬಾವಳಿ ಮುಂತಾದ ನಾಯಕರು ಇದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಯತ್ನಾಳ್, ಹೈಕಮಾಂಡ್ ಶಿಸ್ತು ಸಮಿತಿಯಿಂದ ಯಾವುದೇ ನೋಟೀಸ್ ತಮಗೆ ಬಂದಿಲ್ಲ ಎಂದು ಹೇಳಿದರು.

ಇಂದಿನಿಂದ ಜಾಗತಿಕ ಹೂಡಿಕೆದಾರರ ಸಮಾವೇಶ

ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಎಂ.ಬಿ.ಪಾಟೀಲ್ ಸಿದ್ಧತೆ ಪರಿಶೀಲನೆ

ಬೆಂಗಳೂರು, ಫೆ.10(ಕೆಎಂಶಿ)–ನಗರದ ಅರಮನೆ



ಮೈದಾನದಲ್ಲಿ ನಾಳೆಯಿಂದ ಆರಂಭವಾಗಲಿರುವ 2025ನೇ ಸಾಲಿನ ಜಾಗತಿಕ ಹೂಡಿಕೆದಾರರ ಸಮಾವೇಶದ ಸಿದ್ಧತೆಗಳನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಇಂದು ಪರಿಶೀಲಿಸಿದರು. ಸಮಾವೇಶ ನಡೆಯಲಿರುವ ಅರಮನೆ ಮೈದಾನಕ್ಕೆ ಭೇಟಿ ನೀಡಿದ ಸಚಿವರು, ಪ್ರದರ್ಶನ ತಾಣಗಳು, ಗೋಷ್ಠಿಗಳು ನಡೆಯಲಿರುವ ಸ್ಥಳಗಳು, ಮಾತುಕತೆ ಮತ್ತು ಒಡಂಬಡಿಕೆಗಳಿಗೆ ಸಹಿ ಹಾಕಲಿರುವ ಸಭಾಂಗಣಗಳು, ಕಂಟ್ರಿ ಪೆವಿಲಿಯನ್, ಫುಡ್ ಕೋರ್ಟ್ ಮುಂತಾದ ಪ್ರದೇಶಗಳನ್ನು ಖುದ್ದಾಗಿ ವೀಕ್ಷಿಸಿ, ಕೊನೆ ಕ್ಷಣದ ಸುಧಾರಣೆಗಳ ಕುರಿತು ಸಲಹೆ–ಸೂಚನೆ ನೀಡಿದರು. ಉಪಮುಖ್ಯಮಂತ್ರಿ ಹಾಗೂ ಸಚಿವರ ಜೊತೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಉಪಸ್ಥಿತರಿದ್ದರು.

ಸನ್ಮಾನ...



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಜಯಗಳಿಸಿದ ಮೈಸೂರು ಮಹಾನಗರ ಪಾಲಿಕೆ ನಿಕಟಪೂರ್ವ ಸದಸ್ಯರಾದ ಎಸ್‌ಬಿಎಂ ಮಂಜು ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀನಿವಾಸಣ್ಣ, ಪಾಪಣ್ಣ, ಬಿ.ಚಂದ್ರಶೇಖರ್, ರಾಮಲಿಂಗು, ಶಿವರುದ್ರಪ್ಪ, ಎನ್.ಆರ್.ರಾಜಪ್ಪ, ಡಿ.ರಾಘವೇಂದ್ರ ಇನ್ನಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣ

ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲ್ಲ: ಸ್ನೇಹಮಯಿ ಕೃಷ್ಣ ಯೂ ಟರ್ನ್

■ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಕಾನೂನು ಸಮರ ■ ಬಿ ರಿಪೋರ್ಟ್ ಹಾಕಿದರೆ ಖುದ್ದು ವಾದ ಮಂಡನೆ ■ ಶಿಕ್ಷೆ ಕೊಡಿಸುವ ತನಕ ವಿಶ್ರಮಿಸಲ್ಲ

ಮೈಸೂರು, ಫೆ.10(ಬಿಎಲ್‌ಯು)– ಮುಖ್ಯಮಂತ್ರಿ



ಸ್ನೇಹಮಯಿ ಕೃಷ್ಣ

ಸಿದ್ದರಾಮಯ್ಯ ವಿರುದ್ಧದ ಮುಡಾ ಹಗರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಸುಪ್ರೀಂಕೋರ್ಟ್‌ನಲ್ಲಿ ನಾನು ಮೇಲ್ಮನವಿ ಸಲ್ಲಿಸುವುದಿಲ್ಲ ಎಂದು ದೂರದಾರ ಸ್ನೇಹಮಯಿ ಕೃಷ್ಣ ಸ್ಪಷ್ಟಪಡಿಸಿದ್ದಾರೆ. ಈ ಮೂಲಕ ಸಿದ್ದರಾಮಯ್ಯ ವಿರುದ್ಧದ ಹೋರಾಟದಲ್ಲಿ ಸ್ನೇಹಮಯಿ ಕೃಷ್ಣ ಯೂ ಟರ್ನ್ ಹೊಡೆದಿದ್ದಾರೆ.

ಸಿಬಿಐ ತನಿಖೆಗೆ ಒಪ್ಪಿಸುವುದನ್ನು ನಿರಾಕರಿಸಿ ಹೈಕೋರ್ಟ್ ನೀಡಿರುವ ತೀರ್ಪಿನಿಂದ ನನಗೆ ಸಣ್ಣ ಹಿನ್ನಡೆಯಾಗಿದೆ. ಆದರೆ ಸಿದ್ದರಾಮಯ್ಯ ವಿರುದ್ಧದ ಹೋರಾಟದಿಂದ ನಾನು ಹಿಂದೆ ಸರಿಯುವುದಿಲ್ಲ. ಸಿಬಿಐ ತನಿಖೆಗೆ ಹೈಕೋರ್ಟ್ ನಿರಾಕರಿಸಿ ನೀಡಿರುವ ತೀರ್ಪನ್ನು ಸಮಗ್ರವಾಗಿ ಅಧ್ಯಯನ ಮಾಡುತ್ತೇನೆ. ತರುವಾಯ ನನ್ನ ವಕೀಲರ ಜೊತೆ ಸಮಾಲೋಚಿಸಿ ಮುಂದಿನ 20 ದಿನದಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುತ್ತೇನೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದ್ದರು.

ಆದರೆ ಈಗ ಯೂ ಟರ್ನ್ ಹೊಡೆದಿದ್ದಾರೆ. ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದರೆ ವಿಚಾರಣೆ ನಡೆದು ತೀರ್ಪು ಬರುವುದು ಬಹಳ ತಡವಾಗುತ್ತದೆ. ಈ ಹಿನ್ನೆಲೆಯಲ್ಲಿ ನಾನು ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವುದಿಲ್ಲ ಎಂದು ಹೇಳಿದ್ದಾರೆ.

ಆದರೆ ಈಗಾಗಲೇ ವಿಚಾರಣೆ ನಡೆಯುತ್ತಿರುವ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ನನ್ನ ಹೋರಾಟ ಮುಂದುವರೆಯಲಿದೆ. ಸುಪ್ರೀಂಕೋರ್ಟ್ ಮೇಲ್ಮನವಿ ಸಲ್ಲಿಸುವುದನ್ನು ಹೊರತುಪಡಿಸಿ ಕರ್ನಾಟಕದಲ್ಲೇ ನನ್ನ ಕಾನೂನು ಸಮರ ಮುಂದುವರೆಯಲಿದೆ ಎಂದು ತಿಳಿಸಿದ್ದಾರೆ.

ಲೋಕಾಯುಕ್ತರು ಸಿದ್ದರಾಮಯ್ಯ ವಿರುದ್ಧದ ಪ್ರಕರಣದ ಬಗ್ಗೆ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಸಲ್ಲಿಸುವ ವರದಿ ಮೇಲೆ ನನ್ನ ಕಾನೂನು ಸಮರ ನಿರ್ಧಾರವಾಗಲಿದೆ ಎಂದು ಸ್ನೇಹಮಯಿ ಕೃಷ್ಣ ಸ್ಪಷ್ಟನೆ ನೀಡಿದ್ದಾರೆ. ಲೋಕಾಯುಕ್ತರು ನೀಡುವ ವರದಿಯಿಂದ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾದರೆ ನನ್ನ ವಕೀಲರ ಮೂಲಕ ಕಾನೂನು ಹೋರಾಟ ಮುಂದುವರೆಸುತ್ತೇನೆ ಎಂದರು. ಒಂದು ವೇಳೆ ಲೋಕಾಯುಕ್ತರು ಬಿ ರಿಪೋರ್ಟ್ ಸಲ್ಲಿಸಿದರೆ ವಕೀಲರ ನೆರವಿಲ್ಲದೆ ನಾನೇ ಖುದ್ದು ವಾದ ಮಾಡುತ್ತೇನೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದ್ದಾರೆ.

ನಾನು ಓದಿರುವುದು ಹತ್ತನೆ ತರಗತಿ ಮಾತ್ರ. ಆದರೆ ನನಗಿರುವ ಕಾನೂನು ತಿಳುವಳಿಕೆಯಿಂದ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ನಾನೇ ವಾದ ಮಾಡುತ್ತೇನೆ. ಈ ಮೂಲಕ ಹಗರಣ ಯಾವ ರೀತಿ ನಡೆದಿದೆ ಎಂಬುದನ್ನು ನ್ಯಾಯಾಲಯದಲ್ಲಿ ಎಳೆ ಎಳೆಯಾಗಿ ಬಿಡಿಸಿಡುತ್ತೇನೆ ಎಂದು ತಿಳಿಸಿದರು.

ಮುಡಾ ಹಗರಣ, ಸಿದ್ದರಾಮಯ್ಯ ಅವರ ಪ್ರಭಾವ ಸೇರಿದಂತೆ ಹಲವು ವಿಚಾರಗಳ ದಾಖಲಾತಿಗಳನ್ನು ನಾನೇ ನ್ಯಾಯಾಲಯಕ್ಕೆ ಒದಗಿಸುತ್ತೇನೆ. ಈ ಮೂಲಕ ಕಾನೂನು ಸಮರ ಮುಂದುವರೆಸುತ್ತೇನೆ. ಅಂತಿಮವಾಗಿ ನನಗೆ ನ್ಯಾಯ ದೊರೆಯಲಿದ್ದು, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ ಎಂದು ಸ್ನೇಹಮಯಿ ಕೃಷ್ಣ ವಿಶ್ವಾಸ ವ್ಯಕ್ತಪಡಿಸಿದರು.

ನಕ್ಕರೆ ಅದೇ ಸ್ವರ್ಗ

ಗಂಡ : ಹೊಸ ಮೊಬೈಲ್ ತಗೊಂಡೆ ಕಣೆ
ಹೆಂಡ್ತಿ : ಪಾರ್ಟಿ ಕೊಡಿಸ್ರಿ
ಗಂಡ : ದುಡ್ಡೆಲ್ಲಿ ಇದೆ?
ಹೆಂಡ್ತಿ : ಮೊಬೈಲ್ ಮಾರಿ ಕೊಡಿಸ್ರಿ !

ಮೈಸೂರು ಮಿತ್ರ
ಮಂಗಳವಾರ, 11 ಫೆಬ್ರವರಿ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಜೀವನದಲ್ಲಿ ಪವಾಡಗಳು ಸಂಭವಿಸುತ್ತವೆ. ಆದರೆ ಸರಿಯಾದ ಸಮಯ ಬರುವವರೆಗೂ ನೀವು ಕಾಯಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತತ್ವದಲ್ಲಿ ಸತ್ವ ಹುಡುಕು, ವ್ಯಥೆಯುಲ್ಲಿ ಕಥೆ ಹುಡುಕು.

ನಿಮ್ಮ ಪತ್ರಗಳು

ದುರ್ನಾತದ ಬೀಡಾಗಿದೆ ಈ ರಸ್ತೆ



ಮಾನ್ಯರೆ,

ಮೈಸೂರಿನ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾದ ವಿಜಯನಗರದಲ್ಲಿರುವ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಕನ್ನಡ ಸಾಹಿತ್ಯ ಪರಿಷತ್ತು ರಸ್ತೆಗೆ ಹೊಂದಿಕೊಂಡಿರುವ ಗೇಟ್ ಬಳಿ ಮ್ಯಾನ್‌ಹೋಲ್ ಮುಚ್ಚಳದಿಂದ ಕಳೆದ ಐದು –ಆರು ದಿನಗಳಿಂದ ಕೊಳಕು ನೀರು ಹೊರಬರುತ್ತಿದ್ದು ಕಾಲೇಜು ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಹಾಗೂ ವಾಹನ ಸವಾರರು ಮೂಗು ಮುಚ್ಚಿಕೊಂಡು ಹೋಗಬೇಕಾದ ಪರಿಸ್ಥಿತಿ ಎದುರಾಗಿದೆ. ಬೆಳ್ಳಂಬೆಳಗ್ಗೆ ಮ್ಯಾನ್‌ಹೋಲ್‌ನಿಂದ ಚರಂಡಿ ನೀರು ಉಕ್ಕಿ ಹರಿದು ರಸ್ತೆ ತುಂಬೆಲ್ಲಾ ಆವರಿಸಿಕೊಳ್ಳುತ್ತಿದ್ದು, ದುರ್ನಾತದೊಂದಿಗೆ ದ್ವಿಚಕ್ರ ವಾಹನ ಸವಾರರಿಗೆ ತಮ್ಮ ಗಾಡಿಯ ಮೇಲಿನ ನಿಯಂತ್ರಣ ತಪ್ಪುವ ಭಯದಲ್ಲಿ ತೆರಳುವ ಸಮಸ್ಯೆ ತಂದೊಡ್ಡಿದೆ. ನಗರದಲ್ಲಿ ಡೆಂಗ್ಯೂ, ಚಿಕುನ್‌ಗುನ್ಯಾದಂತಹ ಖಾಯಿಲೆಗಳು ಇತ್ತೀಚೆಗೆ ಹೆಚ್ಚುತ್ತಿದ್ದು, ಇಂತಹ ವಾತಾವರಣವು ಈ ಖಾಯಿಲೆಗಳಿಗೆ ಉತ್ತೇಜಕವಾಗಿ ಪರಿಣಮಿಸಿ ಮುಂದೊಂದು ದಿನ ದೊಡ್ಡ ಸಮಸ್ಯೆ ಎದುರಾದೀತು. ನಗರಪಾಲಿಕೆ ಅಧಿಕಾರಿಗಳೇ ಇವುಗಳ ಬಗ್ಗೆ ಸದಾಕಾಲ ಜನರಿಗೆ ಒಂದು ಕಡೆ ಅರಿವು ಮೂಡಿಸಿ ಸ್ವಚ್ಛತೆಯ ಕಡೆ ಆದ್ಯತೆ ನೀಡಿದರೂ ಸಹ ಅದೇ ಪಾಲಿಕೆಯೇ ಇಂತಹ ರೋಗ–ರುಜಿನಗಳಿಗೆ ಪುಷ್ಟಿ ನೀಡುವ ವಾತಾವರಣವನ್ನು ನಿರ್ಮಿಸುತ್ತಿರುವುದು ದಾರುಣಕರ ಸಂಗತಿಯಾಗಿದೆ.

–ಯಶಸ್.ಆರ್, ಸಾಮಾಜಿಕ ಕಾರ್ಯಕರ್ತ, ಮೈಸೂರು.

ಸಿಎಂ ಮುಡಾ ಹಗರಣ: ಸರ್ಕಾರದಿಂದ ವಕೀಲರ ನೇಮಕ ಏಕೆ?

ಮಾನ್ಯರೆ,

ಮುಡಾ ಹಗರಣವನ್ನು ಸಿಬಿಐಗೆ ವಹಿಸಬೇಕು ಎನ್ನುವ ಕೋರಿಕೆಯನ್ನು ತಿರಸ್ಕರಿಸಿರುವ ಹೈಕೋರ್ಟ್ ತೀರ್ಪಿನಿಂದ ಸಿಎಂ ನಿರಾಳ. (ಮೈ.ಮಿತ್ರ 8.2.25 ವರದಿಯಾಗಿದೆ). ಇದನ್ನು ಕಾಂಗ್ರೆಸ್ ಪಕ್ಷದವರು ಸತ್ಯ ಮೇವ ಜಯತೇ ಎಂದು ಸಂಭ್ರಮಿಸಿದ್ದಾರೆ. ಆದರೆ ಸತ್ಯ ಮರೆಯಲ್ಲಿದೆ. ಏಕೆಂದರೆ ಈ ಪ್ರಕರಣದಲ್ಲಿ ಕೋರ್ಟ್ ಕೇಳುವಂತಹ ದಾಖಲೆಯ ಸಾಕ್ಷಿ ಸಿಗುವ ಸಂಭವವಿಲ್ಲ. ಈಗಾಗಲೇ ಪ್ರಕರಣ ತನಿಖೆಗೆ ವಹಿಸುವ ಮೊದಲೇ ನಾಶ ಪಡಿಸಿರಬಹುದು. ಅಲ್ಲದೆ ಇದು ಪ್ರಭಾವಕ್ಕೆ ಒಳಗಾಗಿ, ಪ್ರಭಾವಿಗಳಿಗೆ ಪ್ರಭಾವಿಗಳಿಂದ ಮೌಕಿಕ ಆದೇಶ, ಸೂಚನೆಗಳ ಪ್ರಕಾರ ನಡೆದಿರುವ ವ್ಯವಹಾರವಾಗಿದೆ ಎಂದು ಮೇಲ್ನೋಟಕ್ಕೆ ಎದ್ದು ಕಾಣುವ ಪ್ರಕರಣವಾಗಿದೆ. ಇದನ್ನು ಕೋರ್ಟ್ ಮನಗಾಣಬೇಕು.

ಇನ್ನು ಈ ಪ್ರಕರಣದ ವಿರುದ್ಧ ಕೋರ್ಟ್‌ನಲ್ಲಿ ವಾದ ಮಂಡನೆ ಮಾಡಲು ಕರ್ನಾಟಕ ಸರ್ಕಾರದ ವತಿಯಿಂದ ಸಾರ್ವಜನಿಕ ಹಣ ನೀಡಿ ಇಬ್ಬರು ದುಬಾರಿ ವಕೀಲರನ್ನು ನೇಮಿಸಿಕೊಂಡಿರುವುದು ಸರಿಯಷ್ಟೇ. ಆದರೆ ಇದು ಮುಖ್ಯಮಂತ್ರಿಗಳ ಖಾಸಗಿ ಪ್ರಕರಣವಾಗಿದ್ದು ಇದಕ್ಕೆ ಸರ್ಕಾರದ ವತಿಯಿಂದ ವಕೀಲರನ್ನು ನೇಮಿಸಿಕೊಂಡಿರುವುದೇಕೆ? ಎನ್ನುವುದು ಸಾರ್ವಜನಿಕರ ಪ್ರಶ್ನೆಯಾಗಿದೆ. ಏನಿದ್ದರೂ ಅವರು ವೈಯಕ್ತಿಕವಾಗಿ ವಕೀಲರನ್ನು ನೇಮಿಸಿಕೊಳ್ಳಬೇಕು. ಇಲ್ಲವೇ ಅವರ ಪಕ್ಷದ ವತಿಯಿಂದ ನೇಮಿಸಿಕೊಳ್ಳಬೇಕು. ಇದು ಸಾರ್ವಜನಿಕ ಹಣದ ದುರುಪಯೋಗವಲ್ಲವೇ? ಈ ಬಗ್ಗೆ ಯಾರೂ ಪ್ರಶ್ನಿಸುತ್ತಿಲ್ಲವೇಕೆ?

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಸಯ್ಯಾಜಿರಾವ್ ರಸ್ತೆಯ ಫುಟ್‌ಪಾತ್‌ನಲ್ಲಿ ಬಡವರಿಗೆ ಭಾಗ್ಯ

ಮಾನ್ಯರೆ,

ನಮ್ಮ ಜೀವನದಲ್ಲಿ ಯಾರ ದೃಷ್ಟಿಲಿ ನಾವು ಹೇಗೆ ಕಾಣ್ತೀವಿ ಅನ್ನೋದಕಿಂತ ನಮ್ಮೊಳಗೆ ನಾವು ಹೇಗೆ ನಮ್ಮನ್ನ ಆವರಿಸಿ ಕೊಂಡಿದೀವಿ ಅನ್ನೋದು ತುಂಬಾ ಮುಖ್ಯ. ಜಗತ್ತು ನಮ್ಮನ್ನ ನೋಡಲಿ ಅಂದುಕೊಂಡು ಹೊರಡೊಕಿಂತ, ಜಗತ್ತನ್ನ ನಾನು ನೋಡಬೇಕು ಅಂತ ಹೊರಟರೆ ಅಲ್ಲಿ ನೆಮ್ಮದಿಯ ಪಯಣ ಇರುತ್ತೆ. ಎಲ್ಲದಕ್ಕೂ ಎಲ್ಲರಿಗೂ ಅಂತ್ಯವಿದೆ. ಸಾಗೊ ದಾರಿ ಅಷ್ಟೆ ನೆನಪಲ್ಲಿ ಉಳಿಯೋದು.

ನನಗೆ ಬದುಕು ಅನ್ನೋದು ಕಾಣೋದು ಅಲ್ಲೆಲ್ಲೊ ಹವಾನಿಯಂತ್ರಣ ಅಂಗಡಿಯಲ್ಲಿ ಕೈ ತುಂಬಾ ದುಡ್ಡು ಕೊಟ್ಟು ಕೊಳ್ಳುವ ಐಫೋನ್, ದಿನೋಪಯೋಗಿ ವಸ್ತುಗಳನ್ನ ಕೊಳ್ಳುವುದರಲ್ಲಿ ಅಲ್ಲ. ಬದುಕು ಅನ್ನೊದು ಕಾಣೊದು ಅಂದ್ರೆ ಅಲ್ಲೊಂದು ಹೋರಾಟ ಇರಬೇಕು. ವಾಸ್ತವದ ಜೊತೆಗೆ ಅಲ್ಲಿ ನಮ್ಮ ಅಗತ್ಯತೆಗಳನ್ನ ಕೊಳ್ಳುವುದರ ಜೊತೆಗೆ ಮತ್ತೊಬ್ಬರ ಕನಸುಗಳಿಗೆ ನೀರೆರೆಯುತ್ತಿವಲ್ಲ ಅಲ್ಲಿ ನಮಗೆ ಬದುಕು ಅಂದ್ರೆ ಏನೂ ಅಂತ ಕಾಣುತ್ತೆ.

ನಮ್ಮ ಮೈಸೂರಿನ ಕೆ.ಆರ್.ಸರ್ಕಲ್‌ನಿಂದ ಸಯ್ಯಾಜಿರಾವ್ ರಸ್ತೆಯ ಎರಡು ಬದಿಗಳಲ್ಲಿ ಹಲವಾರು ಜನರು ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುತ್ತಾರೆ. ಅಲ್ಲಿ ವ್ಯಾಪಾರ ಮಾಡುವ ಪ್ರತಿಯೊಬ್ಬರ ಜೀವನವೂ ಒಂದು ಹೋರಾಟವೇ ಸರಿ. ಫುಟ್‌ಪಾತ್‌ನಲ್ಲಿ ನಡೆದು ಹೋಗುವವರನ್ನು ಅವರದೇ ಆದ ಶೈಲಿಯಲ್ಲಿ ಕೂಗಿ ತಮ್ಮತ್ತ ಸೆಳೆಯುತ್ತಾರೆ. ದೂರದ ಊರಿನಿಂದ ಬಂದ ಹಾಗೂ ಎಲ್ಲಿಂದಲೋ ಬಂದ ಜನರು ಇಲ್ಲೇ ವಸ್ತುಗಳನ್ನು ಕೊಳ್ಳಬೇಕೆಂದು ಬಂದಿರುತ್ತಾರೆ. ಅಲ್ಲಿ ಬರುವ ಪ್ರತಿಯೊಬ್ಬರ ಇಚ್ಛೆ ಎಂದರೆ ಕಡಿಮೆ ಬೆಲೆಗೆ ತಮಗೋ, ಮಕ್ಕಳಿಗೊ ಒಂದೊಳ್ಳೆ ಬಟ್ಟೆ ಸಿಗುತ್ತೆ. ನೂರು ರೂಪಾಯಿಗೆಲ್ಲ ಒಂದೊಳ್ಳೆ ಚಪ್ಪಲಿ ಸಿಗುತ್ತೆ. ಮನೆಗೆ ಬಳಸೊ ಪಾತ್ರೆಗಳು ಹೀಗೆ ಹಲವಾರು ವಸ್ತುಗಳು ಕಡಿಮೆ ಬೆಲೆಗೆ ಸಿಗುತ್ತವೆ ಎಂದು ಹುಡುಕಿ ಬರುತ್ತಾರೆ. ಬೆಳಗ್ಗೆಯಿಂದ ರಾತ್ರಿಯವರೆಗೆ ಚಳಿ ಬಿಸಿಲು ಎನ್ನದೆ ಮಾರಾಟ ಮಾಡುವ ಇವರು ಶ್ರಮಜೀವಿಗಳು. ಇದೆ ಫುಟ್‌ಪಾತ್‌ನಲ್ಲಿ ಗಿಳಿ ಶಾಸ್ತ್ರ ಹೇಳುತ್ತಾರೆ. ಬದುಕಿನಲ್ಲಿ ಭರವಸೆಯನ್ನು ಕಳೆದುಕೊಂಡವರಿಗೆ ಹತ್ತಾರು ರೂಪಾಯಿಯಲ್ಲಿ ಭರವಸೆ ತುಂಬುತ್ತಾರೆ. ಇಪ್ಪತ್ತರ ಆಸುಪಾಸಿನ ಯುವಕ–ಯುವತಿಯರು ಬದುಕಿನಲ್ಲಿ ಆದ ಸಣ್ಣ ಸೋಲಿಗೆ ಹೆದರಿ ಕುಗ್ಗುವಾಗ, ಇದೇ ರಸ್ತೆಯಲ್ಲಿ ಅರವತ್ತು ಎಪ್ಪತ್ತರ ಅಜ್ಜಿ ಸೊಪ್ಪು, ತರಕಾರಿ ಮಾರಿ ಬದುಕನ್ನು ಕಟ್ಟಿಕೊಂಡು ಸ್ವಾಭಿಮಾನಿಯಾಗಿ ಬದುಕುತ್ತಾರೆ. ಈ ಸಾಮಾಜಿಕ ಜಾಲತಾಣದ ಯುಗದಲ್ಲಿ ಜನರ ನಡುವೆ ಬೆರೆಯುವುದನ್ನೇ ಅರಿಯದವರ ನಡುವೆ ಇಲ್ಲಿ ಜನರನ್ನು ಅರಿತು ಅವರೊಂದಿಗೆ ವ್ಯವಹರಿಸುತ್ತಾರೆ. ಬದುಕಿನಲ್ಲಿ ಸ್ವಾಭಿಮಾನ ಭರವಸೆ, ಶ್ರಮ ಜೀವನಕ್ಕೆ ಮಾದರಿ ಅಂದರೆ ಇಲ್ಲಿನ ವ್ಯಾಪಾರಿಗಳು. ಎಲ್ಲರ ದೃಷ್ಟಿಯಲ್ಲಿ ಇದು ಬರೀಯ ಪುಟ್‌ಪಾತ್. ಆದರೆ ಇದು ಹಲವಾರು ಕುಟುಂಬಗಳ ಜೀವನೋಪಾಯಕ್ಕೆ ದಾರಿಯಾಗಿರುವ ಭರವಸೆಯ ತಾಣ. ಇಂದಿನ ದುಬಾರಿ ಯುಗದಲ್ಲಿ ಬಡವರ ಕೈಗೆಟಕದ ಹಲವು ವಸ್ತುಗಳು ಇದೇ ಜಾಗದಲ್ಲಿ ಸಿಗುತ್ತವೆ.

ಬದುಕಿನಲ್ಲಿ ಗುಣಮಟ್ಟ ಅನ್ನೊಕ್ಕಿಂತ ಅತ್ಯವಶ್ಯಕತೆಗೆ ಸಾಧಾರಣವೇ ಸೂಕ್ತ ಅನ್ನೋ ಹಲವು ಜನರಿಗೆ ಎಂದಿಗೂ ಇದು ಅವಶ್ಯಕ. ನಮ್ಮೂರಿನ ಬದಲಾವಣೆಯ ಈ ಬಿರುಸಿಗೆ ಎಂದಿಗೂ ನಮ್ಮ ಸಯ್ಯಾಜಿರಾವ್ ರಸ್ತೆಯ ಪುಟ್‌ಪಾತ್ ಮರೆಯಾಗದಿರಲಿ. ಫುಟ್‌ಬಾತ್ ಅನ್ನುವುದರಲ್ಲಿ ಬದುಕಿದೆ. ಕಾಣುವ ಮನೋಭಾವ ನಮ್ಮದಾಗಬೇಕು.

–ಮಂಜೇಶ್ ದೇವಗಳ್ಳಿ, ಮೈಸೂರು

ಈ ಜೀವನ



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ದಿಟ್ಟ ಮನಸ್ಸು ಕಟ್ಟಿಟ್ಟ ಯಶಸ್ಸು...


ನಮ್ಮ ಗೆಲುವಿನ ದಿವ್ಯ ಬೆಳಕು ಯಶಸ್ಸು. ಸಾಧನೆ ಮಾಡಿ ನಾವು ಈ ಜಗತ್ತಿಗೆ ಕೇವಲ ಜೀವಿಸಲು ಬಂದವರಲ್ಲ ಬದುಕನ್ನು ಸುಂದರವಾಗಿಸಲು ಬಂದವರು. ಬದುಕಿಗೆ ನಮ್ಮ ಹೆಜ್ಜೆ ಗುರುತಿನಿಂದ ದೃಢಸಂಕಲ್ಪದ ನೆರಳಲ್ಲಿ ಜೀವನವನ್ನು ನಂದನವಾಗಿಸುವ ನಿಟ್ಟಿನಲ್ಲಿ ಸಕಾರ್ಯಗಳ ಕೈಗೊಂಡು, ಕೈಗೊಂಡ ಕಾರ್ಯಗಳ ಪರಿಪೂರ್ಣಗೊಳಿಸಲು ಮನಸ್ಸೋ ಇಚ್ಛೆ ಪ್ರಯತ್ನದ ಪ್ರಾತಿಗೆ ಜೀವಕೊಟ್ಟು ಯಶಸ್ಸು ಎನ್ನುವ ಮಂತ್ರದೀಕ್ಷೆಯ ಪಡೆಯಲು ಬಂದವರು ನಾವು. ಈ ದೃಷ್ಟಿಯಿಂದ ನಮ್ಮೊಳಗಿನ ಜೀವ ಚೈತನ್ಯ ಸದಾ ಚಲನಶೀಲವಾಗಿಸುವ ದಿಕ್ಕಿನಲ್ಲಿ ಮುನ್ನಡೆವಾಗ ಎದುರಾಗುವ 'ಅಯ್ಯೋ ಬಿಡಿ ಸರ್, ನನ್ನ ಅದೃಷ್ಟನೇ ಸರಿ ಇಲ್ಲ..., ಯಾವುದೇ ಸ್ಪರ್ಧೆಯಲ್ಲಿಯೂ ನನಗೆ ಬಹುಮಾನನೇ ಬರುವುದಿಲ್ಲ......! ಗೆಳೆಯರೆಲ್ಲರೂ ಖಂಡಿತವಾಗಿ ನಿನಗೆ ಬಹುಮಾನ ಬರುತ್ತದೆ ಎಂದು ಹುರಿದುಂಬಿಸುವರು, ಆದರೂ ಯಾವುದೇ ಸ್ಪರ್ಧೆಯಲ್ಲಿಯೂ ಒಂದು ಸಣ್ಣ ಬಹುಮಾನವಾದರೂ ಬರುವುದು ಬೇಡವೇ ಸರ್?!'

ಪ್ರತಿಭೆ ಇದ್ದು, ಅದು ಸರಿಯಾದ ದಾರಿಯಲ್ಲಿ ವ್ಯಯವಾಗದೆ ಅಥವಾ ವ್ಯಯವಾದರೂ ಅದರಿಂದ ಲಾಭದ ಬೆಳಕು ಕಾಣದೆ ಇರುವ ಮತ್ತು ಏನಾದರೂ ಸಾಧಿಸಬೇಕೆಂಬ ಛಲವುಳ್ಳ ವಿದ್ಯಾರ್ಥಿಯೊಬ್ಬ ಆಡಿದ ಮಾತುಗಳಿವು. ನಿನಗೆ ಬಹುಮಾನ ಬಂದಿಲ್ಲ ಅಂದರೆ ನೀನು ಚೆನ್ನಾಗಿ ಸ್ಪರ್ಧೆಯಲ್ಲಿ ಭಾಗವಹಿಸಿಲ್ಲ ಎಂದರ್ಥ ವಲ್ಲ ನಿನಗಿಂತಲೂ ಚೆನ್ನಾಗಿ ಪ್ರತಿಭೆ ತೋರಿಸಿದವರು ಇದ್ದಾರೆ ಎಂದು ಭಾವಿಸಿಕೊಳ್ಳಬೇಕು. ಬೇಸರ ಮಾಡಿಕೊಳ್ಳಬೇಡ, ಪ್ರಯತ್ನ ಚೆನ್ನಾಗಿದೆ ಮುಂದುವರಿಸು ಎಂಬ ಸಮಾಧಾನದ ಮಾತಿಗೆ 'ಅಯ್ಯೋ ಬಿಡಿ ಸರ್ ಬಹುಮಾನ ಬರದಿದ್ದ ಮೇಲೆ ಪ್ರತಿಭೆ ಇದ್ದರೇನು ಪ್ರಯೋಜನ' ಎಂದು ಉತ್ತರ ನೀಡಿದ.

ಯಶಸ್ಸು ಅಂದರೆ ತಕ್ಷಣ ದೊರಕಬೇಕು, ಎಲ್ಲರೂ ತಮ್ಮನ್ನು ಗುರುತಿಸಬೇಕು, ಹೆಸರು, ಪ್ರಸಿದ್ಧಿ ಬಂದರೆ ಅಷ್ಟೇ ಯಶಸ್ಸು. ಹಣ ಸಂಪಾದನೆ ಮಾಡಬೇಕು, ಕೀರ್ತಿ ಸಂಪಾದಿಸಬೇಕೆಂಬ, ರಾತ್ರಿ ಕಳೆದು ಬೆಳಕಾಗುವಷ್ಟರಲ್ಲಿ ಎಲ್ಲವು ನಡೆದು ಹೋಗಬೇಕೆಂಬ ತುಡಿತ ಇಂದಿನ ಯುವ ಜನತೆಯಲ್ಲಿ ತುಸು ಜಾಸ್ತಿಯಾಗಿದೆ. ಜಿದ್ದಿಗೆ ಬಿದ್ದವರಂತೆ ಓಟದ ಜಗತ್ತಿನಲ್ಲಿ ವಾಸಿಸುತ್ತಿರುವ ನಮಗೆ ಎಲ್ಲವೂ ಕ್ಷಣಾರ್ಧದಲ್ಲಿಯೇ, ಯಾವುದೇ ಬಗೆಯಲ್ಲಿ ತೊಂದರೆಗೆ ಸಿಲುಕದಂತೆ ನಡೆಯಬೇಕು ಎಂಬ ಮನೋಭಾವ ಸೃಷ್ಟಿಯಾಗಿರುವುದರಲ್ಲಿ ಇವೆಲ್ಲವೂ ಸರ್ವೆ ಸಾಮಾನ್ಯವೆನಿಸಿದೆ.

ಯಶಸ್ಸಿಗೆ ನಿರಂತರ ಪ್ರಯತ್ನ ಮುಖ್ಯ: ಯಶಸ್ಸು ಯಾವಾಗಲೂ ನಮ್ಮನ್ನು ಕೆಂಪು ರತ್ನದ ಕಂಬಳಿಯನ್ನು ಹಾಸಿ (ರೆಡ್ ಕಾರ್ಪೆಟ್) ಸ್ವಾಗತಿಸುವುದಿಲ್ಲ. ಯಶಸ್ಸನ್ನು ಪಡೆಯಬೇಕಾದರೆ ಅದಕ್ಕೆ ತಕ್ಕ ಶ್ರಮ ಪಡಬೇಕಾಗುತ್ತದೆ. ಶ್ರಮ ಹಾಕದೆ, ಸೋಲನ್ನು ಅನುಭವಿಸದೆ ಅತ್ಯಂತ ವೇಗವಾಗಿ ಯಶಸ್ಸನ್ನು ಪಡೆಯಬೇಕೆಂದು ಕೊಂಡಲ್ಲಿ ಅದು ಹೆಚ್ಚು ದಿನ ಉಳಿಯಲಾರದು. ಸಿಕ್ಕಷ್ಟೇ ವೇಗವಾಗಿ ಕಳೆದು ಹೋಗುತ್ತದೆ. ನಿರಂತರ ಪ್ರಯತ್ನ, ಕಠಿಣವಾದ ಶ್ರಮ ನಿಧಾನವಾಗಿಯಾದರೂ ಯಶಸ್ಸನ್ನು ತಂದು ಕೊಡುತ್ತದೆ. ಹೆಚ್ಚು ಕಾಲ ಉಳಿದಿರುತ್ತದೆ. ಇದಕ್ಕೆ ಪೂರಕವಾಗಿ ಮಾತೊಂದನ್ನು ಹೇಳು ವುದಾದರೆ ಜಮೈಕಾದ ಚಿರತೆ ಎಂದು ಖ್ಯಾತರಾದ **ಉಸೇನ್ ಬೋಲ್ಟ್** ಅವರ ಬದುಕನ್ನೇ ಗಮನಿಸುವುದಾದರೆ ನಾಲ್ಕು ವರ್ಷಕ್ಕೊಮ್ಮೆ ನಡೆಯುವ ಒಲಂಪಿಕ್ಸ್ ತಾನೇ? ಮೂರು ವರ್ಷ ನೆಮ್ಮದಿಯಾಗಿದ್ದು, ಕೊನೆ ವರ್ಷ ಪ್ರಯತ್ನ ಪಡೋಣವೆಂದು ಕೊಂಡರೆ 100 ಮೀಟರ್ ಓಟದ ಸ್ಪರ್ಧೆಯಲ್ಲಿ (ಕೇವಲ 9.58 ಸೆಕೆಂಡುಗಳಲ್ಲಿ ಓಡಿ ಗುರಿ ಮುಟ್ಟಿದ್ದು) ಸಾರ್ವಕಾಲಿಕ ದಾಖಲೆ ಯನ್ನು ಮಾಡಲು ಸಾಧ್ಯವಾಗುತ್ತಿತ್ತೇ? ಖಂಡಿತವಾಗಿಯೂ ಇಲ್ಲ ತಾನೇ? ಹಾಗೆ ಯಶಸ್ಸನ್ನು ಪಡೆಯಬೇಕಾದರೆ ನಿರಂತರವಾಗಿ ಶ್ರಮವನ್ನು ಹಾಕಲೇಬೇಕಾಗುತ್ತದೆ.

ಅತೀ ಕಡಿಮೆ ಸಮಯದಲ್ಲಿ ಬಹುಬೇಗನೆ ಯಶಸ್ಸನ್ನು ಪಡೆಯಬೇಕು ಎಂದು ಬಹುತೇಕರು ಅಪೇಕ್ಷೆ ಪಡುತ್ತಾರೆ. ಆದರೆ ಈ ರೀತಿ ಪಡೆದ ಯಶಸ್ಸು ಅಷ್ಟೇ ವೇಗವಾಗಿ ಹೇಳ ಹೆಸರಿಲ್ಲದಂತೆ ಕಳೆದು ಹೋಗುತ್ತದೆ. ನಿರಂತರ ಪ್ರಯತ್ನ ಯಶಸ್ಸಿಗೆ ನಿಲುಗನ್ನಡಿ ಇದ್ದಂತೆ, ಅದು ಸದಾ ಕಾಲವು ನಮ್ಮನ್ನು ಕಾಪಿಡುತ್ತದೆ. ನನಗೆ ಇದನ್ನು ಹೇಳುವಾಗ ನಮ್ಮ ಪ್ರಸ್ತುತ ಕೆಲವು ವಿದ್ಯಾರ್ಥಿಗಳ ಮನೋಭಾವ



ಉಸೇನ್ ಬೋಲ್ಟ್



ಡಿ. ಗುಕೇಶ್

> ಯಾವುದೇ ಕೆಲಸವನ್ನು ಮಾಡಲು ಹೊರಟಾಗ ಅದು ಸಾಧ್ಯವಿಲ್ಲ. ನಿಮ್ಮಿಂದ ಇವೆಲ್ಲ ಆಗದ ಕೆಲಸ... ಹೀಗೆ ಹತ್ತು ಹಲವು ಟೀಕೆಗಳು ಬರಬಹುದು. ಆದರೆ ಇಂಥ ಟೀಕೆಗಳಿಗೆಲ್ಲ ಉತ್ತರ ನೀಡುವ ಬದಲು ನಾವು ಮಾಡುವ ಕೆಲಸದಲ್ಲಿ ಪರಿಪೂರ್ಣತೆ ಕಂಡುಕೊಂಡರೆ ಯಶಸ್ಸು ಖಂಡಿತ ಸಿಗುತ್ತದೆ.

ನೆನಪಿಗೆ ಬರುತ್ತದೆ. ವರ್ಷವಿಡೀ ಓದದೇ ಪರೀಕ್ಷೆ ಸಮೀಪಿಸಿದಾಗ ಹಗಲು ರಾತ್ರಿ ಎನ್ನದೇ ಆರೋಗ್ಯದ ಕಡೆಗೆ ಗಮನ ಕೊಡದೆ ಓದಿ ತಾವು ನಿರೀಕ್ಷಿಸದ ಅಂಕಗಳು ಬರಲಿಲ್ಲ ಎಂದು ಪರಿತಪಿಸುವುದನ್ನು ನೋಡುತ್ತಲೇ ಇರುವೆವು. ಎಲ್ಲಿಯೋ ಶೇ.10ರಷ್ಟು ಮಂದಿಗೆ ಕಡಿಮೆ ಸಮಯದಲ್ಲಿ ಓದಿದ್ದು ಹೆಚ್ಚು ಅಂಕ ಬರಲು ಕಾರಣವಾಗಿರಬಹುದು ಅಥವಾ ಆಗಬಹುದು. ಆದರೆ ಬಹುತೇಕ ಸಂದರ್ಭಗಳಲ್ಲಿ ಇದು ಎಲ್ಲರಿಗೂ ಅನ್ವಯವಾಗುವುದಿಲ್ಲ. ಹಾಗೆಯೇ ಯಶಸ್ಸು ಕೂಡ. ಪ್ರಯತ್ನ ಮಾಡಿದ ಕೂಡಲೇ ಸಿಗಲಾರದು. ಯಶಸ್ಸು ಸಿಗಲಿಲ್ಲ ಎಂದ ಕೂಡಲೇ ಅದನ್ನು ಕೈ ಬಿಡದೆ ನಿರಂತರ ಪ್ರಯತ್ನವಿದ್ದಲ್ಲಿ ಖಂಡಿತವಾಗಿ ಸಿಕ್ಕೇ ಸಿಗುತ್ತದೆ.

ಟೀಕೆಗಳಿಗೆ ತಲೆಕೆಡಿಸಿಕೊಳ್ಳಬಾರದು: ಸಾಧನೆಯ ಹಾದಿಯಲ್ಲಿ ಹೊರಟವನಿಗೆ 'ಬೆಕ್ಕಿಗಿಂತ ಜನರೇ ಅಡ್ಡ ಬರುತ್ತಾರೆ' ಎಂಬ ಹೊಸ ನಾಣ್ಣುಡಿಯಂತೆ ಹೊಸತನ್ನು ಸಾಧಿಸಬೇಕು ಎಂದು ಕನಸು ಹೊತ್ತು ಹೊರಟವರಿಗೆ ಅವರ ಆತ್ಮಸ್ಥೈರ್ಯವನ್ನು ,ಆತ್ಮವಿಶ್ವಾಸವನ್ನು ಕದಡುವ ಹಾಗೆ ಟೀಕೆಗಳ ಸುರಿಮಳೆಗಳೇ ಬರುತ್ತವೆ. ಆದರೆ ಇವುಗಳಿಗೆ ತಲೆಕೆಡಿಸಿಕೊಳ್ಳದೆ ಮುನ್ನುಗ್ಗಲೇಬೇಕು. ನನಗೆ ಇದರ ಬಗ್ಗೆ ಹೇಳುವಾಗ ಹಿಂದೊಮ್ಮೆ ಓದಿದ್ದ ಕಥೆಯೊಂದು ನೆನಪಿಗೆ ಬರುತ್ತದೆ.

ಕಥೆಯೊಳಗಿನ ಸ್ಫೂರ್ತಿಯ ಬೆಳಕು: ಕಪ್ಪೆಗಳೆಲ್ಲ ಒಮ್ಮೆ ಎತ್ತರವಾದ ಪರ್ವತವನ್ನು ಹತ್ತಬೇಕೆಂದು ನಿರ್ಧಾರವನ್ನು ಮಾಡಿದವು. ಒಂದೊಂದಾಗಿ ಪರ್ವತವನ್ನು ಹತ್ತಲು ಪ್ರಾರಂಭ ಮಾಡಿದವು. ಕಪ್ಪೆ ಒಂದಕ್ಕೆ ಪರ್ವತದ ಎತ್ತರವನ್ನು ನೋಡಿ ಭಯ ಪ್ರಾರಂಭವಾಯಿತು. ಭಯ ಆ ಕಪ್ಪೆಯ ಆತ್ಮವಿಶ್ವಾಸವನ್ನು ಕಡಿಮೆ ಮಾಡಿ ಮೇಲಿಂದ ಕೆಳಗೆ ಬೀಳುವಂತೆ ಮಾಡಿತು. ಬಿದ್ದ ಕಪ್ಪೆಯನ್ನು ನೋಡಿ ಕೆಲವು ಕಪ್ಪೆಗಳು ಕೂಡ ಭಯದಿಂದ ಮೇಲಿಂದ ಕೆಳಗೆ ಬಿದ್ದವು. ಇನ್ನು ಕೆಲವು ಕಪ್ಪೆಗಳು ಪರ್ವತದ ಅರ್ಧಕ್ಕೆ ತಲುಪುವಷ್ಟರಲ್ಲಿ ಕೆಳಗೆ ಬಿದ್ದಿದ್ದ ಕಪ್ಪೆಗಳೆಲ್ಲ ಜೋರಾಗಿ ಕೂಗಿಕೊಂಡವು. ನಿಮ್ಮಿಂದ ಇನ್ನೂ ಮುಂದೆ ಹೋಗಲು ಸಾಧ್ಯವಿಲ್ಲ, ಈಗ ಹೋಗಿರುವುದೇ ಸಾಕು ಬಂದು ಬಿಡಿ ಎಂದು ಒಂದೇ ಸಮನೆ ಬೊಬ್ಬೆ ಹಾಕಿದಾಗ ಆ ಕಪ್ಪೆಗಳಿಗೆಲ್ಲ ಅದು ನಿಜವೆನಿಸಿ ಅವುಗಳು ಕೂಡ ಕೆಳಗೆ ಬಿದ್ದವು. ಆದರೆ ಒಂದು ಕಪ್ಪೆ, ಯಾರ ಮಾತಿಗೂ ಸೊಪ್ಪು ಹಾಕದೆ ತನ್ನ ಪಾಡಿಗೆ ತಾನು ಪರ್ವತವನ್ನು ಹತ್ತುವ ಪ್ರಯತ್ನದಲ್ಲಿ ತೊಡಗಿಕೊಂಡಿತ್ತು. ಅದು ಕೊನೆಗೂ ಪರ್ವತವನ್ನು ಹತ್ತಿ ತನ್ನ ಗುರಿಯನ್ನು ಮುಟ್ಟಿತು. ಅದು ಕೆಳಗಿಳಿದು ಬಂದಾಗ ಉಳಿದ ಕಪ್ಪೆಗಳು ನಾವು ಅಷ್ಟು ಕೂಗುತ್ತಿದ್ದರೂ ನಿನಗೆ ಭಯವಾಗಲಿಲ್ಲವೇ ಎಂದು ಕೇಳಿದಾಗ ಕಪ್ಪೆಗೆ ಉಳಿದ ಕಪ್ಪೆಗಳು ಕೂಗಿದ್ದು ಕೇಳಲಿಲ್ಲವೆಂದು ಅದು ತನಗೆ ಕಿವಿ ಮಂದವಿರುವುದಾಗಿ ಹೇಳಿತಂತೆ. ಬಹುಶಃ ತನಗೆ ಕಿವಿ ಸರಿಯಾಗಿ ಕೇಳುತ್ತಿದ್ದರೆ ತಾನು ಕೂಡ ನಿಮ್ಮಂತೆ ಕೆಳಗೆ ಬೀಳುತ್ತಿದ್ದೆ.ಆದರೆ ಕಿವಿ ಕೇಳಿಸದ ಕಾರಣ ನನ್ನ ಹಿಂದೆ ನೀವು ಬರುತ್ತಿರುವಿರೆಂದು ತಿಳಿದು ಪರ್ವತವನ್ನು ಏರಿದೆ ಎಂದು ತಿಳಿಸಿತು.

ಕಥೆಯಲ್ಲಿ ಪ್ರಾಯೋಗಿಕ ಅಂಶಗಳು ಏನೇ ಇಲ್ಲದಿದ್ದರೂ, ಅತಿಶಯೋಕ್ತಿಗಳು ಇದ್ದರೂ ಕೂಡ ಕಥೆ ಹೇಳುವ ಅಂಶವನ್ನು ಗಮನಿಸ ಬೇಕು. ಸಾಧನೆಯ ಹಾದಿಯಲ್ಲಿ ಹೊರಟವರಿಗೆ ಎದುರಾಗುವ ಟೀಕೆಗಳನ್ನು ಕಡೆಗಣಿಸಿ ನಮ್ಮ ಪಥದಲ್ಲಿ ಸಾಗಬೇಕು. ಆಗ ಯಶಸ್ಸು ಸಿಕ್ಕೆ ಸಿಗುವುದೆಂಬ ಸಕಾರಾತ್ಮಕತೆಯ ಅಂಶ ಕಥೆಯಲ್ಲಿ ಅಡಕವಾಗಿ ರುವುದನ್ನು ಅರ್ಥಮಾಡಿಕೊಳ್ಳಬೇಕು.

ಯಾವುದೇ ಕೆಲಸವನ್ನು ಮಾಡಲು ಹೊರಟಾಗ ಅದು ಸಾಧ್ಯವಿಲ್ಲ, ನಿಮ್ಮಿಂದ ಇವೆಲ್ಲ ಆಗದ ಕೆಲಸ... ಹೀಗೆ ಹತ್ತು ಹಲವು ಟೀಕೆಗಳು ಬರಬಹುದು. ಆದರೆ ಇಂಥ ಟೀಕೆಗಳಿಗೆಲ್ಲ ಉತ್ತರ ನೀಡುವ ಬದಲು ನಾವು ಮಾಡುವ ಕೆಲಸದಲ್ಲಿ ಪರಿಪೂರ್ಣತೆಯನ್ನು ಕಂಡುಕೊಂಡರೆ ಖಂಡಿತವಾಗಿಯೂ ಯಶಸ್ಸು ಸಿಗುತ್ತದೆ ಎಂಬುದಕ್ಕೆ ಇತ್ತೀಚಿಗೆ ಅತೀ ಕಿರಿಯ ವಿಶ್ವ ಚೆಸ್ ಚಾಂಪಿಯನ್ ಎನಿಸಿಕೊಂಡ **ಡಿ.ಗುಕೇಶ್** ನಿದರ್ಶನವಾಗಿ ನಿಲ್ಲುತ್ತಾರೆ.

ಆತ್ಮವಿಶ್ವಾಸ, ಧೈರ್ಯ, ಮುನ್ನುಗ್ಗುವ ಛಲ ಇರಬೇಕು: ಯಾವುದೇ ಒಂದು ಸಾಧನೆಯನ್ನು ಮಾಡಲು ಮೊದಲು ಬೇಕಾಗಿರು ವುದು ಆತ್ಮವಿಶ್ವಾಸ. ತಮ್ಮ ಮೇಲೆ ತಮಗೆ ಆತ್ಮವಿಶ್ವಾಸ ಇರಬೇಕು, ಧೈರ್ಯದಿಂದ ಮುನ್ನುಗ್ಗುವ ಛಲ ಇರಬೇಕು, ಸೋಲುಗಳಿಗೆ, ಅಡೆತಡೆಗಳಿಗೆ ಪಲಾಯನವಾದಿಯಾಗುವ ಬದಲು ಏನೇ ಬಂದರೂ ಅದನ್ನು ಎದುರಿಸಿ ನಿಲ್ಲುವ ಗುಣ ಇದ್ದವರಿಗೆ ಇಂದಲ್ಲ ನಾಳೆ ಯಶಸ್ಸು ಖಂಡಿತವಾಗಿಯೂ ಸಿಗುತ್ತದೆ. ನನಗೆ ಇದನ್ನು ಹೇಳುವಾಗ ವಿದ್ಯುತ್ ಬಲ್ಬ್ ಅನ್ನು ಕಂಡುಹಿಡಿದ **ಥಾಮಸ್ ಅಲ್ವಾ ಎಡಿಸನ್** ನೆನಪಾಗುತ್ತಾರೆ. ತಮ್ಮ ಸಂಶೋಧನೆಯ ನಿರಂತರ ಪ್ರಯತ್ನದಲ್ಲಿ ಎಷ್ಟೇ ವಿಫಲಗಳಾದರೂ, ಟೀಕೆ–ಟಿಪ್ಪಣಿಗಳು ಏನೇ ಬಂದರೂ ಅಚಲವಾಗಿ ನಿಂತು ತಾನು ಅಂದುಕೊಂಡದ್ದನ್ನು ಸಾಧಿಸಿದ ಅವರ ಬದುಕು ಎಂತವರಿಗಾದರೂ ಉತ್ತೇಜನವನ್ನು ನೀಡುವಂತದ್ದು. ಇಂತಹ ಮನೋಭಾವ ನಮ್ಮ ಯುವಜನತೆಯಲ್ಲಿ ಬಂದಾಗ ಮಾತ್ರ ಹೊಸ ಬಗೆಯ ಸಂಶೋಧನೆಗಳು, ಹೊಸ ಹೊಸ ಸಾಧನೆಗಳು ಹೊರ ಹೊಮ್ಮಲು ಸಾಧ್ಯವಾಗುತ್ತದೆ.

ತಾಳಿದವನು ಬಾಳಿಯಾನು: ಯಶಸ್ಸಿಗೆ ವ್ಯವಸ್ಥಿತವಾದ ಸಿದ್ಧತೆ, ಕಠಿಣವಾದ ಪರಿಶ್ರಮ, ಪ್ರಯತ್ನ ಇವುಗಳಿಗಿಂತ ಮುಖ್ಯವಾಗಿ ತಾಳ್ಮೆ ಬದುಕಿನಲ್ಲಿ ಅತ್ಯಂತ ಪ್ರಧಾನವಾದ ಪಾತ್ರವನ್ನು ವಹಿಸುತ್ತದೆ. ಇಂದಿನ ಬಹುತೇಕ ಯುವಜನತೆಗೆ ಸಿನಿಮಾ, ಸಾಮಾಜಿಕ ಜಾಲತಾಣಗಳು ತೋರಿಸುವ ಬಣ್ಣ, ಬಣ್ಣದ ತೋರ್ಪಡಿಕೆಯ ಸಂಗತಿಗಳಿಂದ, ರಾತ್ರೋ ರಾತ್ರಿ ನಾವು ಪ್ರಸಿದ್ಧರಾಗಬೇಕು, ಹಣ ಸಂಪಾದಿಸಬೇಕು, ನಮ್ಮನ್ನು ಎಲ್ಲ ಗುರುತಿಸಬೇಕು, ಅಧಿಕಾರ, ಪದವಿ ಎಲ್ಲ ಸಿಗಬೇಕೆಂಬ, ಯಶಸ್ಸು ನಮ್ಮ ಬೆಂಬತ್ತಿ ಬರಬೇಕೆಂಬ ಭ್ರಮೆಯಲ್ಲಿ ವಾಸ್ತವತೆ ಮರೆತು ಜೀವಿಸುತ್ತಿದ್ದಾರೆ. ಒಂದೇ ಹಾಡಿನಲ್ಲಿ ಶ್ರೀಮಂತನಾಗಲು, ಉನ್ನತ ಅಧಿಕಾರಿಯಾಗುವಂತಾಗಲು ಜೀವನ ಸಿನಿಮಾವಲ್ಲ ! ಈ ಪ್ರಧಾನ ಅಂಶವನ್ನು ಮನದಟ್ಟು ಮಾಡಿಕೊಂಡು ಸಾವಧಾನದಿಂದ, ತಾಳ್ಮೆಯಿಂದ, ನಮ್ಮ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಿದ್ದಲ್ಲಿ ಖಂಡಿತವಾಗಿಯೂ ಯಶಸ್ಸು ಸಿಗುತ್ತದೆ.

ಬಹುಮಾನ, ಪ್ರಶಸ್ತಿ, ಹೊಗಳಿಕೆ, ಗುರುತಿಸುವಿಕೆ.... ಇವುಗಳಿದ್ದರೆ ಮಾತ್ರ ಯಶಸ್ಸು ಎಂಬ ಮನೋಭಾವವನ್ನು ಮೊದಲು ತೊಡೆದು ಹಾಕಿ ಮಾಡುವ ಕೆಲಸವನ್ನು ಶ್ರದ್ಧೆ, ಆಸಕ್ತಿಗಳಿಂದ ಮಾಡಿದ್ದಲ್ಲಿ ಯಶಸ್ಸು ತಾನಾಗಿಯೇ ನಮ್ಮನ್ನು ಅರಸಿಕೊಂಡು ಬರುತ್ತದೆ. ಯಶಸ್ಸು ಒಮ್ಮೆ ಕೈ ಹಿಡಿದ ನಂತರ ಉಳಿದ ಎಲ್ಲವೂ ಸಿಗುತ್ತದೆ. ನಿರಾಶೆ, ಹತಾಶೆಗಳ ಕಾರ್ಮೋಡವನ್ನು ಬದಿಗೆ ಸರಿಸಿ ಸಕಾರಾತ್ಮಕತೆಯ ಗುಣಗಳ ಮೈಗೂಡಿಸಿಕೊಂಡು ಯಶಸ್ಸಿನ ಪಥದಲ್ಲಿ ಸಾಗೋಣ... ಯಶಸ್ಸಿನ ಹಾದಿಯನ್ನು ತಲುಪೋಣ.

ಒಟ್ಟಾರೆ, ಯಶಸ್ಸು ಎಂಬುದು ನಿಂತ ಜಾಗದಲ್ಲಿ ಕಾಣಿಸಿಕೊಳ್ಳುವ ಮಾಯಾದೀಪವಲ್ಲ. ಬೆವರಿನ ಬೆಲೆಯಲ್ಲಿ ಪರಿಶ್ರಮದ ನೆರಳಲ್ಲಿ ಸತ್ಕಾರ್ಯಗಳ ನಡೆಸುತ್ತಾ ಸಾಗುವ ಹಾದಿಯಲ್ಲಿ ಗೋಚರವಾಗುವ ಜೀವಕುಸುಮ. ಅದನ್ನು ಒಣಗುವ ಮರವಾಗಿ ನೋಡಿಕೊಳ್ಳದೆ ಬದುಕಿಗೆ ಜೊತೆಯಾದ ಅಗತ್ಯದಿ ಮಾಡಬೇಕಾದ ಬದುಕಿನ ಅವಿಭಾಜ್ಯ ಕಾಯಕನಿಷ್ಠೆ ಎಂಬುದನ್ನು ಮನಗಂಡಾಗ ನಮ್ಮ ಉಸಿರಿಗೆ ಬೆರೆತಿರುವ ಹೆಸರು ಉಳಿಯುತ್ತದೆ. ಸಾಧಿಸುವ ಒಂದಷ್ಟು ಮನಸ್ಸುಗಳು ಸಾಧಿಸುವ ಛಲಕ್ಕೆ ಕೀಲಿಕೈಯನ್ನು ನೀಡಿದಂತಾಗುತ್ತದೆ.

ರೆಸಾರ್ಟ್‌ನಂತಾಗಿದೆ ಮೈಸೂರು ಕಲಾಮಂದಿರ ಆವರಣ!

- ಫುಡ್‌ಸ್ಟಾಲ್ ಹಾಕಿ ತಿಂದುಂಡು ಕಂಡಲ್ಲಿ ಬಿಸಾಡಿದರು
- ಗಬ್ಬೆದ್ದು ನಾರಿದ ಕಲಾ, ಸಾಹಿತ್ಯ ಚಟುವಟಿಕೆ ತಾಣ
- ಅಳಿದುಳಿದ ಆಹಾರ ಸೇವಿಸಿದ ಜಾನುವಾರುಗಳು
- ಕಚೇರಿ ಪಕ್ಕದಲ್ಲೇ ಇದ್ದರೂ ಅಧಿಕಾರಿಗಳು ಜಾಣ ಮೌನ

ಮೈಸೂರು, ಫೆ.10(ಬಿಎಲ್‌ಯು)– ಮೈಸೂರಿನ ಸಾಂಸ್ಕೃತಿಕ ಚಟುವಟಿಕೆಯ ತಾಣ ಕಲಾಮಂದಿರದಲ್ಲಿ ರೆಸಾರ್ಟ್ ಅನ್ನು ನಾಚಿಸುವಂತಹ ವಾತಾವರಣ ನಿರ್ಮಾಣವಾಗುತ್ತಿದೆ. ಆವರಣದಲ್ಲಿ ನಿನ್ನೆ ಪಾರ್ಟಿ ಮಾದರಿ ಹಾಕಿರುವ ಫುಡ್ ಸ್ಟಾಲ್‌ಗಳನ್ನು ಮಧ್ಯಾಹ್ನವಾದರೂ ತೆರವು ಮಾಡಿಲ್ಲ. ಆಹಾರ ಸೇವಿಸಿದ ಪೇಪರ್ ತಟ್ಟೆಗಳನ್ನು ಬೇಕಾಬಿಟ್ಟಿ ಬೀಸಾಡಿದ್ದು, ಇಡೀ ವಾತಾವರಣ ಗಬ್ಬೆದ್ದು ನಾರುತ್ತಿತ್ತು.

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ 1985ರಲ್ಲಿ ಮೊದಲ ವಿಶ್ವ ಕನ್ನಡ ಸಮ್ಮೇಳನ ನಡೆಯಿತು. ಮೈಸೂರು ಅರಮನೆಯಲ್ಲಿ ನಡೆದ ಸಮ್ಮೇಳನವನ್ನು ರಾಷ್ಟ್ರಕವಿ ಕುವೆಂಪು ಉದ್ಘಾಟಿಸಿದ್ದರು. ಈ ವೇಳೆ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರು ಕಲಾಮಂದಿರ ಉದ್ಘಾಟಿಸಿದ್ದರು. ಆದರೆ, ಅದರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದವರು ಆರ್. ಗುಂಡೂರಾವ್, ತಾವು ಮುಖ್ಯಮಂತ್ರಿಗಳಾಗಿದ್ದಾಗ. ಇದು ಮೈಸೂರಿನ ಕಲಾಸಂಪತ್ತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯಲ್ಲಿರುವ ಕಲಾ ಮಂದಿರ ಸಾಂಸ್ಕೃತಿಕ ಚಟುವಟಿಕೆಗೆ ಮಾತ್ರ ಸೀಮಿತವಾಗಿರಬೇಕು ಎಂಬ ನಿರ್ಬಂಧವಿತ್ತು. ಅದು ಸರ್ಕಾರಿ ಕಾರ್ಯಕ್ರಮವೇ ಆಗಲಿ ಅಥವಾ ಖಾಸಗಿ ಕಾರ್ಯಕ್ರಮಗಳೇ ಆಗಲಿ ಸಂಸ್ಕೃತಿಗೆ ಮೀಸಲಾದ ಕಾರ್ಯಕ್ರಮ ಮಾತ್ರ ನಡೆಯಬೇಕು. ಯಾವುದೇ ಕಾರಣಕ್ಕೂ ಈ ಲಕ್ಷ್ಮಣ ರೇಖೆಯನ್ನು ದಾಟಬಾರದು ಎಂಬ ನಿಯಮವಿದೆ. ಆದರೆ ನಂತರದ ವರ್ಷಗಳಲ್ಲಿ ಮದುವೆ, ಬೀಗರ ಔತಣ ಬಿಟ್ಟು ಉಳಿದೆಲ್ಲಾ ಕಾರ್ಯಕ್ರಮಗಳು ನಡೆದಿವೆ; ನಡೆಯುತ್ತಿವೆ.

ಕಾರ್ಯಕ್ರಮದ ಸಂದರ್ಭದಲ್ಲಿ ಊಟದ ವ್ಯವಸ್ಥೆ ಮಾಡಲು ಕೆಲವು ಕಟ್ಟುನಿಟ್ಟಿನ ನಿಯಮ ವಿಧಿಸಲಾಗಿದೆ. ಆಹಾರ ತಯಾರಿಕೆಗೆ ಇಲ್ಲಿ ಅವಕಾಶವಿಲ್ಲ. ಆದರೆ ಕಲಾಮಂದಿರದ ಬಲಭಾಗದಲ್ಲಿ ಪೆಂಡಾಲ್ ಹಾಕಿ ಹೊರಗಿನಿಂದ ತಂದ ಆಹಾರವನ್ನು ವಿತರಣೆ ಮಾಡಬಹುದು. ಆಹಾರ ವಿತರಣೆ ನಂತರ ಆ ಸ್ಥಳವನ್ನು ಸ್ವಚ್ಛಗೊಳಿಸಬೇಕು ಎಂದು ಕಟ್ಟಾದೇಶ ಮಾಡಲಾಗಿದೆ.





ಕಲಾಮಂದಿರದ ಆವರಣದಲ್ಲಿ ಪಾರ್ಟಿ ಮಾದರಿ ಹಾಕಿರುವ ಫುಡ್ ಸ್ಟಾಲ್‌ಗಳನ್ನು ತೆರವು ಮಾಡಿಲ್ಲ. ಆಹಾರ ಸೇವಿಸಿದ ಪೇಪರ್ ತಟ್ಟೆಗಳನ್ನು ಬೇಕಾಬಿಟ್ಟಿ ಬೀಸಾಡಿರುವುದು.

ಆದರೆ ನಿನ್ನೆ ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮದ ಸಂದರ್ಭದಲ್ಲಿ ಸಂಸ್ಥೆಯೊಂದು ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿದೆ. ಕಲಾಮಂದಿರದ ಪ್ರವೇಶ ದ್ವಾರದ ಪಕ್ಕದಲ್ಲಿ ಪಾರ್ಟಿಗಾಗಿ ಹಾಕುವ ಫುಡ್ ಸ್ಟಾಲ್‌ಗಳನ್ನು ಹಾಕಲಾಗಿದೆ ಊಟ ಮಾಡಿದ ತಟ್ಟೆಗಳನ್ನು ಅಲ್ಲೇ ಬಿಸಾಡಲಾಗಿದೆ.

ರೆಸಾರ್ಟ್‌ಗಳಲ್ಲಿ ಮದುವೆ ಸೇರಿದಂತೆ ಇತರೆ ಮನೋರಂಜನಾ ಕಾರ್ಯಕ್ರಮ ಮುಗಿದ ನಂತರ ಇರುವ ವಾತಾವರಣ ಇಂದು ಕಲಾಮಂದಿರದಲ್ಲಿ ಕಣ್ಣಿಗೆ ಕಟ್ಟಿತ್ತು.

ಜನರು ಊಟ ಮಾಡಿ ಬೇಡವೆಂದು ಬೀಸಾಡಿರುವ ಆಹಾರ ತಟ್ಟೆಯ ಉಳಿದ ಆಹಾರವನ್ನು ಹಸುಗಳು ಸೇವಿಸುತ್ತಿದ್ದವು. ಮಧ್ಯಾಹ್ನ 12 ಗಂಟೆಯಾದರೂ ಯಾರೂ ಇದನ್ನೆಲ್ಲಾ ತೆರವು ಮಾಡುವ ಗೋಜಿಗೆ ಹೋಗಿಲ್ಲ.ಇದರಿಂದ ಇಡೀ ವಾತಾವರಣ ಗಬ್ಬೆದ್ದು ನಾರುತ್ತಿತ್ತು.

ನೋಟಿಸ್ ನೀಡಿ ದಂಡ ವಿಧಿಸಲಾಗುವುದು

> ಕಲಾಮಂದಿರದಲ್ಲಿ ಫುಡ್‌ಸ್ಟಾಲ್‌ಗಳ ಹಾಕಿ ವಾತಾವರಣ ಹದಗೆಡಿಸಿರುವ ಸಂಸ್ಥೆಗೆ ನೋಟಿಸ್ ನೀಡಿ, ದಂಡ ವಿಧಿಸಲಾಗುವುದು. ಸಭಾಂಗಣವನ್ನು ಬಾಡಿಗೆಗೆ ನೀಡುವ ಸಂದರ್ಭದಲ್ಲಿ ಹಲವು ಷರತ್ತುಗಳನ್ನು ವಿಧಿಸಲಾಗುತ್ತದೆ. ಬಹಳಷ್ಟು ಸಂಸ್ಥೆಗಳು ಇದನ್ನು ಪಾಲಿಸುತ್ತವೆ. ಆದರೆ ಕೆಲವೊಂದು ಸಂಸ್ಥೆಗಳು ಇದನ್ನು ಗಾಳಿಗೆ ತೂರುತ್ತವೆ. ಊಟದ ವ್ಯವಸ್ಥೆ ಮಾಡಿದ್ದರೆ ಕಾರ್ಯಕ್ರಮ ಮುಗಿದ ನಂತರ ವಾತಾವರಣವನ್ನು ಸ್ವಚ್ಛ ಮಾಡಬೇಕು ಎಂಬ ನಿಯಮ ವಿಧಿಸಲಾಗಿದೆ. ಆದರೆ ಸಂಸ್ಥೆ ಇದನ್ನು ಪಾಲಿಸಿಲ್ಲ. ಆದ ಕಾರಣ ಆ ಸಂಸ್ಥೆಗೆ ನೋಟಿಸ್ ಜಾರಿ ಮಾಡಿ, ದಂಡ ವಿಧಿಸಲಾಗುವುದು.
>
> –ಡಾ.ಸುದರ್ಶನ್, ಸಹಾಯಕ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕಲಾಮಂದಿರದ ಕಟ್ಟಡದಲ್ಲೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಹಾಗೂ ಸಹಾಯಕ ನಿರ್ದೇಶಕರ ಕಚೇರಿ ಇದೆ. ಆದರೆ ಇಲಾಖೆಯ ಅಧಿಕಾರಿಗಳು ಹಾಗೂ ನೌಕರರು ಇದನ್ನು ನೋಡಿಲ್ಲವೆ?

ಮೈಸೂರಿನ ಸಾಂಸ್ಕೃತಿಕ ಕಿರೀಟಕ್ಕೆ ಕಲಾಮಂದಿರ ಮುಕುಟವಾಗಿದೆ. ರಾಜಪ್ರಭುತ್ವದ ನಂತರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೈಸೂರಿನಲ್ಲಿ ನಿರ್ಮಾಣವಾದ ಮೊದಲ ದೊಡ್ಡ ಕಟ್ಟಡವಾಗಿದೆ. ಕಲಾಮಂದಿರದಲ್ಲಿ ನಡೆಯುವ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಜನರು ಗೌರವ ಭಾವದಿಂದ ನೋಡುತ್ತಾರೆ.

ಆದರೆ ಇತ್ತೀಚಿಗೆ ಕಲಾಮಂದಿರದಲ್ಲಿ ಅದರ ಮಹತ್ವಕ್ಕೆ ಧಕ್ಕೆಯಾಗುವ ಹಲವು ಕಾರ್ಯಕ್ರಮ ನಡೆಯುತ್ತಿದೆ. ಅಷ್ಟೆ ಅಲ್ಲದೆ ಕಲಾಮಂದಿರದ ವಾತಾವರಣವನ್ನು ಹಾಳು ಮಾಡುತ್ತಿದ್ದಾರೆ.

ಕಲಾಮಂದಿರವನ್ನು ಬಾಡಿಗೆಗೆ ನೀಡುವ ಸಂದರ್ಭದಲ್ಲಿ ಅಧಿಕಾರಿಗಳು ಈಗಲಾದರೂ ಕಟ್ಟುನಿಟ್ಟಾದ ನಿಯಮ ವಿಧಿಸಬೇಕು. ಇಲ್ಲದಿದ್ದರೆ ರೆಸಾರ್ಟ್‌ಗಳೂ ಒಂದೇ ಕಲಾಮಂದಿರವೂ ಒಂದೇ ಭಾವನೆ ಜನರಲ್ಲಿ ಬೇರೂರುತ್ತದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



ಅಥ್ಲೆಟಿಕ್ಸ್‌ನಲ್ಲಿ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ಗೆ ಬಹುಮಾನ



ಮೈಸೂರು ಜಿಲ್ಲೆಯ ವಿಶೇಷಚೇತನರ ಕ್ರೀಡಾಕೂಟದಲ್ಲಿ ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಅಥ್ಲೆಟಿಕ್ಸ್‌ನ ವಿವಿಧ ವಿಭಾಗಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

ಮೈಸೂರು,ಫೆ.10–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಶೇಷ ಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ನಡೆದ ಮೈಸೂರು ಜಿಲ್ಲೆಯ ವಿಶೇಷ ಚೇತನರ ಕ್ರೀಡಾಕೂಟದಲ್ಲಿ ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಅಥ್ಲೆಟಿಕ್ಸ್‌ನ ವಿವಿಧ ವಿಭಾಗಗಳಲ್ಲಿ ಭಾಗವಹಿಸಿ ತಮ್ಮ ಅಸಾಧಾರಣ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಾರೆ. ಅಥ್ಲೆಟಿಕ್ಸ್ ವಿಭಾಗದಲ್ಲಿ 9 ಪ್ರಥಮ, 9 ದ್ವಿತೀಯ ಹಾಗೂ 6 ತೃತೀಯ ಬಹುಮಾನ ಪಡೆದಿದ್ದಾರೆ. ವಿಜೇತರೊಂದಿಗೆ ದೈಹಿಕ ಶಿಕ್ಷಣ ಶಿಕ್ಷಕ ಹೆಚ್.ಎನ್.ಮಹದೇವಸ್ವಾಮಿ, ಪ್ರಾಂಶುಪಾಲ ಬಿ.ಇಳಂಗೋವನ್, ಉಪನ್ಯಾಸಕ ಎನ್.ಎಂ.ಶಿವಕುಮಾರಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಥ್ರೋಬಾಲ್‌ನಲ್ಲಿ ಪ್ರಥಮ, ವಾಲಿಬಾಲ್‌ನಲ್ಲಿ ದ್ವಿತೀಯ ಸ್ಥಾನ ಪಡೆದ ಮಹಾಜನ ಕಾಲೇಜು ತಂಡಗಳು



ಮೈಸೂರಿನ ಶ್ರೀರಾಂಪುರದ ಕ್ರೈಸ್ಟ್ ಕಾಲೇಜಿನಲ್ಲಿ ಆಯೋಜಿಸಿದ್ದ ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಹಾಗೂ ಪುರುಷರ ವಾಲಿಬಾಲ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನವನ್ನು ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಪಡೆದುಕೊಂಡಿತು.

ಮೈಸೂರು, ಫೆ.10–ಮೈಸೂರಿನ ಶ್ರೀರಾಂಪುರದ ಕ್ರೈಸ್ಟ್ ಕಾಲೇಜಿನಲ್ಲಿ ಆಯೋಜಿಸಿದ್ದ, ಮಹಿಳೆಯರ ಅಂತರ ಕಾಲೇಜು ಥ್ರೋಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಹಾಗೂ ಪುರುಷರ ವಾಲಿಬಾಲ್ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನವನ್ನು ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಪಡೆದುಕೊಂಡಿತು.

ವಿಜೇತರಿಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಅಭಿನಂದಿಸಲಾಯಿತು. ಮಹಿಳೆಯರ ಥ್ರೋಬಾಲ್ ತಂಡದ ನಾಯಕಿ ಸಾಗರಿ ಕೆ.ಎ., ದೈಹಿಕ ಶಿಕ್ಷಣ ನಿರ್ದೇಶಕ ಪಿ.ಎಸ್.ಮಧುಸೂಧನ, ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಡಾ.ಹೆಚ್.ಎನ್. ಭಾಸ್ಕರ್ ಹಾಗೂ ಪುರುಷರ ವಾಲಿಬಾಲ್ ತಂಡದ ನಾಯಕ ಕಾರ್ತಿಕ್, ಸೋಮಶೇಖರ್ ಕೆ, ಕವಿತಾ, ಹರ್ಷಿತಾ ಟಿ.ಜಿ, ಸ್ಪಂದನಾ ಎಂ.ಕೆ., ಕೃತಿಕಾ, ಸಂಜನಾ ಎಂ.ಕೆ., ಅನುಶ್ರೀ, ಪ್ರತೀಕ್ಷ್ ಎಂ.ಟಿ., ಶಿವಕುಮಾರ್, ಕುಶಾಲ್ ಹೆಚ್.ಜೆ., ಮನು ಕಿರಣ್ ಯು.ಪಿ, ರಕ್ಷಿತ್, ಮನಿಷ್ ಬಿ.ವಿ., ತೇಜಸ್ಸ್ ಎನ್.ಆರ್., ವರುಣ್ ಜೆ. ಸುಪ್ರೀತ್ ಎಂ, ಶಶಾಂಕ್, ಶಿವ ಡಿ.ಬಿ., ಆಕಾಶ್ ಇನ್ನಿತರರು ಉಪಸ್ಥಿತರಿದ್ದರು.

ಮುಖ್ಯಮಂತ್ರಿಗಳ ಪದಕ ಪ್ರದಾನ...




ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯ ಹಾಗೂ ಕರ್ನಾಟಕ ಸರ್ಕಾರವು ಆಯೋಜಿಸಿದ್ದ 2024–25ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಎನ್‌ಓ ಡಾ.ಅನಿಲ್‌ಕುಮಾರ್ ರಾಮಯ್ಯ ಅವರಿಗೆ ಮುಖ್ಯಮಂತ್ರಿಗಳ ಪ್ರಶಸ್ತಿ, ಕಾರ್ಡ್ ಹಾಗೂ ಪದಕವನ್ನು ಮುಖ್ಯಮಂತ್ರಿಗಳ ಅನುಪಸ್ಥಿತಿಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹಾಗೂ ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯ ಡಿಡಿಜಿ ಏರ್ ಕಮೋಡೋರ್ ಎಸ್.ಬಿ.ಅರುಣ್‌ಕುಮಾರ್ ನೀಡಿ ಸನ್ಮಾನಿಸಿದರು. ಈ ವೇಳೆ ಎನ್‌ಸಿಸಿ ಕೆಡೆಟ್ ಯೋಗೇಶ್ವರ್, ಎಸ್.ಲಕ್ಷ್ಮೀ ಅವರಿಗೂ ಪುರಸ್ಕರಿಸಲಾಯಿತು.


ಕ್ರೀಡಾಶಾಲೆ, ನಿಲಯಗಳಿಗೆ ಬಾಲಕ, ಬಾಲಕಿಯರ ಆಯ್ಕೆ ಪ್ರಕ್ರಿಯೆ

ಮೈಸೂರು,ಫೆ.10–ಯುವ ಸಬಲೀಕರಣ–ಕ್ರೀಡಾ ಇಲಾಖೆ ವತಿಯಿಂದ ರಾಜ್ಯದಲ್ಲಿ ನಡೆಸುತ್ತಿರುವ ಕ್ರೀಡಾಶಾಲೆ, ನಿಲಯಗಳಿಗೆ 14 ವರ್ಷದೊಳಗಿನ(01/06/2011 ನಂತರ ಜನಿಸಿದವರು) ಮತ್ತು 2025–26ನೇ ಸಾಲಿಗೆ 8ನೇ ತರಗತಿಗೆ ಹಾಗೂ 18 ವರ್ಷದೊಳಗಿನ (01/06/2007ರ ನಂತರ ಜನಿಸಿದವರು) ಮತ್ತು 2025–26ನೇ ಸಾಲಿಗೆ ಪ್ರಥಮ ಪಿಯುಸಿ ತರಗತಿಗೆ ಪ್ರವೇಶ ಪಡೆಯಲು ಅರ್ಹತೆ ಪಡೆಯುವ ಕಿರಿಯರ ಮತ್ತು ಹಿರಿಯರ ವಿಭಾಗದ ಬಾಲಕ, ಬಾಲಕಿಯರಿಗೆ ಅಥ್ಲೆಟಿಕ್ಸ್, ಬಾಸ್ಕೆಟ್‌ಬಾಲ್, ಸೈಕ್ಲಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಖೋ–ಖೋ, ಕಬಡ್ಡಿ, ಹಾಕಿ, ಜುಡೋ, ವಾಲಿಬಾಲ್, ಕುಸ್ತಿ, ಆರ್ಚರಿ ಮತ್ತು ಫೆನ್ಸಿಂಗ್ ಈ ಕ್ರೀಡೆಗಳಲ್ಲಿ ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು.

ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಫೆ.13 ಮತ್ತು 14ರಂದು ಬೆಳಗ್ಗೆ 9ರಿಂದ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. ಜಿಲ್ಲೆಯ 9 ತಾಲೂಕುಗಳಲ್ಲಿ ನಡೆದ ತಾಲೂಕು ಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗದೆ ಇರುವವರು ಸದರಿ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಆಯ್ಕೆಯಾದ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ನೀಡಲಾಗಿರುವ ಅರ್ಜಿ ನಮೂನೆಯನ್ನು ಭರ್ತಿಮಾಡಿ ಇತ್ತೀಚಿನ ಭಾವಚಿತ್ರವನ್ನು ವೈದ್ಯಕೀಯ ದೃಢೀಕರಣ ಪತ್ರ, ಆಧಾರ್ ಕಾರ್ಡನ್ನು ಲಗತ್ತಿಸಿ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ ದೂ.ಸಂ: 0821–2564179, ರವೀಂದ್ರ ವಾಲಿಬಾಲ್ ತರಬೇತುದಾರ ಮೊ: 82778 21212, ರಾಮಸ್ವಾಮಿ ಅಥ್ಲೆಟಿಕ್ಸ್ ತರಬೇತುದಾರ ಮೊ: 9449300330 ಸಂಪರ್ಕಿಸಿ.

ಪೊಲೀಸ್ ಕಾನ್‌ಸ್ಟೇಬಲ್ ಕಾರು ಡಿಕ್ಕಿ: ಇಬ್ಬರು ಪೊಲೀಸ್ ಸೇರಿ ನಾಲ್ವರಿಗೆ ಗಾಯ

ಮೈಸೂರಿನ ಒಂಟಿಕೊಪ್ಪಲು ದೇವಸ್ಥಾನ ಬಳಿ ಕೆಆರ್‌ಎಸ್ ರಸ್ತೆಯಲ್ಲಿ ವಾಹನ ತಪಾಸಣೆ ವೇಳೆ ಮುಂಜಾನೆ 2.30 ಗಂಟೆ ವೇಳೆ ಘಟನೆ



ಅಪಘಾತದಲ್ಲಿ ಗಾಯಗೊಂಡಿರುವ ಪೊಲೀಸ್ ಕಾನ್‌ಸ್ಟೇಬಲ್

ಮೈಸೂರು,ಫೆ.10(ಆರ್‌ಕೆ)– ಸಂಚಾರ ಠಾಣೆ ಕಾನ್‌ಸ್ಟೇಬಲ್ ಚಾಲನೆ ಮಾಡುತ್ತಿದ್ದ ಕಾರು ಡಿಕ್ಕಿ ಹೊಡೆದ ಪರಿಣಾಮ ವಾಹನಗಳ ತಪಾಸಣಾ ಕಾರ್ಯಾಚರಣೆ ನಡೆಸುತ್ತಿದ್ದ ಇಬ್ಬರು ಪೊಲೀಸರು ಸೇರಿ ನಾಲ್ವರು ಗಾಯಗೊಂಡ ಘಟನೆ ಮೈಸೂರಿನ ಒಂಟಿಕೊಪ್ಪಲು ದೇವಸ್ಥಾನದ ಬಳಿ ಕೆಆರ್‌ಎಸ್ ರಸ್ತೆಯಲ್ಲಿ ಸೋಮವಾರ ಮುಂಜಾನೆ ಸಂಭವಿಸಿದೆ.

ಮೈಸೂರಿನ ದೇವರಾಜ ಸಂಚಾರ ಠಾಣೆ ಕಾನ್‌ಸ್ಟೇಬಲ್ ಅಶೋಕ, ತಮ್ಮ ಮಾರುತಿ ಸ್ವಿಫ್ಟ್ ಕಾರಿಂದ (ಕೆಎ 41–ಪಿ 7919) ಡಿಕ್ಕಿ ಹೊಡೆದ ಪರಿಣಾಮ ವಿವಿಪುರಂ ಠಾಣೆ ಸಿಬ್ಬಂದಿ ಯೋಗೇಶ್, ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್)ಯ ಜಗದೀಶ್ ಹಾಗೂ ಬನ್ನೂರಿನ ಬೈಕ್ ಸವಾರರಾದ ಚಂದ್ರಶೇಖರ್, ರಾಜು ಗಾಯಗೊಂಡಿದ್ದು, ಅವರನ್ನು ವಿವಿಪುರಂನ ಡಿಆರ್‌ಎಂ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕಳೆದ ರಾತ್ರಿಯಿಡೀ ಮೈಸೂರು ನಗರದಾದ್ಯಂತ ಪೊಲೀಸರು ವಾಹನ ತಪಾಸಣಾ ಕಾರ್ಯಾಚರಣೆ ನಡೆಸುತ್ತಿದ್ದರು. ಕೆಆರ್‌ಎಸ್ ರಸ್ತೆಯ ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿ ದೇವಸ್ಥಾನದ ಬಳಿಯ ಬ್ರಿಗೇಡ್ ಅಪಾರ್ಟ್‌ಮೆಂಟ್ ಎದುರು ವಾಹನಗಳ ತಪಾಸಣೆ ಮಾಡುತ್ತಿದ್ದಾಗ ಇಎಸ್‌ಐ ಆಸ್ಪತ್ರೆ ಕಡೆಯಿಂದ ಬಂದ ಅಶೋಕ ಅವರ ಕಾರು, ಪೊಲೀಸ್ ಸಿಬ್ಬಂದಿ ಹಾಗೂ ಇಬ್ಬರು ಬೈಕ್ ಸವಾರರಿಗೆ ಡಿಕ್ಕಿ ಹೊಡೆದು, ನಂತರ ರಸ್ತೆ ಬದಿಯ ವಿದ್ಯುತ್ ಕಂಬಕ್ಕೆ ಗುದ್ದಿ ನಿಂತಿದೆ. ವಿವಿ ಪುರಂ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ವಾಹನಗಳನ್ನು ವಶಕ್ಕೆ ಪಡೆದು, ತನಿಖೆ ನಡೆಸುತ್ತಿದ್ದಾರೆ.

ದೆಹಲಿ ಚುನಾವಣೆ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನ ಪೋಸ್ಟ್

ಮೈಸೂರು ಉದಯಗಿರಿ ಪೊಲೀಸ್ ಠಾಣೆ ಮುಂದೆ ಉದ್ವಿಗ್ನ ಪರಿಸ್ಥಿತಿ; ಕಲ್ಲು ತೂರಾಟ; ಲಘು ಲಾಠಿ ಪ್ರಹಾರ; ಅಶ್ರುವಾಯು ಪ್ರಯೋಗ



- ಆರೋಪಿ ಯುವಕರ ವಿರುದ್ಧ ಸುಮೋಟೋ ಕೇಸ್ ದಾಖಲು; ಓರ್ವನ ವಶಕ್ಕೆ ಪಡೆದ ಪೊಲೀಸರು
- ಎನ್.ಆರ್.ಕ್ಷೇತ್ರದಾದ್ಯಂತ ಬಿಗುವಿನ ವಾತಾವರಣ
- ಭಾರಿ ಪೊಲೀಸ್ ಬಂದೋಬಸ್ತ್


ಮೈಸೂರು, ಫೆ.10–ದೆಹಲಿ ವಿಧಾನ ಸಭಾ ಫಲಿತಾಂಶ ಸಂಬಂಧ ಅವಹೇಳನಕಾರಿ ಪದ ಬಳಸಿ ಸಾಮಾಜಿಕ ಜಾಲತಾಣದಲ್ಲಿ ಯುವಕರಿಬ್ಬರು ಪೋಸ್ಟ್ ಮಾಡಿದ್ದ ವಿಚಾರದಲ್ಲಿ ಉದಯಗಿರಿ ಪೊಲೀಸ್ ಠಾಣೆ ಮುಂಭಾಗ ಸೋಮವಾರ ರಾತ್ರಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು. ಕಲ್ಯಾಣಗಿರಿಯ ತ್ರಿವೇಣಿ ಸರ್ಕಲ್ ಬಳಿಯ ನಿವಾಸಿ ಎಂದು ಹೇಳಲಾದ ವ್ಯಕ್ತಿಯೋರ್ವ ದೆಹಲಿ ವಿಧಾನ ಸಭಾ ಚುನಾವಣೆ ಫಲಿತಾಂಶಕ್ಕೆ ಸಂಬಂಧಿಸಿದಂತೆ ಕೆಲ ರಾಜಕಾರಣಿಗಳ ಎಡಿಟೆಡ್ ಚಿತ್ರಗಳೊಂದಿಗೆ ಅನ್ಯ ಧರ್ಮವನ್ನು ಅವಹೇಳನ ಮಾಡುವಂತಹ ವಾಕ್ಯಗಳನ್ನು ಆಯಾಯ ರಾಜಕಾರಣಿಗಳ ಚಿತ್ರದ ಮೇಲೆ ನಮೂದಿಸಿರುವ ವಿಚಾರ ಹರಡುತ್ತಿದ್ದಂತೆ ರೊಚ್ಚಿಗೆದ್ದ ಸಾವಿರಾರು ಮಂದಿ ಉದಯಗಿರಿ ಪೊಲೀಸ್ ಠಾಣೆ ಮುಂಭಾಗ ಜಮಾಯಿಸಿ, ಆರೋಪಿಯನ್ನು ಬಂಧಿಸುವಂತೆ ಆಗ್ರಹಿಸಿದರು. ಆದರೆ ಅಷ್ಟರಲ್ಲಾಗಲೇ ಉದಯಗಿರಿ ಠಾಣೆ ಪೊಲೀಸರು ಈ ಸಂಬಂಧ ಸುರೇಶ್ ಹಾಗೂ ಸತೀಶ್ ಇನ್ನಿತರರ ವಿರುದ್ಧ ಸುಮೋಟೋ ಪ್ರಕರಣ ದಾಖಲಿಸಿಕೊಂಡಿದ್ದಾರೆ ಎನ್ನಲಾಗಿದ್ದು, ಆರೋಪಿ ಸತೀಶ್ ಎಂಬಾತನನ್ನು ವಶಕ್ಕೆ ಪಡೆದು, ಠಾಣೆಗೆ ಕರೆತಂದಿದ್ದರು.

ಠಾಣೆ ಮುಂದೆ ಜಮಾಯಿಸಿದ್ದ ಉದ್ವಿಗ್ನ ಗುಂಪು ಈ ವಿಚಾರವಾಗಿ ಪೊಲೀಸರೊಂದಿಗೆ ಮಾತಿನ ಚಕಮಕಿ ನಡೆಸಿ, ಠಾಣೆಗೆ ನುಗ್ಗಲು ಯತ್ನಿಸಿದ್ದು, ಕೆಲವರು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದರು ಎಂದು ಹೇಳಲಾಗಿದೆ. ಸ್ಥಳಕ್ಕೆ ಡಿಸಿಪಿ ಮುತ್ತುರಾಜ್ ಸೇರಿದಂತೆ ಹಿರಿಯ ಅಧಿಕಾರಿಗಳು ದೌಡಾಯಿಸಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಅರಿತ ಅಧಿಕಾರಿಗಳು ಮೀಸಲು ಪೊಲೀಸ್ ಪಡೆಯನ್ನು ಕರೆಸಿಕೊಂಡಿದ್ದಲ್ಲದೆ ಉದಯಗಿರಿ ಪೊಲೀಸ್ ಠಾಣೆ ಸಂಪರ್ಕ ರಸ್ತೆಗಳನ್ನು ಬ್ಯಾರಿಕೇಡ್ ಹಾಕಿ, ಬಂದ್ ಮಾಡಿದರು. ಅತ್ತ ಯಾವುದೇ ವಾಹನವಾಗಲೀ, ಜನರ ಓಡಾಟವಾಗಲೀ ಇರದಂತೆ ನಿರ್ಬಂಧ ವಿಧಿಸಿದ್ದರು.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಅವರು, ಉದ್ರಿಕ್ತ ಜನರನ್ನು ಸಮಾಧಾನಪಡಿಸಲು ಯತ್ನಿಸಿದರು. ಪೊಲೀಸರು ಈಗಾಗಲೇ ಸುಮೋಟೋ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ. ನಮಗೆ ಬೇಕಾಗಿರುವುದು ಕಾನೂನು ಕ್ರಮ. ಅದನ್ನು ಪೊಲೀಸರು ಮಾಡುತ್ತಿದ್ದಾರೆ. ಹೀಗಾಗಿ ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ಕೊಡಬಾರದು. ಪೊಲೀಸ್ ಠಾಣೆಗೆ ನುಗ್ಗುವ ಪ್ರಯತ್ನವನ್ನಾಗಲೀ, ಪೊಲೀಸರ ಮೇಲೆ ಹಲ್ಲೆಗೆ ಮುಂದಾಗುವುದಾಗಲೀ ಮಾಡಬಾರದು. ನಮ್ಮ ಪೊಲೀಸರು ಕಾನೂನು ಪ್ರಕಾರ ಸರಿಯಾದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು. ಆದರೂ, ಕೆಲವರು ಪೊಲೀಸರು ಹಾಗೂ ಠಾಣೆಯ ಮೇಲೆ ಕಲ್ಲು ತೂರಾಟ ನಡೆಸಿದ ಪರಿಣಾಮ, ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಲ್ಲದೆ ಹಲವು ಸುತ್ತು ಅಶ್ರುವಾಯು ಸಿಡಿಸಿ, ಉದ್ರಿಕ್ತ ಗುಂಪನ್ನು ಚದುರಿಸಿದ್ದಾರೆ. ಉದಯಗಿರಿ ಪೊಲೀಸ್ ಠಾಣೆ ಮುಂಭಾಗ ಸಶಸ್ತ್ರ ಮೀಸಲು ಪಡೆ ಪೊಲೀಸರನ್ನು ನಿಯೋಜಿಸಲಾಗಿದೆ. ಎನ್.ಆರ್. ಕ್ಷೇತ್ರ ವ್ಯಾಪ್ತಿಯಲ್ಲಿ ಪೊಲೀಸ್ ಗಸ್ತು ಏರ್ಪಡಿಸಲಾಗಿದೆ. ಹಿರಿಯ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದಾರೆ.

ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಆಯಕಟ್ಟಿನ ಪ್ರದೇಶಗಳಲ್ಲಿ ಸಶಸ್ತ್ರದೊಂದಿಗೆ ಹೆಚ್ಚಿನ ಪೊಲೀಸರ ನಿಯೋಜಿಸಲಾಗಿದೆ. ಮೀಸಲು ಪೊಲೀಸ್ ಪಡೆ ಜೊತೆಗೆ ಮೈಸೂರು ನಗರದ ಸಂಚಾರ ವಿಭಾಗದ ಠಾಣೆಗಳೂ ಸೇರಿದಂತೆ ಎಲ್ಲಾ ಠಾಣೆಗಳ ಹಿರಿಯ ಅಧಿಕಾರಿಗಳನ್ನು ಆಯಕಟ್ಟಿನ ಪ್ರದೇಶಗಳಿಗೆ ಉಸ್ತುವಾರಿಗಳಾಗಿ ನಿಯೋಜಿಸಲಾಗಿದೆ. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಕಾನೂನು–ಸುವ್ಯವಸ್ಥೆ ಡಿಸಿಪಿ ಮುತ್ತುರಾಜ್ ಅವರು, ಉದಯಗಿರಿ ಠಾಣೆಯಲ್ಲೇ ಮೊಕ್ಕಾಂ ಹೂಡಿದ್ದು, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ ಅವರು ಪೊಲೀಸ್ ಗಸ್ತಿನ ಉಸ್ತುವಾರಿ ವಹಿಸಿದ್ದಾರೆ ಎಂದು ಹೇಳಲಾಗಿದೆ. ನಗರದಲ್ಲಿ ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಪೊಲೀಸ್ ಇಲಾಖೆ ಸಂಪೂರ್ಣ ಸಜ್ಜಾಗಿದೆ ಎಂದು ಮೂಲಗಳು ತಿಳಿಸಿವೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ




ಮೈಸೂರು,ಫೆ.10–ವಾಜಮಂಗಲ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಫೆ.11ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಮೆಲ್ಲಹಳ್ಳಿ, ಗಳಿಗರಹುಂಡಿ, ಹಾರೋಹಳ್ಳಿ, ಹಳೆಕೆರಿಹುಂಡಿ, ಶಿವಪುರ, ಹಲಗಯ್ಯನಹುಂಡಿ, ಪಿಲ್ಲಹಳ್ಳಿ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ವರುಣ, ದಂಡಿಕೆರೆ, ವಾಜಮಂಗಲ, ಮೊಸಂಬಾಯನಹಳ್ಳಿ, ಯಾಂದಳ್ಳಿ, ಸಜ್ಜೆಹುಂಡಿ, ಜಂತಗಳ್ಳಿ, ಮಹದೇಶ್ವರ ಬಡಾವಣೆ, ಇಂಡಸ್ ಬಡಾವಣೆ, ಭೂಗತಗಳ್ಳಿ ಗೇಟ್, ಚಿಕ್ಕಹಳ್ಳಿ, ಚೋರನಹಳ್ಳಿ, ಭೂಗತಗಳ್ಳಿ, ನಾಡನಹಳ್ಳಿ, ಪೊಲೀಸ್ ಬಡಾವಣೆ, ನೇತಾಜಿನಗರ, ಐಪಿಎಸ್‌ನಗರ, ಲಾಲ್ ಬಹದ್ದೂರು ಶಾಸ್ತ್ರಿ ನಗರ, ಎಸ್‌ಎಂಪಿ ಡೆವಲಪರ್ಸ್, ಶೋಭ ಡೆವಲಪರ್ಸ್, ಯಶಸ್ವಿನಿ ಹಿಲ್ ವ್ಯೂ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ಜಂತಗಳ್ಳಿ, ಚಿಕ್ಕಹಳ್ಳಿ, ಚೋರನಹಳ್ಳಿ, ಯಾಂದಳ್ಳಿ, ಜೆ.ಎಸ್.ಎಸ್. ಬಡಾವಣೆ, ವಸಂತನಗರ, ಸುಕದಾಯಿ ಬಡಾವಣೆ, ಶಾಂತವೇರಿ ಗೋಪಾಲಗೌಡ ನಗರ, ಸಪ್ತಮಾತೃಕ ಬಡಾವಣೆ, ಸಹೃದಯ ನಗರ, ಪ್ರಕೃತಿ ಬಡಾವಣೆ, ಎ.ಟಿ.ಎಂ.ಇ ಕಾಲೇಜು, ಹೆಚ್.ಎನ್.ಕೆ ಇಂಡಸ್ಟ್ರೀಸ್, ಮೈಸೆಮ್ ಕಾಲೇಜು ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ದೊಡ್ಡಕೆರೆ ಮೈದಾನ ವಿದ್ಯುತ್ ವಿತರಣಾ ವ್ಯಾಪ್ತಿ ತುರ್ತು ಕಾಮಗಾರಿ ನಿಮಿತ್ತ ಸೋನಾರ್ ಸ್ಟ್ರೀಟ್, ಕುರುಬಗೇರಿ, ರಾಮಸ್ವಾಮಿ ವೃತ್ತ, ರಮಾವಿಲಾಸ ರಸ್ತೆ, ಮುಡಾ ಕಚೇರಿ, ದಿವಾನ್ಸ್ ರಸ್ತೆ, ಶಾಂತಲಾ ಟಾಕೀಸ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗೆ ಅಭಿನಂದನೆ...



ಸಂಸ್ಕೃತ ಕಾವೇರಿ ರಾಜ್ಯ ಸಮ್ಮೇಳನದ ಯಶಸ್ಸಿಗೆ ಸಹಕರಿಸಿದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರನ್ನು ಸ್ವಾಗತ ಸಮಿತಿ ಅಧ್ಯಕ್ಷರೂ ಆದ ಶಾಸಕ ಶ್ರೀವತ್ಸ ಅಭಿನಂದಿಸಿ, ಆಶೀರ್ವಾದ ಪಡೆದರು. ಈ ವೇಳೆ ಮಾಜಿ ಶಾಸಕ ಮಾರುತಿರಾವ್ ಪವಾರ್, ಶ್ರೀ ಭಾನುಪ್ರಕಾಶ್ ಶರ್ಮ, ಸಂಸ್ಕೃತ ಭಾರತೀಯ ರುಕ್ಮಾಂಗದ, ಲಾವಣ್ಯ, ಟಿ.ಎಸ್.ಅರುಣ್, ಸತ್ಯನಾರಾಯಣ, ಶ್ರೀಧರ ಶಾಸ್ತ್ರಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯಲ್ಲಿ 242 ಗ್ರಂಥಾಲಯ ಸ್ಥಾಪನೆಗೆ 2.4 ಕೋಟಿ ಅನುದಾನ ಬಿಡುಗಡೆ



ಮೈಸೂರು, ಫೆ10(ಎಂಕೆ)– ಗ್ರಾಮಾಂತರ ಪ್ರದೇಶದ ಜನರಲ್ಲಿ ಪುಸ್ತಕ ಓದುವ ಸಂಸ್ಕೃತಿ ಬೆಳೆಸುವ ನಿಟ್ಟಿನಲ್ಲಿ ಜಿಲ್ಲೆಯಾದ್ಯಂತ 242 ಹೊಸ ಗ್ರಂಥಾಲಯಗಳ ಸ್ಥಾಪನೆಗೆ ರಾಜ್ಯ ಸರ್ಕಾರ ಸಮ್ಮತಿ ಜೊತೆಗೆ 2.4 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ.

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು, ಯುವಕ–ಯುವತಿಯರ ಜ್ಞಾನಾರ್ಜನೆಗಾಗಿ ಈಗಾಗಲೇ ಇರುವ 239 ಗ್ರಂಥಾಲಯಗಳ ಜೊತೆಗೆ ಹೊಸ 242 ಗ್ರಂಥಾಲಯ ಸೇರ್ಪಡೆಯಾದರೆ, ಜಿಲ್ಲೆಯಲ್ಲಿ ಗ್ರಂಥಾಲಯಗಳ ಸಂಖ್ಯೆ 481ಕ್ಕೆ ಏರಿಕೆಯಾಗಲಿದೆ. ಈ ಕೇಂದ್ರ ಸರಕಾರದ ಮಾರ್ಗದರ್ಶನದಂತೆ ಯೋಜನೆ ಸಿದ್ಧವಾಗುತ್ತಿದ್ದು, ಗ್ರಂಥಾಲಯ ನಿರ್ಮಾಣಕ್ಕೆ ಸ್ಥಳ ಗುರುತಿಸಲಾಗಿದೆ.

ವಯಸ್ಸಿಗೆ ಅನುಗುಣವಾಗಿ ಸೂಕ್ತವಾದ ಓದುವ ಸಾಮಗ್ರಿಗಳನ್ನು ಒದಗಿಸುವುದು. ರಾಷ್ಟ್ರೀಯ ಡಿಜಿಟಲ್ ಲೈಬ್ರರಿಯಲ್ಲಿ ಏಕೀಕೃತ ಡಿಜಿಟಲ್ ಪ್ಲಾಟ್ ಫಾರ್ಮ್‌ಗಳಲ್ಲಿ ವಿವಿಧ ಕಲಿಕಾ ಸಂಪನ್ಮೂಲಗಳು ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಂಥಾಲಯಗಳು ಮತ್ತು ಡಿಜಿಟಲ್ ಮೂಲಸೌಕರ್ಯ ಒದಗಿಸಲು ಹೊಸ ಗ್ರಂಥಾಲಯಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ.

ಜಿಲ್ಲೆಯ 256 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹೊಸ ಗ್ರಂಥಾಲಯಗಳನ್ನು ಆರಂಭಿಸಲು ಕಟ್ಟಡಗಳನ್ನು ಗುರುತಿಸಿದ್ದು, ಪ್ರತಿ ಗ್ರಂಥಾಲಯಕ್ಕೆ ಲಕ್ಷ ರೂ.ಗಳಂತೆ ಸುಮಾರು 2.42 ಕೋಟಿ ರೂ. ಮಂಜೂರಾಗಿದೆ. ಈಗಾಗಲೇ ಶಾಲೆಗಳನ್ನು ಹೊರತು ಪಡಿಸಿ, ಜನ ವಸತಿ ಪ್ರದೇಶಕ್ಕೆ ಹತ್ತಿರವಿರುವಂತೆ ಕಟ್ಟಡಗಳನ್ನು ಆಯ್ಕೆ ಮಾಡಲಾಗಿದೆ. ಇನ್ನು ಪ್ರತಿ ಗ್ರಂಥಾಲಯಕ್ಕೆ ತಲಾ ಲಕ್ಷ ರೂ. ವೆಚ್ಚದಲ್ಲಿ ಪೀಠೋಪಕರಣಗಳನ್ನು ಖರೀದಿಸಲು ಮಾರ್ಗಸೂಚಿಯಲ್ಲಿ ಅವಕಾಶವಿದೆ. ಕೇಂದ್ರ ಸರಕಾರದ ಮಾರ್ಗಸೂಚಿಯಂತೆ ಅಗತ್ಯ ಪೀಠೋಪಕರಣ ಖರೀದಿಸಿ ಗ್ರಂಥಾಲಯಗಳನ್ನು ಆರಂಭಿಸಲಾಗುವುದು ಎಂದು ಜಿಪಂ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

285 ಗ್ರಂಥಾಲಯ ಸ್ಥಾಪಿಸುವ ಗುರಿ: ಜಿಲ್ಲೆಯಲ್ಲಿ 285 ಗ್ರಂಥಾಲಯ ಸ್ಥಾಪಿಸುವ ಗುರಿ ನೀಡಲಾಗಿದ್ದು, 242 ಗ್ರಂಥಾಲಯ ಆರಂಭಿಸಲು ಸ್ಥಳ ಗುರ್ತಿಸಲಾಗಿದೆ. ಈ ಸಂಬಂಧ ಅನುದಾನವೂ ಬಿಡುಗಡೆಯಾಗಿದ್ದು, ಇನ್ನೂ ಹೆಚ್ಚುವರಿಯಾಗಿ ಗ್ರಂಥಾಲಯಗಳನ್ನು ಆರಂಭಿಸಲು ಅವಕಾಶವಿದೆ ಎಂದು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ್ದಾರೆ.

ಪ್ರಯಾಗ್‌ರಾಜ್; ಯಾವುದೇ ರೈಲ್ವೆ ನಿಲ್ದಾಣ ಬಂದ್ ಆಗಿಲ್ಲ

ನೈರುತ್ಯ ರೈಲ್ವೆ ಮೈಸೂರಿನ ಪಿಆರ್‌ಓ ಗಿರೀಶ ಧರ್ಮರಾಜ ಕಲಗೊಂಡ ಮಾಹಿತಿ



ಮೈಸೂರು, ಫೆ.10(ಪಿಎಂ)– ಉತ್ತರ ಪ್ರದೇಶದ ಪ್ರಯಾಗ್‌ರಾಜ್ ಮತ್ತು ಸುತ್ತಮುತ್ತಲ 8 ರೈಲ್ವೆ ನಿಲ್ದಾಣಗಳನ್ನು ವ್ಯಾಪಕ ಜನದಟ್ಟಣೆ ಕಾರಣಕ್ಕೆ ಬಂದ್ ಮಾಡಲಾಗಿದೆ ಎಂದು ಕೆಲ ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ ಆ ರೀತಿ ಯಾವುದೇ ಬೆಳವಣಿಗೆಯಾಗಿಲ್ಲ ಎಂದು ನೈರುತ್ಯ ರೈಲ್ವೆ ಮೈಸೂರಿನ ವಿಭಾಗೀಯ ವಾಣಿಜ್ಯ ಪ್ರಬಂಧಕರೂ ಆದ ಸಾರ್ವಜನಿಕ ಸಂಪರ್ಕ ಅಧಿಕಾರಿ ಗಿರೀಶ ಧರ್ಮರಾಜ ಕಲಗೊಂಡ ತಿಳಿಸಿದ್ದಾರೆ.

ಪ್ರಯಾಗ್‌ರಾಜ್ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಯಾವುದೇ ರೈಲ್ವೆ ನಿಲ್ದಾಣಗಳನ್ನು ಬಂದ್ ಮಾಡಿಲ್ಲ. ಫೆ.9ರ ಭಾನುವಾರ ಇಲ್ಲಿನ ವಿವಿಧ ನಿಲ್ದಾಣಗಳಿಂದ 330ಕ್ಕೂ ಹೆಚ್ಚು ರೈಲುಗಳು ಸಂಚಾರ ಮಾಡಿವೆ. ಹಾಗೆಯೇ 13 ಲಕ್ಷಕ್ಕೂ ಅಧಿಕ ಪ್ರಯಾಣಿಕರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ. ಸೋಮವಾರ ಸಂಜೆ 6 ಗಂಟೆಯವರೆಗೂ 201 ರೈಲುಗಳು ಸಂಚರಿಸಿದ್ದು, 10 ಲಕ್ಷಕ್ಕೂ ಅಧಿಕ ಪ್ರಯಾಣಿಕರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ.

ಅಲ್ಲದೆ, ಎಲ್ಲಾ ರೈಲುಗಳು ವೇಳಾಪಟ್ಟಿಯಂತೆಯೇ ಸಂಚಾರ ಮಾಡುತ್ತಿವೆ. ವಿಶೇಷ ರೈಲುಗಳನ್ನು ಸಹ ಬೇಡಿಕೆಯಂತೆ ಸಂಚರಿಸಲು ಕ್ರಮ ವಹಿಸಲಾಗಿದೆ. ಬೇಡಿಕೆ ಇದ್ದರೆ ಪ್ಯಾಸೆಂಜರ್ ರೈಲುಗಳ ಸೇವೆ ಸಹ ಒದಗಿಸುತ್ತಿದೆ. ರೈಲ್ವೆ ಇಲಾಖೆಯ ಉನ್ನತ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುತ್ತಿದ್ದಾರೆ. ಪ್ರಯಾಣಿಕರು ಯಾವುದೇ ವದಂತಿಗಳಿಗೆ ಕಿವಿಗೊಡಬಾರದು. ಪ್ರಯೋಗ್‌ರಾಜ್‌ನಲ್ಲಿ ಭಾರತೀಯ ರೈಲ್ವೆ ಇಲಾಖೆಯು ಪ್ರಯಾಣಿಕರ ಸುಗಮ ಪ್ರಯಾಣಕ್ಕೆ ಸೂಕ್ತ ಕ್ರಮಗಳನ್ನು ಕೈಗೊಂಡಿದೆ ಎಂದು ಅವರು ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 11 ಫೆಬ್ರವರಿ 2025

ಕೆಆರ್‌ಎಸ್‌ನಿಂದ ಬೆಂಗಳೂರಿಗೆ ನಿತ್ಯ 500 ಎಂಎಲ್‌ಡಿ ನೀರು ಕೊಂಡೊಯ್ಯುವ ಯೋಜನೆ ಸ್ಥಗಿತಗೊಳಿಸದಿದ್ದರೆ ಉಗ್ರ ಹೋರಾಟ

● ಈ ಯೋಜನೆ ಮಂಡ್ಯ ಜಿಲ್ಲೆಯ ಕಡೆ ಭಾಗಕ್ಕೆ ಮರಣಶಾಸನ ಬರೆದಂತೆ ● ಮಂಡ್ಯ ಜಿಲ್ಲೆಗೆ ಮೀಸಲಿರುವ ನೀರು ಬೆಂಗಳೂರಿಗೆ ತೆಗೆದುಕೊಂಡು ಹೋಗುವುದೆಂದರೆ ಹೇಗೆ?


ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಎಚ್ಚರಿಕೆ

ಮಂಡ್ಯ,ಫೆ.10– ಕೆಆರ್‌ಎಸ್ ಅಣೆಕಟ್ಟೆಯಿಂದ 500 ಎಂಎಲ್‌ಡಿ ಕುಡಿಯುವ ನೀರು ಶಾಶ್ವತವಾಗಿ ಬೆಂಗಳೂರಿಗೆ ಕೊಂಡೊಯ್ಯುವ ಯೋಜನೆಯು ಮಂಡ್ಯ ಜಿಲ್ಲೆಯ ವಿ.ಸಿ ನಾಲಾ ವ್ಯಾಪ್ತಿಯ ಕೊನೆ ಭಾಗದ ರೈತರಿಗೆ ಮರಣ ಶಾಸನವಾಗಲಿದ್ದು, ರಾಜ್ಯ ಸರ್ಕಾರ ಈ ಯೋಜನೆಯನ್ನು ಕೈಬಿಡದಿದ್ದರೆ ರೈತರೊಂದಿಗೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಎಚ್ಚರಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿಗೆ ನೀರು ಕೊಂಡೊಯ್ಯಲು 6939 ಕೋಟಿ ರೂ.ಗಳ ಯೋಜನೆ ತಯಾರಿಸಿ ಭೂ ಸ್ವಾಧೀನಕ್ಕೂ ಆದೇಶ ಹೊರಡಿಸಲಾಗಿದೆ. ಸದರಿ ಯೋಜನೆಯಿಂದ ಮದ್ದೂರು, ಮಳವಳ್ಳಿ, ನಾಗಮಂಗಲ ತಾಲೂಕಿನ ಕೊಪ್ಪ ಹೋಬಳಿ ಭಾಗದ ಜಮೀನುಗಳಿಗೆ ಸರಬರಾಜಾಗುತ್ತಿರುವ ನೀರು ಎರಡನೇ ಬೆಳೆಗೆ ದೊರೆಯದಂತಾಗುತ್ತದೆ ಎಂದು ಹೇಳಿದರು.

ಬೆಂಗಳೂರಿಗೆ ನೀರು ಕೊಡಬೇಡಿ ಎನ್ನುವುದಿಲ್ಲ. ನಾನು ಬೆಂಗಳೂರಿನಲ್ಲೇ ಇದ್ದೇನೆ, ಬೆಂಗಳೂರಿಗೆ ಕುಡಿಯುವ ನೀರು ಬಹಳ ಮುಖ್ಯ. ಆದರೆ ಪರ್ಯಾಯ ಮೂಲಗಳಿಂದ ನೀರು ಉಳಿಸಿ, ಬೆಂಗಳೂರಿಗೆ ನೀಡಿ. ಕಾಂಗ್ರೆಸ್ ನಡಿಗೆ ಮೇಕೆದಾಟು ಕಡೆಗೆ ಪಾದಯಾತ್ರೆಯನ್ನು ಮಾಡಿ, 1000 ಕೋಟಿ ರೂ ಮೀಸಲಿಟ್ಟಿದ್ದು, ಇದುವರೆಗೂ ಏಕೆ ಕಾಂಗ್ರೆಸ್ ಸರ್ಕಾರ ಮೇಕೆದಾಟು ನಿರ್ಮಿಸಿಲ್ಲ, ಮೇಕೆದಾಟು ನಿರ್ಮಿಸಿದ್ದರೆ 60 ಟಿಎಂಸಿ ನೀರು ಉಳಿಯುತ್ತಿತ್ತು. ಅಲ್ಲಿಂದಲೇ ನೀರು ಬೆಂಗಳೂರಿಗೆ ನೀಡಬಹುದಿತ್ತು ಎಂದರು.

ಈಗ 500 ಎಂಎಲ್‌ಡಿ ನೀರು ಬೆಂಗಳೂರಿಗೆ ನೀಡುವುದಾದರೆ, ಮುಂದೆ ಈ ಭಾಗದ ರೈತರ ಪರಿಸ್ಥಿತಿ ಏನಾಗಬೇಕು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಸಚಿವ ಡಿ.ಸಿ.ತಮ್ಮಣ್ಣ

ಇಲ್ಲಿನ ರೈತರು ಇನ್ನೂ ಧರಣಿ ಮಾಡಿ, ನೀರಿಗಾಗಿ ಭಿಕ್ಷೆ ಬೇಡಬೇಕೇ? ಸರ್ಕಾರ ಈ ಯೋಜನೆ ಕೈ ಬಿಡಬೇಕು. ಇಲ್ಲವಾದಲ್ಲಿ ಹೋರಾಟಗಳನ್ನು ಮಾಡಬೇಕಿದೆ ಎಂದು ಎಚ್ಚರಿಸಿದರು.

ಮಾಜಿ ಶಾಸಕ ಕೆ.ಅನ್ನದಾನಿ ಮಾತನಾಡಿ, ಬೆಂಗಳೂರಿಗೆ ತಿಪ್ಪಗೊಂಡನಹಳ್ಳಿ ಕೆರೆಯಿಂದ ನೀರು ಸರಬರಾಜು ಆಗುತ್ತಿತ್ತು. ಈಗ ನೇರವಾಗಿ ಕೆಆರ್‌ಎಸ್‌ನಿಂದ ನೀರು ಒದಗಿಸಲು ಮುಂದಾಗಿದ್ದಾರೆ. ಬೆಂಗಳೂರಿಗೆ ನೀರು ಕೊಡಬೇಡಿ ಎಂದು ಹೇಳಲಾಗದು, ಇದರೆ ಇತರ ನದಿಗಳ ಅಣೆಕಟ್ಟು ಮೂಲಗಳಿಂದ ನೀರು ಕೊಡಲಿ. ನಮಗೆ ಮೀಸಲಿಟ್ಟ ನೀರು ಕೊಂಡೊಯ್ದರೆ, ಮಂಡ್ಯ ಜಿಲ್ಲೆಯ ರೈತರ ಬದುಕೇನು? ಎಂದು ಪ್ರಶ್ನಿಸಿದರು.

ಮಂಡ್ಯ ಜಿಲ್ಲೆಯ ಜನ ಪಾಂಡವಪುರ ಸೇರಿ 6 ಶಾಸಕರನ್ನು ಕಾಂಗ್ರೆಸ್‌ಗೆ ನೀಡಿದ್ದು, ಅದನ್ನು ಮನಸಿನಲ್ಲಿಟ್ಟುಕೊಂಡು ಕೆಲಸ ಮಾಡುವುದನ್ನು ಬಿಟ್ಟು, ಜಿಲ್ಲೆಯ ರೈತರ ನೀರು ಕಸಿಯುತ್ತಿದ್ದು, ಇದೇನಾ ಕಾಂಗ್ರೆಸ್ ಸರ್ಕಾರ ಮಂಡ್ಯ ಜನಕ್ಕೆ ನೀಡುವ ಉಡುಗೊರೆ ಎಂದು ಪ್ರಶ್ನಿಸಿದ ಅವರು, ಬೆಂಗಳೂರಿನ ಹಿತದೃಷ್ಟಿ ನೋಡಿದರೆ ಸಾಲದು, ಮಂಡ್ಯ ಜಿಲ್ಲೆಯ ರೈತರ ಹಿತದೃಷ್ಟಿ ಕಾಪಾಡಬೇಕು. ಮೇಕೆದಾಟುವಿಗಾಗಿ ತಮಿಳುನಾಡಿನ ಸ್ಟಾಲೀನ್ ಅವರನ್ನು ಒಪ್ಪಿಸಿ ಎಂದರು.

ವಂಚನೆ ಪ್ರಕರಣ ಎದುರಿಸುತ್ತಿರುವ ಐಶ್ವರ್ಯಗೌಡ ವಿಚಾರವಾಗಿ ಪೊಲೀಸರು ತನಿಖೆ ಮಾಡಬೇಕು. ಅವರ ಸಂಪರ್ಕದಲ್ಲಿ ಯಾರಿದ್ದಾರೆ, ಯಾವ ವ್ಯವಹಾರ ಮಾಡಿದ್ದಾರೆ ಎಂಬುದು ಬಹಿರಂಗವಾಗಬೇಕು. ಐಶ್ವರ್ಯಗೌಡ ನನ್ನ ಜೊತೆ ವ್ಯವಹಾರ ನಡೆಸಿರುವುದಾಗಿ ಹೇಳಿಕೊಂಡಿರುವುದಕ್ಕೆ ಮಾಧ್ಯಮಗಳ ಮುಂದೆ ಸಾಕ್ಷಿ ಒದಗಿಸಲಿ, ಯಾವುದೇ ಆರೋಪ ಮಾಡಬೇಕಾದರೆ ಅದರಲ್ಲಿ ತಿರುಳಿರಬೇಕು. ತಿರುಳಿಲ್ಲದೇ, ಸಾಕ್ಷಿ ಒದಗಿಸದೇ ಆರೋಪ ಮಾಡಿದರೆ, ಮಾನನಷ್ಟ ಮೊಕದ್ದಮೆ ಹೂಡಬೇಕಾಗುತ್ತದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು.

ಗೋಷ್ಠಿಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಜೆಡಿಎಸ್ ಹಿಂದುಳಿದ ವರ್ಗಗಳ ಘಟಕದ ರಾಜ್ಯಾಧ್ಯಕ್ಷ ಜಯರಾಮ್ ಇದ್ದರು.

ಪಾದಚಾರಿಗಳಿಗೆ ಅಪರಿಚಿತ ಕಾರು ಡಿಕ್ಕಿ: ಇಬ್ಬರು ಸಾವು



ಮರಿಸ್ವಾಮಿ



ತಿಬ್ಬಯ್ಯ

ಭಾರತೀನಗರ, ಫೆ.10– ಇಲ್ಲಿಗೆ ಸಮೀಪದ ಮಣಿಗೆರೆ ಗ್ರಾಮದ ಬಳಿ ಅಪರಿಚಿತ ಕಾರೊಂದು ಪಾದಚಾರಿಗಳಿಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮೃತಪಟ್ಟಿರುವ ಘಟನೆ ಜರುಗಿದೆ.

ಮಣಿಗೆರೆ ಗ್ರಾಮದ ಮರಿಸ್ವಾಮಿ(50), ತಿಬ್ಬಯ್ಯ(60) ಎಂಬುವವರೇ ಮೃತಪಟ್ಟ ದುರ್ದೈವಿ ವ್ಯಕ್ತಿಗಳು.

ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿರುವ ಮಣಿಗೆರೆ ಗ್ರಾಮದಲ್ಲಿ ಭಾನುವಾರ ರಾತ್ರಿ ಸುಮಾರು 8 ಗಂಟೆಯ ಸಮಯದಲ್ಲಿ ಈ ಇಬ್ಬರು ಜೊತೆಯಲ್ಲಿ ಮನೆಗೆ ನಡೆದುಕೊಂಡು ಹೋಗುವಾಗ ಮಳವಳ್ಳಿ ಕಡೆಯಿಂದ ಅತಿ ವೇಗವಾಗಿ ಬಂದ ಅಪರಿಚಿತ ಕಾರು ಇವರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಇಬ್ಬರು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಕುಸಿದು ಬಿದ್ದಿದ್ದಾರೆ. ಪ್ರತ್ಯಕ್ಷದರ್ಶಿಗಳು ತಕ್ಷಣ ಅಪರಿಚಿತ ಕಾರನ್ನು ಹಿಂಬಾಲಿಸಿಕೊಂಡು ಹೋದರೂ ಸಹ ಹೊಸ ಕಾರು ಆಗಿರುವುದರಿಂದ ನಂಬರ್ ಪ್ಲೇಟ್ ಹಾಕಿರಲಿಲ್ಲ ಹಾಗಾಗಿ ಕಾರನ್ನು ಪತ್ತೆ ಮಾಡಲು ಸಾಧ್ಯವಾಗಲಿಲ್ಲ. ಈ ಇಬ್ಬರನ್ನು ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಇಬ್ಬರು ಮೃತಪಟ್ಟಿದ್ದಾರೆ.


ಈ ಇಬ್ಬರ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಮೇಲುಕೋಟೆಯಲ್ಲಿ ಸಂಭ್ರಮದ ಪುನರ್ವಸು ಉತ್ಸವ

ಮೇಲುಕೋಟೆ: 12ನೇ ಶತಮಾನದಲ್ಲಿ ರಾಮಾನುಜಾಚಾರ್ಯರು ಯದುಗಿರಿಯ ಬೆಟ್ಟದ ಮಧ್ಯೆಯಿದ್ದ ಹುತ್ತ ಕರಗಿಸಿ ಶ್ರೀ ಚೆಲುವನಾರಾಯಣನನ್ನು ಜಗತ್ತಿಗೆ ಪ್ರಕಾಶಪಡಿಸಿದ ಪುನರ್ವಸು ಉತ್ಸವ ಮೇಲುಕೋಟೆ ದೇವಾಲಯದಲ್ಲಿ ಸೋಮವಾರ ಸಡಗರ ಸಂಭ್ರಮದಿಂದ ನೆರವೇರಿತು

ಕ್ರಿ.ಶ.1017ರ ಬಹುಧಾನ್ಯ ಸಂವತ್ಸರದ ಮಕರ ಶುಕ್ಲಪುನರ್ವಸು ನಕ್ಷತ್ರದಂದು ತೊಂಡನೂರಿನಿಂದ ಸಾವಿರ ಶಿಷ್ಯರೊಂದಿಗೆ ಯದುಗಿರಿಗೆ ಆಗಮಿಸಿದ ಭಗವದ್ರಾಮಾನುಜರು ಕಾಡಿನ ನಡುವೆಯಿದ್ದ ಹುತ್ತಕಂಡು ಹಿಡಿದು ಕಲ್ಯಾಣಿತೀರ್ಥ ಮತ್ತು ಹಾಲಿನಿಂದ ಹುತ್ತಕರಗಿಸಿ ಮೊದಲ ಅಭಿಷೇಕಮಾಡಿ ಶ್ರೀಚೆಲುವನಾರಾಯಣನ ದರ್ಶನಪಡೆದ ಕಾರಣ ಪ್ರತಿ ಸಂವತ್ಸವರದಲ್ಲೂ ಮಕರಶುಕ್ಲ ಪುನರ್ವಸುವಿನಂದು ಪುನರ್ವಉತ್ಸವ ನೆರವೇರುತ್ತಾ ಬಂದಿದೆ. ಕ್ರೋದಿನಾಮ ಸಂವತ್ಸರದ ಮಕರ ಶುಕ್ಲಪುನರ್ವಸು ಪವಿತ್ರ ದಿನವಾದ ಸೋಮವಾರ ಪುನರ್ವಸು ಮಹೋತ್ಸವ ಸಡಗರ ಸಂಭ್ರಮದಿಂದ ನೆರವೇರಿತು. ವಿದ್ವಾನ್ ಬಿ.ವಿ.ಆನಂದಾಳ್ವಾರ್ ನೇತೃತ್ವದಲ್ಲಿ ವೈಭವಯುತವಾಗಿ ನಡೆದ ರಾಮಾನುಜರ ಪುನರ್ವಸು ಉತ್ಸವದ ನಿಮಿತ್ತ ಚೆಲುವನಾರಾಯಣನ ದೇವಾಲಯದ ಆವರಣವನ್ನು ರಂಗವಲ್ಲಿ, ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿತ್ತು.

ಬೆಳಿಗ್ಗೆ 5.30ಕ್ಕೆ ರಾಮಾನುಜಾಚಾರ್ಯರಿಗೆ ವೇದಪಾರಾಯಣ ಮತ್ತು ವಿಶೇಷ ಆರಾಧನೆಯೊಂದಿಗೆ ಅಭಿಷೇಕ ಮಾಡಲಾಯಿತು 7ರ ವೇಳೆ ಕಲ್ಯಾಣಿಗೆ ಉತ್ಸವ ನೆರವೇರಿಸಿ, ಬೆಳಿಗ್ಗೆ 7ರಿಂದ 10–30ರವರೆಗೆ ಕಲ್ಯಾಣಿಯಲ್ಲಿ ಶ್ರೀರಾಮಾನುಜರಿಗೆ ನಿತ್ಯ ಪೂಜಾ ಕೈಂಕರ್ಯ ನೆರವೇರಿತು. ಕಲ್ಯಾಣಿಯಿಂದ ಹೊರಟ



ವಂಗೀಪುರಂ ಕುಟುಂಬದವರು ಚೆಲುವನಾರಾಯಣಸ್ವಾಮಿಗೆ ಅರ್ಪಿಸಲು ಜೋಡಿಸಿದ್ದ ಹಣ್ಣುಗಳ ತಟ್ಟೆಗಳ ಭವ್ಯ ನೋಟ

ಆಚಾರ್ಯರ ಉತ್ಸವ ಮಧ್ಯಾಹ್ನ 12–30ರವೇಳೆಗೆ ದಿವ್ಯಪ್ರಬಂಧ ಪಾರಾಯಣ, ವಿಶೇಷ ಮಂಗಳವಾದ್ಯದೊಂದಿಗೆ ಚೆಲುವನಾರಾಯಣಸ್ವಾಮಿ ದೇವಾಲಯ ತಲುಪಿತು. ಶ್ರೀ ವೈಷ್ಣವ ಪಾರಾಯಣದವರು ಹುತ್ತ ಕರಗಿಸಿ ಚೆಲುವನಾರಾಯಣ ಸ್ವಾಮಿಯನ್ನು ದರ್ಶನಮಾಡಿ ಸಂತೋಷಗೊಂಡ ರಾಮಾನುಜರೇ ಸ್ವತಃ ಹಾಡಿದ ದಿವ್ಯಮಂತ್ರವನ್ನು ಒಕ್ಕೊರಲಿನಿಂದ ಭಕ್ತಿಯೊಂದಿಗೆ ಪಾರಾಯಣ ಮಾಡಿದರು. ಸಹಸ್ರಾರು ಭಕ್ತರು ಉತ್ಸವದಲ್ಲಿ ಭಾಗಿಯಾಗಿ ಆಚಾರ್ಯರ ದರ್ಶನ ಪಡೆದು ಪುನೀತರಾದರು.

ಜಿಮ್‌ನಲ್ಲಿ ಗೃಹಿಣಿ ನೇಣಿಗೆ ಶರಣು

ಮದ್ದೂರು: ಕೌಟುಂಬಿಕ ಕಲಹದಿಂದ ಗೃಹಿಣಿಯೊಬ್ಬಳು ಜಿಮ್‌ನಲ್ಲಿ ನೇಣಿಗೆ ಶರಣಾಗಿರುವ ಘಟನೆ ತಾಲೂಕಿನ ಕೆಸ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮದ್ದೂರು ತಾಲೂಕಿನ ಕೆಸ್ತೂರು ಗ್ರಾಮದ ಗಿರೀಶ್ ಎಂಬಾತನ ಪತ್ನಿ ದಿವ್ಯಾ (31) ನೇಣಿಗೆ ಶರಣಾದವರಾಗಿದ್ದು, ತಮ್ಮ ಮಾಲೀಕತ್ವದ ಕೆಸ್ತೂರು ಗ್ರಾಮದ ವೈಭವ್ ಫಿಟ್ನೆಸ್ ಎಂಬ ಜಿಮ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೌಟುಂಬಿಕ ಕಲಹದಿಂದ ಬೇಸತ್ತು ಇವರು ಸೋಮವಾರ ನೇಣಿಗೆ ಶರಣಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಮದ್ದೂರು ತಾಲೂಕಿನ ಮಾಚಹಳ್ಳಿ ಗ್ರಾಮದ ಗೋವಿಂದ ಎಂಬುವವರ ಪುತ್ರಿಯಾದ ದಿವ್ಯಾಳನ್ನು ಕೆಸ್ತೂರು ಗ್ರಾಮದ ಗಿರೀಶ್‌ಗೆ ಕಳೆದ 2016ರಲ್ಲಿ ಮದುವೆ ಮಾಡಿಕೊಡಲಾಗಿತ್ತು. ಕಳೆದ ಎರಡು ವರ್ಷಗಳ ಹಿಂದೆ ದಂಪತಿ ಕೆಸ್ತೂರು ಗ್ರಾಮದಲ್ಲಿ ವೈಭವ್ ಫಿಟ್ನೆಸ್ ಎಂಬ ಜಿಮ್ ತೆರೆದು ಜೀವನ ನಡೆಸುತ್ತಿದ್ದರು.

ಎಂದಿನಂತೆ ಜಿಮ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ದಿವ್ಯಾ ಯಾರೂ ಇಲ್ಲದ ಸಮಯದಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಇತ್ತೀಚೆಗೆ ಬೇರೊಂದು ಮಹಿಳೆ ಜೊತೆ ಪತಿ ಗಿರೀಶ್ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಎಂದು ದಿವ್ಯಾ ಕುಟುಂಬಸ್ಥರು ಆರೋಪಿಸಿದ್ದಾರೆ. ಇದೇ ವಿಚಾರಕ್ಕೆ 3 ತಿಂಗಳ ಹಿಂದೆ ನ್ಯಾಯ ಪಂಚಾಯ್ತಿ ಕೂಡ ನಡೆದಿತ್ತು. ನ್ಯಾಯ ಪಂಚಾಯ್ತಿ ಬಳಿಕ ಗಂಡ ಹೆಂಡತಿ ಚೆನ್ನಾಗಿದ್ದರು. ಅದರೆ ಇಂದು ನೇಣು ಬಿಗದ ಸ್ಥಿತಿಯಲ್ಲಿ ದಿವ್ಯ ಮೃತದೇಹ ಪತ್ತೆಯಾಗಿದೆ. ದಿವ್ಯ ಕುಟುಂಬಸ್ಥರು ಗಂಡ ಗಿರೀಶನೇ ಹೊಡೆದು ಕೊಂದಿರುವುದೆಂದು ಆರೋಪಿಸಿದ್ದಾರೆ. ಕೆಸ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಾಳೆ ಮಾಘ ಶುದ್ಧ ಪೌರ್ಣಮಿ

ಮಂಡ್ಯ, ಫೆ.10– ಜಿಲ್ಲಾಡಳಿತ ಮಂಡ್ಯ ಹಾಗೂ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳು ಇಲಾಖೆ ವತಿಯಿಂದ ಫೆ12ರಂದು ಶ್ರೀರಂಗಪಟ್ಟಣದ ಶ್ರೀ ನಿಮಿಷಾಂಬಾ ದೇವಸ್ಥಾನದಲ್ಲಿ ಮಾಘ ಶುದ್ಧ ಪೌರ್ಣಮಿ ಮಹೋತ್ಸವ ನಡೆಯಲಿದ್ದು, ಬೆಳಗ್ಗೆ 8 ಗಂಟೆಗೆ ಗಣಹೋಮ, ನಕ್ಷತ್ರ ಹೋಮ, ದುರ್ಗಹೋಮ ಹಾಗೂ ಸತ್ಯನಾರಾಯಣ ಸ್ವಾಮಿ ಪೂಜೆ ಮತ್ತು ಮಧ್ಯಾಹ್ನ 1 ಗಂಟೆಗೆ ಪಂಚಾಮೃತ ಅಭಿಷೇಕ, ಪೂರ್ವಕ ಮಹಭಿಷೇಕ ನಡೆಯಲಿದೆ ಎಂದು ಶ್ರೀ ನಿಮಿಷಾಂಭಾ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಕುಂಭಮೇಳ ಪುಣ್ಯಸ್ನಾನ ಪ್ರಾರಂಭ

ದೇವಾಲಯಗಳಲ್ಲಿ ಮುಂಜಾನೆಯೇ ಪೂಜೆ: ತಿ.ನರಸೀಪುರದಲ್ಲಿ ನದಿ ದಡದಲ್ಲಿರುವ ಶ್ರೀ ಅಗಸ್ತ್ಯೇಶ್ವರ ಸ್ವಾಮಿ, ಶ್ರೀ ಗುಂಜಾ ನರಸಿಂಹಸ್ವಾಮಿ, ಭಿಕ್ಷೇಶ್ವರ ದೇವಾಲಯ ಹಾಗೂ ನದಿ ಪಾತ್ರದ ಶ್ರೀ ಬಳ್ಳೇಶ್ವರ, ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜೆ ನೆರವೇರಿತು. ಕುಂಭಮೇಳದ ಅಂಗವಾಗಿ ಎಲ್ಲಾ ದೇವಾಲಯಗಳಲ್ಲಿ ಅಲಂಕಾರ ಮಾಡಲಾಗಿತ್ತು. ಅಗಸ್ತ್ಯೇಶ್ವರ ಸ್ವಾಮಿಗೆ ಮುಂಜಾನೆ ಅನುಜ್ಞೆ ಪೂಜೆ, ಪುಣ್ಯಾಹ, ಕಳಶ ಸ್ಥಾಪನೆ, ಗಣಹೋಮ, ಅಭಿಷೇಕ, ದೇವತಾರಾಧನೆ ಹಾಗೂ ರಾಷ್ಟ್ರಾಶೀರ್ವಾದದ ಪೂಜೆ ನೆರವೇರಿಸಲಾಯಿತು. ಬಳಿಕ ಮಹಾಮಂಗಳಾರತಿ ನೆರವೇರಿಸಿ, ವೇದಘೋಷ ಮಂತ್ರಗಳ ಪಠಿಸಲಾಯಿತು. ಆ ಬಳಿಕ ಪವಿತ್ರ ಕುಂಭಸ್ನಾನಕ್ಕೆ ಚಾಲನೆ ದೊರೆಯಿತು.

ಮುಂಜಾನೆಯಿಂದಲೇ ಪುಣ್ಯಸ್ನಾನ: ಉತ್ತರಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭ ಮೇಳಕ್ಕೆ ಹೋಗಲು ಸಾಧ್ಯವಾಗದೇ ಇರುವ ಭಕ್ತರು ತಿ.ನರಸೀಪುರದ ಕುಂಭಮೇಳದಲ್ಲಿ ಪುಣ್ಯಸ್ನಾನ ಮಾಡಲಿದ್ದಾರೆ. ವಿವಿಧೆಡೆಯಿಂದ ತಂಡೋಪತಂಡವಾಗಿ ಆಗಮಿಸಿದ್ದ ಭಕ್ತರು ಅಗಸ್ತ್ಯೇಶ್ವರ ದೇವಾಲಯದಲ್ಲಿ ಪೂಜಾ ಕಾರ್ಯ ಪೂರ್ಣಗೊಳ್ಳುತ್ತಿದ್ದಂತೆಯೇ ತ್ರಿವೇಣಿ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದರು.

ಮೂರು ಸ್ಥಳದಲ್ಲಿ ಸ್ನಾನಘಟ್ಟ ನಿರ್ಮಿಸಿ, ಬ್ಯಾರಿಕೇಡ್ ಅಳವಡಿಸಲಾಗಿದೆ. ಅಗಸ್ತ್ಯೇಶ್ವರ, ಗುಂಜಾ ನರಸಿಂಹಸ್ವಾಮಿ ಹಾಗೂ ಭಿಕ್ಷೇಶ್ವರ ದೇವಾಲಯ ಬಳಿ ಹೀಗೆ ಭಕ್ತರಿಗೆ ಪುಣ್ಯಸ್ನಾನ ಮಾಡಲು ವ್ಯವಸ್ಥೆ ಮಾಡಲಾಗಿದೆ. ಸಾವಿರಾರು ಮಂದಿ ಮಿಂದೆದ್ದು, ಬಳಿಕ ದೇವಾಲಯಗಳಿಗೆ ತೆರಳಿ ದರ್ಶನ ಪಡೆದು, ನಂತರ ಪೂಜೆ ಸಲ್ಲಿಸಿದರು.

ನದಿಯಲ್ಲಿ ಸ್ವಚ್ಛ ನೀರು: ಕಳೆದ 3–4 ದಿನಗಳಿಂದ ನದಿಯಲ್ಲಿ ನೀರಿನ ಹರಿವಿನ ಪ್ರಮಾಣ ಕಡಿಮೆಯಿತ್ತು. ಆದರೆ, ಇಂದು ನದಿಗೆ ಜಲಾಶಯಗಳಿಂದ ನೀರು ಬಿಟ್ಟಿರುವುದರಿಂದ ತ್ರಿವೇಣಿ ಸಂಗಮದಲ್ಲಿ ನೀರಿನ ಪ್ರಮಾಣ ಹೆಚ್ಚಾಗಿತ್ತು.

ಮುನ್ನೆಚ್ಚರಿಕೆ: ನದಿಯಲ್ಲಿ ಪುಣ್ಯಸ್ನಾನಕ್ಕೆ ನಿಗದಿಪಡಿಸಿರುವ ಬ್ಯಾರಿಕೇಡ್ ದಾಟದಂತೆ ಎಚ್ಚರಿಕೆ ನೀಡಲಾಗುತ್ತಿದೆ. ಸ್ನಾನಕ್ಕಿಳಿದು, ಅಪಾಯ ಸ್ಥಿತಿ ತಲುಪಿದರೆ ಅಂತಹವರನ್ನು ರಕ್ಷಣೆ ಮಾಡಲು ನುರಿತ ಈಜುಗಾರರ ತಂಡ, ಅಗ್ನಿಶಾಮಕ ಸಿಬ್ಬಂದಿ ತಂಡ ಸ್ಥಳದಲ್ಲಿಯೇ ಬೀಡುಬಿಟ್ಟಿದೆ. ಅಲ್ಲದೆ, ಆಕ್ಸಿಜನ್ ಸಿಲಿಂಡರ್, ಲೈಫ್ ಜಾಕೆಟ್, ಮೋಟಾರ್ ಬೋಟ್‌ಗಳನ್ನು ಅಗ್ನಿಶಾಮಕ ದಳದ ತಂಡ ಸ್ಥಳದಲ್ಲಿ ಕಾಯ್ದಿರಿಸಿಕೊಂಡಿದೆ.

ಪ್ರಕಟಣೆ ಮೂಲಕ ಜಾಗೃತಿ: ಕುಂಭಮೇಳಕ್ಕೆ ಆಗಮಿಸಿ, ಪುಣ್ಯಸ್ನಾನ ಮಾಡುವ ಭಕ್ತರ ಬಗ್ಗೆ ಪೊಲೀಸರು ಕಣ್ಗಾವಲಿದ್ದಾರೆ. ಧ್ವನಿವರ್ಧಕದಲ್ಲಿ ಅನೌನ್ಸ್ ಮಾಡುವ ಮೂಲಕ ಎಚ್ಚರಿಕೆ ಸಂದೇಶ ನೀಡುತ್ತಿದ್ದಾರೆ. ಕೆಲವರು ಗಂಟೆಗಟ್ಟಲೇ ನೀರಿನಲ್ಲಿದ್ದರೆ, ಮೈಕ್‌ನಲ್ಲಿ ಹೊರ ಬರುವಂತೆ ಸೂಚಿಸಲಾಗುತ್ತಿದೆ. ಅಲ್ಲದೆ, ಸ್ನಾನ ಮಾಡುವಾಗ ಸೋಪು, ಶಾಂಪು ಬಳಸದಂತೆಯೂ ಎಚ್ಚರಿಸಲಾಗುತ್ತಿದೆ. ಜೊತೆಗೆ ನದಿಯಲ್ಲಿ ಹಳೆ ಬಟ್ಟೆ ಬೀಸಾಡದಂತೆಯೂ ಜಾಗೃತಿ ಮೂಡಿಸಲಾಗುತ್ತಿದೆ.

ಇಂದು ಕಾಶಿಯ ಪುರೋಹಿತರಿಂದ ಕಾವೇರಿ ಆರತಿ

ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಎರಡನೇ ದಿನವಾದ ಮಂಗಳವಾರ (ಫೆ.11) ವಿವಿಧ ಧಾರ್ಮಿಕ ಕಾರ್ಯ ಜರುಗಲಿದೆ. ನಾಳೆ ಸಂಜೆ 6.30ರಿಂದ 7ಗಂಟೆವರೆಗೆ ಕಾಶಿಯಲ್ಲಿ ನಡೆಯುವ ಗಂಗಾ ಆರತಿ ಮಾದರಿಯಲ್ಲಿ ಕಾವೇರಿ ನದಿಗೆ ಆರತಿ ನಡೆಯಲಿದ್ದು, ಅದಕ್ಕಾಗಿ ಕಾಶಿಯಿಂದ ಪುರೋಹಿತರ ತಂಡ ಆಗಮಿಸುತ್ತಿದೆ. ಕುಂಭಮೇಳ ನಡೆಯುವ ಮೂರು ದಿನವೂ ನಿತ್ಯ ಸಂಜೆ 4ರಿಂದ 10 ಗಂಟೆವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ. ಅದಕ್ಕಾಗಿ ಪ್ರತ್ಯೇಕ ವೇದಿಕೆ ನಿರ್ಮಿಸಲಾಗಿದೆ. ಬುಧವಾರ ಪ್ರಮುಖ ಮಠಾಧೀಶರು, ಸಾಧು–ಸಂತರು ಪುಣ್ಯಸ್ನಾನ ಮಾಡಲಿದ್ದಾರೆ. ಯಾವುದೇ ಅಹಿತಕರ ಘಟನೆ ಜರುಗದಂತೆ ಕಟ್ಟೆಚ್ಚರ ವಹಿಸಲಾಗಿದೆ. ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದರು.

ಬಿಗಿ ಪೊಲೀಸ್ ಬಂದೋಬಸ್ತ್: ಎಸ್ಪಿ ಎನ್.ವಿಷ್ಣುವರ್ಧನ್ ಮಾತನಾಡಿ, ಮೂರು ದಿನಗಳ ಕುಂಭಮೇಳಕ್ಕೆ ಸೂಕ್ತ ಬಂದೋಬಸ್ತ್ ಮಾಡಲಾಗಿದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಬಂದೋಬಸ್ತ್ ಸರ್ಪಗಾವಲಿದ್ದಾರೆ. ಭದ್ರತೆಗೆ ನಾಲ್ವರು ಹೆಚ್ಚುವರಿ ಎಸ್ಪಿ, 11 ಡಿವೈಎಸ್ಪಿ, 27 ಸರ್ಕಲ್ ಇನ್ಸ್‌ಪೆಕ್ಟರ್, 85 ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ 1200 ಪೊಲೀಸರನ್ನು ನಿಯೋಜನೆ ಮಾಡಲಾಗಿದೆ. ಇದರೊಂದಿಗೆ 4 ಕೆಎಸ್‌ಆರ್‌ಪಿ, 2 ಡಿಎಆರ್ ತುಕಡಿ ನಿಯೋಜಿಸಲಾಗಿದೆ. 4 ಸ್ಥಳಗಳಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಪುಣ್ಯಸ್ನಾನದ ವೇಳೆ ಅವಘಡ ತಪ್ಪಿಸಲು ನುರಿತ ಈಜುಗಾರರನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ರಕ್ಷಿತ್, ಅಗ್ನಿಶಾಮಕಾಧಿಕಾರಿ ಚಂದನ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ನದಿ ಪಾತ್ರದಲ್ಲಿ ಹಬ್ಬದ ವಾತಾವರಣ

ತಿ.ನರಸೀಪುರ,ಫೆ.10(ಎಂಟಿವೈ, ಎಸ್‌ಕೆ)–ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಆರಂಭವಾದ ಕುಂಭಮೇಳದಿಂದ ನದಿ ಪಾತ್ರದ ಬಡಾವಣೆಗಳಲ್ಲಿ ಹಬ್ಬದ ವಾತಾವರಣ ಮನೆ ಮಾಡಿದೆ. ತಿ.ನರಸೀಪುರದ ಮೈಸೂರು ರಸ್ತೆಯ ಜಂಕ್ಷನ್ ಸಮೀಪದ ಪಿಟೀಲು ಚೌಡಯ್ಯ ವೃತ್ತದ ಬಳಿಯಿಂದಲೇ ಅಗಸ್ತೇಶ್ವರಸ್ವಾಮಿ ದೇವಾಲಯದವರೆಗೂ ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿದೆ. ಕೊಳ್ಳೇಗಾಲ ರಸ್ತೆ ಬಳಿಯಿರುವ ಗುಂಜಾನರಸಿಂಹಸ್ವಾಮಿ ದೇವಾಲಯದ ಬಳಿಯೂ, ಬನ್ನೂರು ರಸ್ತೆಯ ಭಿಕ್ಷೇಶ್ವರ ದೇವಾಲಯದ ಮುಂಭಾಗದ ಪ್ರದೇಶವನ್ನು ತಳಿರು–ತೋರಣಗಳಿಂದ ಅಲಂಕರಿಸಲಾಗಿದೆ.

ಮೂರು ದೇವಾಲಯಗಳ ರಸ್ತೆಯಲ್ಲಿ ಧ್ವನಿವರ್ಧಕದಲ್ಲಿ ಮಲೆ ಮಹದೇಶ್ವರ, ಸಿದ್ದಪ್ಪಾಜಿ, ರಾಚಪ್ಪಾಜಿ, ಮಂಟೇಸ್ವಾಮಿ ಸೇರಿದಂತೆ ವಿವಿಧ ಭಕ್ತಿಗೀತೆಗಳ ಸುಧೆ ಮೊಳಗುತ್ತಿದ್ದು, ಎಲ್ಲೆಡೆ ಭಕ್ತಿ ಕೇಂದ್ರೀಕೃತ ವಾತಾವರಣ ನಿರ್ಮಾಣವಾಗಿದೆ.

ಮೂರು ವರ್ಷಕ್ಕೊಮ್ಮೆ ನಡೆಯುವ ಕುಂಭಮೇಳವನ್ನು ನರಸೀಪುರ ಪಟ್ಟಣದ ಜನರೂ ಸಜ್ಜಾಗಿದ್ದು, ಕುಂಭಮೇಳವನ್ನು ಜಾತ್ರೆಯಂತೆ ಆಚರಿಸುತ್ತಿದ್ದಾರೆ. ಪುಣ್ಯಸ್ನಾನ ಮಾಡಲು ಹೊರಗಿನಿಂದ ಜನರು ತಂಡೋಪತಂಡವಾಗಿ ತಿ.ನರಸೀಪುರಕ್ಕೆ ಬರುತ್ತಿದ್ದರೆ, ಪಟ್ಟಣದ ಜನತೆ ಕುಟುಂಬ ಸದಸ್ಯರೊಂದಿಗೆ ತ್ರಿವೇಣಿ ಸಂಗಮದ ದಡದಲ್ಲಿರುವ ದೇವಾಲಯಗಳಿಗೆ ತೆರಳಿ ಪೂಜೆ ಸಲ್ಲಿಸುವ ಮೂಲಕ ಕುಂಭಮೇಳವನ್ನು ಹಬ್ಬದಂತೆ ಆಚರಿಸುತ್ತಿದ್ದಾರೆ.

ತಾಲೂಕು ಆಡಳಿತದಿಂದ ಅಚ್ಚುಕಟ್ಟಾದ ವ್ಯವಸ್ಥೆ

ತಿ.ನರಸೀಪುರ,ಫೆ.10(ಎಂಟಿವೈ, ಎಸ್‌ಕೆ)–ಅಪಾರ ಸಂಖ್ಯೆಯ ಭಕ್ತರು ಆಗಮಿಸುವ ನಿರೀಕ್ಷೆಯೊಂದಿಗೆ ಆರಂಭವಾದ ಕುಂಭಮೇಳದಲ್ಲಿ ಅಹಿತಕರ ಘಟನೆ ನಡೆದಂತೆ ಕಟ್ಟೆಚ್ಚರ ವಹಿಸುವುದರೊಂದಿಗೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಿರುವುದು ಪ್ರಶಂಸೆಗೆ ಪಾತ್ರವಾಗಿದೆ. ತಿ.ನರಸೀಪುರದ ಪಿಟೀಲು ಚೌಡಯ್ಯ ವೃತ್ತದಿಂದ ಕುಂಭಮೇಳ ನಡೆಯುವ ಅಗಸ್ತೇಶ್ವರ ದೇವಾಲಯದ ರಸ್ತೆಯಲ್ಲಿ ಖಾಸಗಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದ್ದು, ಇದರಿಂದ ಭಕ್ತರು ಸುಲಲಿತವಾಗಿ ದೇವಾಲಯದತ್ತ ತೆರಳಲು ಸಾಧ್ಯವಾಗುತ್ತಿದೆ. ಅಲ್ಲದೆ, ನೂಕುನುಗ್ಗಲು ಉಂಟಾಗಂದಂತೆ ರಸ್ತೆ ಮಧ್ಯೆ ಬ್ಯಾರಿಕೇಡ್ ಅಳವಡಿಸಿರುವುದರಿಂದ ದೇವಾಲಯಕ್ಕೆ ಹೋಗುವ ಮತ್ತು ದೇವಾಲಯದಿಂದ ವಾಪಸ್ಸಾಗುವವರು ಪ್ರತ್ಯೇಕವಾಗಿ ಸಂಚರಿಸುವುದರಿಂದ ನೂಕುನುಗ್ಗಲು ಉಂಟಾಗುವುದನ್ನು ತಡೆಟ್ಟಿದಂತಾಗಿದೆ.

ಪುಣ್ಯಸ್ನಾನ ಮಾಡಲು ವಾಹನಗಳಲ್ಲಿ ಬರುವ ಗಣ್ಯರು, ಮಠಾಧೀಶರು, ಧಾರ್ಮಿಕ ಮುಖಂಡರು ಹಾಗೂ ಹಿರಿಯ ನಾಗರಿಕರನ್ನು ಪುಣ್ಯಸ್ನಾನ ಘಟ್ಟದತ್ತ ಕರೆದೊಯ್ಯಲು ಬ್ಯಾಟರಿ ಚಾಲಿತ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಗಣ್ಯರ ವಾಹನಗಳನ್ನು ಆದಿಚುಂಚನಗಿರಿ ಮಠದ ಭವನದ ಪಕ್ಕದಲ್ಲಿರುವ ಮೈದಾನದಲ್ಲಿ ನಿಲುಗಡೆ ಮಾಡಲು ವ್ಯವಸ್ಥೆ ಮಾಡಲಾಗಿದೆ. ಇದರಿಂದ ತ್ರಿವೇಣಿ ಸಂಗಮದತ್ತ ತೆರಳುವ ಭಕ್ತರು ಸರಾಗವಾಗಿ ಕಾಲ್ನಡಿಗೆಯಲ್ಲಿ ಸಾಗಬಹುದಾಗಿದೆ.

ತಿ.ನರಸೀಪುರಕ್ಕೆ ಹೆಚ್ಚುವರಿ ಬಸ್ ವ್ಯವಸ್ಥೆ

ತಿ.ನರಸೀಪುರ,ಫೆ.10(ಎಂಟಿವೈ, ಎಸ್‌ಕೆ)–ಕುಂಭಮೇಳಕ್ಕೆ ರಾಜ್ಯದ ವಿವಿಧೆಡೆಗಳಿಂದ ಭಕ್ತರು ಬರುವ ನಿರೀಕ್ಷೆ ಇರುವುದರಿಂದ ಮೈಸೂರು ಸೇರಿದಂತೆ ವಿವಿಧೆಡೆಯಿಂದ ತಿ.ನರಸೀಪುರಕ್ಕೆ ಹೆಚ್ಚುವರಿ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಮೈಸೂರಿನ ನಗರ ಹಾಗೂ ಗ್ರಾಮಾಂತರ ಬಸ್ ನಿಲ್ದಾಣ, ಬನ್ನೂರು, ನಂಜನಗೂಡು, ಕೊಳ್ಳೇಗಾಲ, ಮಂಡ್ಯ, ಬೆಂಗಳೂರು ಸೇರಿದಂತೆ ವಿವಿಧೆಡೆ ಸಾರಿಗೆ ಸಂಸ್ಥೆಯ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಖಾಸಗಿ ಬಸ್‌ಗಳ ಸಂಖ್ಯೆಯೂ ಹೆಚ್ಚಾಗಿರುವುದರಿಂದ ಕುಂಭಮೇಳಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾಗಿದೆ.

ವಾಸ್ತವ್ಯಕ್ಕೂ ಸಿದ್ಧತೆ: ಹೊರ ರಾಜ್ಯ, ಜಿಲ್ಲೆಗಳಿಂದ ಕುಂಭಮೇಳಕ್ಕೆ ಬರುವ ಭಕ್ತರಿಗಾಗಿ ವಿವಿಧ ಮಠಗಳಿಂದ ವಿವಿಧ ಸೇವೆ ಒದಗಿಸಲಾಗುತ್ತಿದೆ. ತಿರುಮಕೂಡಲು ನರಸೀಪುರದಲ್ಲಿರುವ ವಿವಿಧ ಮಠಗಳ ಶಾಖಾ ಮಠಗಳು ಹಾಗೂ ವಿವಿಧ ಸಭಾ ಭವನದಲ್ಲಿ ವಾಸ್ತವ್ಯಕ್ಕೆ ಅವಕಾಶ ಕಲ್ಪಿಸಿವೆ.

ದಾಸೋಹ: ಕುಂಭಮೇಳಕ್ಕೆ ಬರುವ ಭಕ್ತರಿಗಾಗಿ ಪ್ರಸಾದ ವಿನಿಯೋಗಿಸುವುದಕ್ಕೂ ವ್ಯವಸ್ಥೆ ಮಾಡಲಾಗಿದ್ದು, ಐದಾರು ಸ್ಥಳದಲ್ಲಿ ದೊಡ್ಡಗಾತ್ರದ ಪೆಂಡಾಲ್ ಹಾಕಿ ಅಡುಗೆ ತಯಾರಿಸಿ, ಭಕ್ತರಿಗೆ ವಿತರಿಸಲಾಗುತ್ತಿದೆ.

ಡ್ರೈ ಡೇ: ವಿವಿಧೆಡೆಯಿಂದ ಕುಂಭಮೇಳದಲ್ಲಿ ಪಾಲ್ಗೊಳ್ಳಲು ಭಕ್ತರು ಆಗಮಿಸುವುದರಿಂದ ತಿ.ನರಸೀಪುರದಲ್ಲಿ ಇಂದಿನಿಂದ 3 ದಿನ ಮದ್ಯ ಮಾರಾಟ ನಿಷೇಧಿಸಲಾಗಿದೆ. ಇದಕ್ಕೆ ಮದ್ಯಮಾರಾಟಗಾರರು ಹಾಗೂ ಮದ್ಯಪ್ರಿಯರು ಜಿಲ್ಲಾಡಳಿತದ ಆದೇಶಕ್ಕೆ ಸಹಕರಿಸಿದ್ದು, ಕುಂಭಮೇಳದ ಯಶಸ್ಸಿಗೆ ಪಟ್ಟಣದ ಜನತೆ ಕೈ ಜೋಡಿಸಿದ್ದಾರೆ.

ವಿಚಾರಣೆ ಫೆ.20ಕ್ಕೆ ಮುಂದೂಡಿಕೆ

ಫೆಬ್ರವರಿ 20ಕ್ಕೆ ನಿಗದಿಪಡಿಸಿತು. ಇಡಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ್ ಕಾಮತ್, ಸಮನ್ಸ್ ಜಾರಿಗೊಳಿಸಿದ ನಂತರ ಹೈಕೋರ್ಟ್ ಮಧ್ಯಪ್ರವೇಶ ಮಾಡಬಾರದು ಎಂಬ ಬಗ್ಗೆ ಸುಪ್ರೀಂ ಕೋರ್ಟ್‌ನ ಇತ್ತೀಚಿನ ತೀರ್ಪನ್ನು ಉಲ್ಲೇಖಿಸಿ, ಆರೋಪಿಗೆ ಸಮನ್ಸ್ ಜಾರಿಗೊಳಿಸಬೇಕೆಂಬ ನಿಯಮವಿಲ್ಲ ಎಂದರು.

ಸಚಿವ ಬೈರತಿ ಸುರೇಶ್ ಪರ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿ, ಇ.ಡಿ. ತನಿಖಾಧಿಕಾರಿಗಳು ಕಳುಹಿಸಿರುವ ನಮೂನೆಯಲ್ಲಿ ಬೈರತಿ ಕುಟುಂಬದವರ, ಉದ್ಯೋಗಿಗಳು ಹಾಗೂ ಇತರರ ಬ್ಯಾಂಕ್ ಅಕೌಂಟ್ ವಿವರ ಕೇಳಿದ್ದು, ಇದು ಖಾಸಗಿತನದ ಸ್ಪಷ್ಟ ಉಲ್ಲಂಘನೆಯಾಗಿದೆ, 14 ನಿವೇಶನ ಹಂಚಿಕೆಗೂ ಸಚಿವರಿಗೂ ಸಂಬಂಧವಿಲ್ಲ, ಮುಡಾದಲ್ಲಿ ಅವರು ಯಾವುದೇ ಹುದ್ದೆ ಹೊಂದಿಲ್ಲದ ಕಾರಣ ಸಮನ್ಸ್ ಕಾನೂನುಬಾಹಿರ ಎಂದರು.

ನ್ಯಾಯಮೂರ್ತಿಗಳು ಮಧ್ಯಪ್ರವೇಶಿಸಿ, ಬೈರತಿ ಸುರೇಶ್ ಯಾವ ಇಲಾಖೆ ಸಚಿವರು ಎಂದಾಗ, ವಕೀಲ ಸಿ.ವಿ.ನಾಗೇಶ್, ನಗರಾಭಿವೃದ್ಧಿ ಇಲಾಖೆ ಸಚಿವರು ಎಂದು ಉತ್ತರಿಸಿದರು. ವಾದ ಮುಂದುವರಿಸಿದ ಅವರು, ಬೈರತಿ ಸುರೇಶ್ 2023ರಲ್ಲಿ ನಗರಾಭಿವೃದ್ಧಿ ಸಚಿವರಾಗಿ ಅಧಿಕಾರ ವಹಿಸಿಕೊಂಡಿದ್ದು, ಇಡಿ ಕಳುಹಿಸಿರುವ ನಮೂನೆಯಲ್ಲಿ ವೈಯಕ್ತಿಕ ವಿವರ ಕೇಳಲಾಗಿದೆ, ಇದು ಖಾಸಗಿತನದ ಹಕ್ಕಿನ ಸ್ಪಷ್ಟ ಉಲ್ಲಂಘನೆಯಾಗಿದೆ, ಮುಡಾ ಮಾಜಿ ಆಯುಕ್ತ ಡಿ.ಬಿ.ನಟೇಶ್ ವಿರುದ್ಧದ ಶೋಧನೆ, ಜಪ್ತಿ ಕ್ರಮ ರದ್ದುಪಡಿಸಲಾಗಿದೆ, ಇ.ಡಿ. ಅಧಿಕಾರಿಗಳ ವಿರುದ್ಧ ಕ್ರಮಕ್ಕೂ ಸ್ವಾತಂತ್ರ್ಯ ನೀಡಿದೆ. ಮುಡಾ ಹಗರಣದಲ್ಲಿ ಸಚಿವರ ಪಾತ್ರದ ಬಗ್ಗೆ ಸಮನ್ಸ್‌ನಲ್ಲಿ ಯಾವುದೇ ಉಲ್ಲೇಖವಿಲ್ಲ ಎಂದರು. ಇದಕ್ಕೆ ನ್ಯಾಯಮೂರ್ತಿಗಳು, ನಗರಾಭಿವೃದ್ಧಿ ಸಚಿವರಾಗಿರುವುದರಿಂದಲೇ ಸಮನ್ಸ್ ನೀಡರಬಹುದಲ್ಲವೇ ಎಂದು ಪ್ರಶ್ನಿಸಿದರು. ಇದಕ್ಕುತ್ತರಿಸಿದ ವಕೀಲರು, ಇ.ಡಿ. ಯಾವುದೇ ಕಾರಣ ನೀಡದೇ ಸಮನ್ಸ್ ಜಾರಿಗೊಳಿಸಿದೆ, 14 ನಿವೇಶನ ಹಂಚಿಕೆ ವಿಚಾರದಲ್ಲಿ ಬೈರತಿ ಸುರೇಶ್ ಪಾತ್ರವಿಲ್ಲ, ಅವರ ತಂಗಿ, ಮಗಳು, ಅಳಿಯ ಸಂಬಂಧಿಗಳ ಬ್ಯಾಂಕ್ ಅಕೌಂಟ್ ವಿವರ ಕೇಳಿದ್ದಾರೆ. ಆದಾಯ ತೆರಿಗೆ (ಐ.ಟಿ.) ಅಧಿಕಾರಿಗಳು ಕೇಳಿದ್ದರೆ ಸೂಕ್ತವಾಗುತ್ತಿತ್ತು, ಆದರೆ, ಇ.ಡಿ.ಗೆ ಈ ಅಧಿಕಾರ ಇಲ್ಲ ಎಂದರು.

ಆರೋಪಿ ಪರ ವಕೀಲರ ಆಕ್ಷೇಪಕ್ಕೆ ಒಂದೆರಡು ದಿನದಲ್ಲಿ ವಿವರಣೆ ಸಲ್ಲಿಸುವುದಾಗಿ ಇ.ಡಿ. ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ್ ಕಾಮತ್ ನ್ಯಾಯಪೀಠಕ್ಕೆ ತಿಳಿಸಿದರು. ಮುಖ್ಯಮಂತ್ರಿ ಪತ್ನಿ ಪರ ವಕೀಲ ಸಂದೇಶ್ ಚೌಟ ವಾದ ಮಂಡಿಸಿ, ಪ್ರಕರಣದಲ್ಲಿ ಅಪರಾಧದಿಂದ ಗಳಿಸಿದ ಹಣವಿಲ್ಲ. ಅಕ್ರಮ ಹಣ ವರ್ಗಾವಣೆ ಇಲ್ಲದಿರುವುದರಿಂದ ಇ.ಡಿ. ತನಿಖೆ ಸರಿಯಲ್ಲ. ಈಗಾಗಲೇ ತನಿಖೆ ನಡೆದಿರುವ ಬಗ್ಗೆಯೇ 2ನೇ ತನಿಖೆ ನಡೆಸುವಂತಿಲ್ಲ. ಅಕ್ರಮ ಹಣದ ಗಳಿಕೆಯಿದ್ದರೆ ಮಾತ್ರ ಇಡಿಗೆ ಅಧಿಕಾರವಿರುತ್ತದೆ. ಆಗ ಮಾತ್ರ ಸರ್ಚ್ ಮತ್ತು ಸೀಜ್ ಮಾಡಬಹುದಾಗಿದೆ ಎಂದರು.

ಮುಂದುವರೆದು ವಾದ ಮಂಡಿಸಿದ ಅವರು, ಡಿ.ಬಿ.ನಟೇಶ್ ಪ್ರಕರಣದಲ್ಲಿ ಇ.ಡಿ. ಸರ್ಚ್ ಮತ್ತು ಸೀಜ್ ರದ್ದುಪಡಿಸಲಾಗಿದೆ, ಈ ವಿಷಯದಲ್ಲಿ ಕಾನೂನು ಉಲ್ಲಂಘನೆಯಾಗಿದೆ ಎಂದು ಹೈಕೋರ್ಟ್ ನಮ್ಮ ಪರ ತೀರ್ಪು ನೀಡಿದೆ ಎಂದರು.

ಇ.ಡಿ. ಸರ್ಚ್ ಮತ್ತು ಸೀಜ್‌ನಲ್ಲಿ ಯಾವುದೇ ದಾಖಲೆ ಸಿಕ್ಕಿಲ್ಲ, ಏನೂ ಸಿಗದೇ ಡಿ.ಬಿ. ನಟೇಶ್ ಮೊಬೈಲ್ ಸೀಜ್ ಮಾಡಿದ್ದರು, ಸಮನ್ಸ್ ನೀಡುವ ಮುನ್ನ ಪ್ರಕ್ರಿಯೆಗಳನ್ನು ಪಾಲಿಸಿಲ್ಲ, ಅಕ್ರಮ ಹಣ ವರ್ಗಾವಣೆ ತಡೆಗೆ ಪಿಎಂಎಲ್‌ಎ ಕಾಯ್ದೆ ತರಲಾಗಿದೆ, ಎಲ್ಲಾ ಕೇಸ್‌ಗಳಿಗೂ ಈ ಕಾನೂನನ್ನು ಅನ್ವಯಿಸುತ್ತಿದೆ ಎಂದರು. ಮುಂದುವರೆದ ವಿಚಾರಣೆಯನ್ನು ಫೆಬ್ರವರಿ 20ಕ್ಕೆ ತೆಗೆದುಕೊಳ್ಳುವುದಾಗಿ ನ್ಯಾಯಮೂರ್ತಿಗಳು ತಿಳಿಸಿದರು.

ಖರ್ಗೆ ಕರೆತರುವ ಮತ್ತೊಂದು ಯತ್ನ

ಅವಕಾಶ ಮುಂದೆ ದೊರೆಯದು. ಈಗ ಸಿಕ್ಕಿರುವ ಅವಕಾಶವನ್ನು ನಾವು ಸದ್ಬಳಕೆ ಮಾಡಿಕೊಂಡು ಮುಖ್ಯಮಂತ್ರಿ ಪಟ್ಟ ಪಡೆಯಲೇಬೇಕು. ನೀವು ಈ ನಾಯಕತ್ವ ವಹಿಸಿಕೊಳ್ಳಲು ರಾಜ್ಯ ರಾಜಕಾರಣಕ್ಕೆ ಮತ್ತೆ ಬನ್ನಿ, ನಿಮಗೆ ಎಲ್ಲರ ಬೆಂಬಲ ದೊರೆಯಲಿದೆ, ಹಿಂದೆ ಮೂರು ಬಾರಿ ಮುಖ್ಯಮಂತ್ರಿ ಆಗುವ ಅವಕಾಶ ತಪ್ಪಿದೆ. ಈ ಬಾರಿ ಅದನ್ನು ಕಳೆದುಕೊಳ್ಳಬೇಡಿ ಎಂದು ಖರ್ಗೆ ಅವರಿಗೆ ದುಂಬಾಲು ಬೀಳಲಿದ್ದಾರಂತೆ.

ಪಕ್ಷ ಸಂಘಟನೆ ದೃಷ್ಟಿಯಿಂದ ನಾವು ಕರ್ನಾಟಕ ವಿಧಾನಸಭೆಯ ಬಜೆಟ್ ಅಧಿವೇಶನಕ್ಕೂ ಮುನ್ನ ನಾಲ್ಕು ವಿಭಾಗಗಳಲ್ಲಿ ದಲಿತ ಸಮುದಾಯದ ಬೃಹತ್ ಸಮಾವೇಶ ಹಮ್ಮಿಕೊಳ್ಳಲು ಅವಕಾಶ ನೀಡಿ ಎಂದು ಮನವಿ ಮಾಡಲಿದ್ದಾರೆ.

ಈ ಹಿಂದೆ, ಇಂತಹ ಸಮಾವೇಶ ನಡೆಸಲು ಪರಿಶಿಷ್ಟ ಜಾತಿ ಮತ್ತು ವರ್ಗದ ಶಾಸಕರು ಮತ್ತು ಮುಖಂಡರು ಸಭೆ ನಡೆಸಲು ಮುಂದಾದಾಗ ವರಿಷ್ಠರು ತಡೆ ನೀಡಿದ್ದರು. ಅಷ್ಟೇ ಅಲ್ಲ, ಕೊಟ್ಟಿರುವ ಕೆಲಸವನ್ನು ಬಾಯಿ ಮುಚ್ಚಿಕೊಂಡು ಮಾಡಿ ಎಂದು ಖರ್ಗೆ ಅವರೇ ಈ ಸಚಿವರುಗಳಿಗೆ ಎಚ್ಚರಿಕೆಯನ್ನೂ ನೀಡಿದ್ದರು. ಇದೀಗ ಖರ್ಗೆ ಅವರ ಮನವೊಲಿಸಿ ಸಮಾವೇಶ ನಡೆಸಲು ಸಚಿವರುಗಳು ದೆಹಲಿ ದಂಡಯಾತ್ರೆ ಕೈಗೊಳ್ಳುತ್ತಿದ್ದಾರೆ.

ಮುಡಾ ಹಗರಣವನ್ನು ಸಿಬಿಐಗೆ ವಹಿಸಲು ಹೈಕೋರ್ಟ್ ನಿರಾಕರಿಸುತ್ತಿದ್ದಂತೆ, ರಾಜ್ಯ ಕಾಂಗ್ರೆಸ್ ರಾಜಕಾರಣದಲ್ಲಿ ಈ ಬೆಳವಣಿಗೆ ಕಂಡುಬರುತ್ತಿದೆ.

ಮಾರಕಾಸ್ತ್ರ ಹಿಡಿದು ಗಲಾಟೆ; ಮೂವರು ಪೊಲೀಸ್ ವಶಕ್ಕೆ ಮತ್ತೋರ್ವ ಪರಾರಿ

ಮೈಸೂರು, ಫೆ.10(ಎಸ್‌ಬಿಡಿ)– ಸಾರ್ವಜನಿಕ ಸ್ಥಳದಲ್ಲಿ ಮಾರಕಾಸ್ತ್ರ ಹಿಡಿದು ಗಲಾಟೆ ಮಾಡುತ್ತಿದ್ದ ಆರೋಪದಡಿ ಮೈಸೂರಿನ ಎನ್.ಆರ್.ಠಾಣೆ ಪೊಲೀಸರು ಮೂವರನ್ನು ವಶಕ್ಕೆ ಪಡೆದಿದ್ದು, ಮತ್ತೊಬ್ಬ ಪರಾರಿಯಾಗಿದ್ದಾನೆ.

ನಗರದ ಕುರಿಮಂಡಿ ನಿವಾಸಿ ಶಕೀಲ್ (26), ಉದಯಗಿರಿಯ ಮೊಹಮ್ಮದ್ ರಫಿ(29) ಹಾಗೂ ಶಾರೀಕ್(25)ನನ್ನು ವಶಕ್ಕೆ ಪಡೆದಿದ್ದು, ಮೊಹಮ್ಮದ್ ಸಲೀಂ ಎಂಬಾತ ಪರಾರಿಯಾಗಿದ್ದಾನೆ. ಸ್ಥಳದಲ್ಲಿದ್ದ ಕಾರು ಹಾಗೂ ಲಾಂಗ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಕುರಿಮಂಡಿ, ಒಂದನೇ ಕ್ರಾಸ್‌ನಲ್ಲಿ ಭಾನುವಾರ ಸಂಜೆ ಈ ಮೂವರೂ ಲಾಂಗ್ ಹಿಡಿದು ಗಲಾಟೆ ಮಾಡಿಕೊಂಡು, ಸಾರ್ವಜನಿಕರನ್ನು ಭಯಪಡಿಸುತ್ತಿದ್ದಾರೆ ಎಂಬ ಮಾಹಿತಿ ತಿಳಿದು, ಗಸ್ತಿನಲ್ಲಿದ್ದ ಸಬ್‌ಇನ್ಸ್‌ಪೆಕ್ಟರ್ ಚಂದ್ರಶೇಖರ್ ಇಟಗಿ, ಸಿಬ್ಬಂದಿ ವಿನೋದ್ ರಾಥೋಡ್, ರಾಜೇಸಾಬ್ ಮುಲ್ಲಾ ಹಾಗೂ ಮಲ್ಲಿಕಾರ್ಜುನ್ ಚೌಗಲೆ ಸ್ಥಳಕ್ಕೆ ದೌಡಾಯಿಸಿದ್ದಾರೆ. ಪೊಲೀಸ್ ಗರುಡಾ ವಾಹನವನ್ನು ಕಂಡು ಮೊಹಮ್ಮದ್ ಸಲೀಂ ಓಡಿ ಹೋಗಿದ್ದು, ಮೂವರು ಸಿಕ್ಕಿ ಬಿದಿದ್ದಾರೆ.

ಈ ಸಂಬಂಧ ಎನ್.ಆರ್.ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಶಕ್ಕೆ ಪಡೆದವರನ್ನು ವಿಚಾರಣೆಗೆ ಒಳಪಡಿಸಲಾಗಿದೆ.

ಗೂಡ್ಸ್ ವಾಹನ ಡಿಕ್ಕಿ; ಬೈಕ್ ಸವಾರ ಸಾವು

ಮೈಸೂರು, ಫೆ.10(ಎಸ್‌ಬಿಡಿ)– ಈಚರ್ ಗೂಡ್ಸ್ ವಾಹನಕ್ಕೆ ಡಿಕ್ಕಿ ಹೊಡೆದು ಬೈಕ್ ಸವಾರ ಮೃತಪಟ್ಟಿರುವ ಘಟನೆ ಮೈಸೂರು–ದಡದಹಳ್ಳಿ ರಸ್ತೆಯಲ್ಲಿ ನಡೆದಿದೆ.

ಜಯಪುರ ಹೋಬಳಿ, ಸಿಂಧುವಳ್ಳಿ ಗ್ರಾಮದ ನಿವಾಸಿ ಶ್ರೀನಿವಾಸ(45) ಅಪಘಾತದಲ್ಲಿ ಮೃತಪಟ್ಟವರು. ಬಾರ್ ಬೆಂಡಿಂಗ್ ಕೆಲಸ ಮಾಡುತ್ತಿದ್ದ ಇವರು ಎಂದಿನಂತೆ ತಮ್ಮ ಹೀರೋ ಹೋಂಡಾ ಸ್ಪ್ಲೆಂಡರ್ ಪ್ಲಸ್ ಬೈಕ್(ಕೆಎ–09, ಇಆರ್–0228)ನಲ್ಲಿ ಮೈಸೂರಿಗೆ ಕೆಲಸಕ್ಕೆ ಹೋಗಿ ವಾಪಸ್ಸಾಗುವಾಗ ಶನಿವಾರ ರಾತ್ರಿ ಈ ದುರಂತ ಸಂಭವಿಸಿದೆ.

ಮೈಸೂರು–ದಡದಹಳ್ಳಿ ರಸ್ತೆಯಲ್ಲಿ ಸಾಗುತ್ತಿದ್ದ ಈಚರ್ ವಾಹನ(ಕೆಎ–12, ಎ–4470) ಚಾಲಕ ಟೀ ಅಂಗಡಿ ಬಳಿ ದಿಢೀರ್ ವಾಹನ ನಿಲ್ಲಿಸಿದ್ದಾನೆ. ಆ ವೇಳೆ ಹಿಂಬದಿಯಲ್ಲಿ ಹೋಗುತ್ತಿದ್ದ ಶ್ರೀನಿವಾಸ್ ಬೈಕ್ ನಿಯಂತ್ರಿಸಲಾಗದೆ ಡಿಕ್ಕಿ ಹೊಡೆದಿದ್ದಾರೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಇಎಂಎಲ್‌ಗೆ ಗೋಲ್ಡನ್ ಪಿಕಾಕ್ ಹೆಚ್‌ಆರ್ ಎಕ್ಸಲೆನ್ಸ್ ಅವಾರ್ಡ್ 2024



ಬಿಇಎಂಎಲ್‌ಗೆ ಗೋಲ್ಡನ್ ಪಿಕಾಕ್ ಅವಾರ್ಡ್–2024 ಪ್ರಶಸ್ತಿ ನೀಡಲಾಯಿತು.

ಮೈಸೂರು, ಫೆ. 10– ಬಿಇಎಂಎಲ್ ಲಿಮಿಟೆಡ್‌ನ ಅತ್ಯುತ್ತಮ ಮಾನವ ಸಂಪನ್ಮೂಲ ನಿರ್ವಹಣಾ ಅಭ್ಯಾಸಗಳು ಮತ್ತು ದೂರದೃಷ್ಟಿಯ ನಾಯಕತ್ವವನ್ನು ಗುರುತಿಸಿ ಗೋಲ್ಡನ್ ಪಿಕಾಕ್ ಅವಾರ್ಡ್ಸ್ –2024 ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಂಜಿನಿಯರಿಂಗ್ ವಿಭಾಗದಲ್ಲಿ ಪ್ರತಿಷ್ಠಿತ ಗೋಲ್ಡನ್ ಪಿಕಾಕ್ HR ಎಕ್ಸಲೆನ್ಸ್ ಪ್ರಶಸ್ತಿಯನ್ನು ನೀಡಲಾಯಿತು.

ಈ ಪ್ರಶಸ್ತಿಯು BEML ಲಿಮಿಟೆಡ್‌ನ ಸಿಎಂಡಿ ಶಾಂತನುರಾಯ್ ಅವರ ಕ್ರಿಯಾತ್ಮಕ ನಾಯಕತ್ವದಲ್ಲಿ ಉನ್ನತ–ಕಾರ್ಯಕ್ಷಮತೆಯ, ಜನ–ಕೇಂದ್ರಿತ ಸಂಸ್ಥೆಯನ್ನು ಬೆಳೆಸುವ BEMLನ ಬದ್ಧತೆಯನ್ನು ಒತ್ತಿಹೇಳುತ್ತದೆ. ಮುಂಬೈನ ತಾಜ್ ಲ್ಯಾಂಡ್ಸ್ ಎಂಡ್‌ನಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಡೈರೆಕ್ಟರ್ಸ್ ಆಯೋಜಿಸಿದ್ದ ವಿಶಿಷ್ಟ ಸಮಾರಂಭದಲ್ಲಿ ಬಿಇಎಂಎಲ್‌ನ ನಿರ್ದೇಶಕ (ಮಾನವ ಸಂಪನ್ಮೂಲ) ದೇಬಿ ಪ್ರಸಾದ್ ಸತ್ಪತಿ, ಹಿರಿಯ ಮಾನವ ಸಂಪನ್ಮೂಲ ನಾಯಕತ್ವ ತಂಡಕ್ಕೆ ಸಂಸದ ಅನುರಾಗ್ ಠಾಕೂರ್ ಪ್ರಶಸ್ತಿ ಪ್ರದಾನ ಮಾಡಿದರು.

ಭಾರತೀಯ ವೈದ್ಯಕೀಯ ಸಂಘದಿಂದ ಮುಂದುವರಿದ ವೈದ್ಯಕೀಯ ಶಿಕ್ಷಣ



ಭಾರತೀಯ ವೈದ್ಯಕೀಯ ಸಂಘದ ಮೈಸೂರು ಶಾಖೆ ವತಿಯಿಂದ ವೈದ್ಯರಿಗೆ ಆಧುನಿಕ ಚಿಕಿತ್ಸಾ ಪದ್ಧತಿ ಕುರಿತು ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಮೈಸೂರು,ಫೆ.10–ಭಾರತೀಯ ವೈದ್ಯಕೀಯ ಸಂಘ, ಮೈಸೂರು ಶಾಖೆ ವತಿಯಿಂದ ವೈದ್ಯಕೀಯ ಸಹೋದ್ಯೋಗಿಗಳಿಗೆ ಮುಂದುವರಿದ ವೈದ್ಯಕೀಯ ಶಿಕ್ಷಣ ಅಡಿಯಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಗುದದ್ವಾರದ ತೊಂದರೆಗಳು ಮತ್ತು ಆಧುನಿಕ ಚಿಕಿತ್ಸಾ ಪದ್ಧತಿ ಬಗ್ಗೆ ಮೈಸೂರು ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರಕ್ರಿಯೆ ಪ್ರಾಧ್ಯಾಪಕ ಡಾ.ಬಿ.ಎನ್. ಆನಂದರವಿ ವಿವರಿಸಿದರು. ವಯನಾಡು ವೈದ್ಯಕೀಯ ಕಾಲೇಜಿನ ಇಎನ್‌ಟಿ ವಿಭಾಗದ ಮುಖ್ಯಸ್ಥ, ಕಿವಿ, ಗಂಟಲು, ಮೂಗಿನ ತೊಂದರೆಗಳ ಪ್ರಾಧ್ಯಾಪಕ ಡಾ.ಎಸ್.ಬಿ. ಪ್ರಕಾಶ್ ಮಾಹಿತಿ ನೀಡಿದರು. ಸಂಘದ ಅಧ್ಯಕ್ಷ ಡಾ.ಡಿ.ಪರಮೇಶ್ವರ್ ನಾಯ್ಕ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಡಾ.ಕೆ.ಪಿ.ದೇವಿ ಆನಂದ್, ಖಜಾಂಚಿ ಡಾ.ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ಯುವ ಕಾಂಗ್ರೆಸ್ ನೂತನ ಪದಾಧಿಕಾರಿಗಳಿಗೆ ಅಭಿನಂದನೆ



ಯುವ ಕಾಂಗ್ರೆಸ್ ನೂತನ ಜಿಲ್ಲಾ ಪದಾಧಿಕಾರಿಗಳನ್ನು ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು, ಫೆ.10(ಎಂಕೆ)– ಯುವ ಕಾಂಗ್ರೆಸ್ ನೂತನ ಜಿಲ್ಲಾಧ್ಯಕ್ಷ ಚಂದನ್ ಕುಮಾರ್ ಹಾಗೂ ಇತರೆ ಪದಾಧಿಕಾರಿಗಳನ್ನು ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ವತಿಯಿಂದ ಅಭಿನಂದಿಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿ ಕಾಂಗ್ರೆಸ್ ಭವನದಲ್ಲಿ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ನೂತನ ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಚಂದನ್‌ಕುಮಾರ್, ಪ್ರಧಾನ ಕಾರ್ಯದರ್ಶಿ ಸಮಿವುಲ್ಲಾ, ಬನ್ನೂರು ಬ್ಲಾಕ್ ಅಧ್ಯಕ್ಷ ಮಹಮದ್ ವಸೀಂ, ಹೆಚ್.ಡಿ.ಕೋಟೆ ವಿಧಾನ ಸಭಾ ಕ್ಷೇತ್ರದ ಉಪಾಧ್ಯಕ್ಷ ಯಾಸಿನ್ ಮತ್ತು ಇನ್ನಿತರರನ್ನು ಅಭಿನಂದಿಸಿದರು.

ಬಳಿಕ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಧ್ಯೇಯೋದ್ದೇಶಗಳನ್ನು ಇಡೀ ಪ್ರಪಂಚವೇ ಒಪ್ಪಿಕೊಂಡಿದ್ದು, ಪಕ್ಷದ ಸಿದ್ಧಾಂತದ ವಿಚಾರದಲ್ಲಿ ಯುವ ಕಾಂಗ್ರೆಸ್ ಪದಾಧಿಕಾರಿಗಳು ಎಂದೂ ರಾಜೀಯಾಗಬಾರದು. ನಾನು ಕೂಡ ಯುವ ಕಾಂಗ್ರೆಸ್‌ನಲ್ಲಿ ಕೆಲಸ ಮಾಡಿದ್ದೇನೆ. ಯಾರು ವಿದ್ಯಾರ್ಥಿ ಮತ್ತು ಯುವ ಕಾಂಗ್ರೆಸ್‌ನಿಂದ ಬೆಳೆದು ಬರುತ್ತಾರೋ ಅವರಿಗೆ ದೊಡ್ಡ ಭವಿಷ್ಯವಿದೆ. ಪಕ್ಷಕ್ಕಾಗಿ ಕೆಲಸ ಮಾಡುವವರು ಅಧಿಕಾರದ ಹಿಂದೆ ಬೀಳದೆ ತ್ಯಾಗದ ಮನೋಭಾವ ರೂಢಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಜಿಲ್ಲಾ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಮೊಸಿನ್ ಖಾನ್, ಡಿಸಿಸಿ ವಕ್ತಾರ ಹುಣಸೂರು ಬಸವಣ್ಣ, ಪ್ರಧಾನ ಕಾರ್ಯದರ್ಶಿಗಳಾದ ಲಕ್ಷ್ಮಣ್, ಹಲ್ಲಹಳ್ಳಿ ಅಭಿನಂದನ್, ಗ್ರಾಪಂ ಸದಸ್ಯ ನಾಜಿಮ್ ಉಲ್ಲಾ, ಅಲ್ಪಸಂಖ್ಯಾತ ಘಟಕ ಹೆಚ್.ಡಿ. ಕೋಟೆ ಬ್ಲಾಕ್ ಅಧ್ಯಕ್ಷ ಷಫೀ, ಸರಗೂರು ಅಧ್ಯಕ್ಷ ಅಮೀರ್ ಸುಹೇಲ್, ಹೇಮಂತ್ ಮತ್ತಿತರರಿದ್ದರು.

ಪಿಎಚ್.ಡಿ ಪದವೀಧರ



ಮೈಸೂರು: ಡಾ. ವೈ.ಬಿ. ಬಸವರಾಜು ಅವರ ಮಾರ್ಗದರ್ಶನದಲ್ಲಿ ವಿನಯ ಅವರು ರಸಾಯನಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.

ಈ ಸರ್ಕಾರಿ ಶಾಲೆ 'ಗಣಿತ ಪಾಠಶಾಲೆ'

ವಿನೂತನ ರೀತಿ ಗಣಿತ ಬೋಧನೆ

■ ಮೋಹನ್ ಕಾಯಕ

ಮೈಸೂರು, ಫೆ.10– ಸ್ನೇಹಿತರನ್ನು ಕೂಡಿಸು(ಸಂಕಲನ), ಶತ್ರುಗಳನ್ನು ಕಳೆ (ವ್ಯವಕಲನ), ಸಂತೋಷವನ್ನು ಗುಣಿಸು (ಗುಣಾಕಾರ), ದುಃಖವನ್ನು ಭಾಗಿಸು (ಭಾಗಾಕಾರ) ಎಂಬ ಸಲಹೆಗಳೊಂದಿಗೆ 'ಜೀವನವೇ ಗಣಿತ' ಎಂಬ ಸಂದೇಶವನ್ನು ಮಕ್ಕಳ ಮನದಾಳಕ್ಕಿಳಿಸುವ ವಿಭಿನ್ನ ಪ್ರಯೋಗ ಮೈಸೂರಿನ ಸರ್ಕಾರಿ ಶಾಲೆಯೊಂದರಲ್ಲಿ ನಡೆದಿದೆ...!

'ಮಾಡಿ ಕಲಿ, ನೋಡಿ ಕಲಿ' ಆಶಯದೊಂದಿಗೆ ಮಕ್ಕಳಲ್ಲಿ ಕೌಶಲಾತ್ಮಕ ಕಲಿಕೆಗೆ ಆದ್ಯತೆ ನೀಡಿರುವ ಮೈಸೂರಿನ ಕುರುಬಾರಹಳ್ಳಿಯ ಬಾಡಿಗಾರ್ಡ್ ಲೈನ್ಸ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು, ಲೆಕ್ಕ ಪ್ರವೀಣರನ್ನು ರೂಪಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ಶಿಕ್ಷಕರಲ್ಲಿನ ಬದ್ಧತೆ, ಸ್ಥಳೀಯರ ಸಹಕಾರದೊಂದಿಗೆ ಶಾಲೆಯಲ್ಲಿ 'ಗಣಿತ ಲ್ಯಾಬ್' ಸ್ಥಾಪಿಸಲಾಗಿದ್ದು, ಚಟುವಟಿಕೆ ಆಧಾರಿತ ಶಿಕ್ಷಣ ವ್ಯವಸ್ಥೆ ಕಲ್ಪಿಸಲಾಗಿದೆ. ಗಣಿತ ಪ್ರಯೋಗಾಲಯದ ಜೊತೆಗೆ ಕನ್ನಡ ಭಾಷಾ ಪ್ರಯೋಗಾಲಯ, ಇಂಗ್ಲಿಷ್ ಲ್ಯಾಬ್, ನಲಿ–ಕಲಿ ಕೊಠಡಿ ಮೂಲಕ ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಗೂ ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ಹತ್ತಾರು ಕಲಿಕಾ ಚಟುವಟಿಕೆಯ ತಾಣವಾಗಿಯೂ ಕುರುಬಾರಹಳ್ಳಿಯ ಸರ್ಕಾರಿ ಶಾಲೆ ರೂಪುಗೊಂಡಿದೆ. ಗಣಿತವನ್ನು ಕಲಿಯುವುದೆಂದರೆ ಅವಕಾಶದ ಜಗತ್ತನ್ನು ತೆರೆಯುವುದು, ಗಣಿತವೂ ಎಲ್ಲಾ ವಿಜ್ಞಾನದ ಆಧಾರವಾಗಿದೆ ಎಂಬುದನ್ನು ಪ್ರಸ್ತುತಪಡಿಸಲಾಗಿದೆ.

ಮೈಸೂರಿನ ದಕ್ಷಿಣ ವಲಯದಲ್ಲಿರುವ 31 ಸರ್ಕಾರಿ ಶಾಲೆಗಳ ಪೈಕಿ, ಗಣಿತ ಲ್ಯಾಬ್ ಹೊಂದಿರುವ ಏಕೈಕ ಶಾಲೆ ಇದಾಗಿದ್ದು, ಶಾಲೆಯ ಗಣಿತ ಶಿಕ್ಷಕ ಕೆ.ಎನ್. ಹರ್ಷ ಅವರ ನೇತೃತ್ವದಲ್ಲಿ ರೂಪುಗೊಂಡಿರುವ ಗಣಿತ ಪ್ರಯೋಗಾಲಯದಲ್ಲಿ ಸಮತಲ, ಲಂಬ, ಮಳೆಮಾಪಕ, ಸಂಖ್ಯಾ ರೇಖೆ, ಛೇದಕ ರೇಖೆ, ತ್ರಿಭುಜದ ವಿಧಗಳು, ಚೌಕದ ವಿಧಗಳು, ಸುತ್ತಳತೆ, ವಿಸ್ತೀರ್ಣ ಸ್ತಂಭಲೇಖ, ಭೂಮಿಯ ಧ್ರುವ ಪ್ರದೇಶ ಚಪ್ಪಟೆ ಏಕೆ, ಪ್ರಕೃತಿಯಲ್ಲಿ ಗಣಿತ, ಪ್ರಾಣಿ ಪಕ್ಷಿಗಳಲ್ಲಿ ಗಣಿತ, ಕಟ್ಟಡದಲ್ಲಿ ಗಣಿತ, ಧಾರ್ಮಿಕತೆಯಲ್ಲಿ ಗಣಿತ, ಹೂವಿನಲ್ಲಿ ಗಣಿತ, ಬಾಹ್ಯಾಕಾಶದಲ್ಲಿ ಗಣಿತ ಇತ್ಯಾದಿಗಳ ಬಗೆಗಿನ 48 ಚಿತ್ರಪಟಗಳು ಆಕರ್ಷಣೀಯವಾಗಿವೆ.


ಈ ಶಾಲೆಯಲ್ಲಿ ಸರ್ಕಾರಿ ಬಾಲಕಿಯರ ಬಾಲ ಮಂದಿರದ ವಿದ್ಯಾರ್ಥಿಗಳು, ಬಿಹಾರದಿಂದ ವಲಸೆ ಬಂದಂತಹ ಮಕ್ಕಳು, ಕೂಲಿಕಾರ್ಮಿಕರ ಮಕ್ಕಳು ಸೇರಿದಂತೆ ವಿಭಿನ್ನ ವರ್ಗದ ಭಾಷಾ ಮಕ್ಕಳು ಬರುತ್ತಿದ್ದು, ಎಲ್ಲಾ ಮಕ್ಕಳು ಉತ್ತಮ ಶಿಕ್ಷಣ ಪಡೆಯಲು ಅನುಕೂಲಕರ ವಾತಾವರಣವನ್ನು ಸೃಷ್ಟಿಸಲಾಗಿದೆ. ವಿದ್ಯಾರ್ಥಿಗಳಿಗೆ ತ್ರಿಭುಜದ ವಿಸ್ತೀರ್ಣ, ಆಯತದ ವಿಸ್ತೀರ್ಣ, ಸಮಾನಾಂತರ ಚತುರ್ಭುಜದ ವಿಸ್ತೀರ್ಣ, ಒಂದು ಮಿಲಿ ಮೀಟರ್ ಚಮಚ ತಯಾರಿಕೆ, ತ್ರಿಭುಜದ ಮೂರು ಕೋನಗಳ ಮೊತ್ತ 180 ಡಿಗ್ರಿ, ಕೋನಗಳ ವಿಧಗಳು, ಫಜಲ್, ವೃತ್ತಾಕಾರದ ಫಜಲ್, ಮ್ಯಾಜಿಕ್ ಎಗ್, ಟ್ಯಾಂಗ್ರಾಮ್, ಬ್ರೋಕನ್ ಹಾರ್ಟ್, ವಿಯೆಟ್ನಾಮೀಸ್ ಸರ್ಕಲ್, ಪೈಥಾಗರಸ್, ಆರ್ಕಿಮೇಡ್ಸ್, ಮಂಗೋಲಿಯನ್ ಫಜಲ್ ತಯಾರಿಕೆ ಕುರಿತು ತಿಳಿಸಿಕೊಡಲಾಗುತ್ತಿದೆ.

ಹಾಗೆಯೇ ಆಹಾರ ಸರಪಳಿ, ಜಲಚಕ್ರ, ಫುಲ್ ಮೂನ್ ಫ್ಲಿಪ್ ಬುಕ್ ತಯಾರಿಕೆ, ಜೀವಕೋಶಗಳ ವಿಭಜನೆ ಫ್ಲಿಪ್‌ಬುಕ್ ತಯಾರಿಕೆ, ಸಂಚಾರದಲ್ಲಿ ಗಣಿತ, ನಮ್ಮ ದೇಹವೇ ಒಂದು ಗಣಿತ, ಸುಲಭ ಮಗ್ಗಿ, ವ್ಯವಕಲನ ಕ್ರಮದಲ್ಲಿ ಮಗ್ಗಿ, ಭಿನ್ನರಾಶಿ ಮಗ್ಗಿ, ದಶಮಾಂಶ ಮಗ್ಗಿ, ಬೀಜಗಣಿತ ಮಗ್ಗಿ, ಗ್ರಾಫ್ ಹಾಳೆಯಲ್ಲಿ ಅಕ್ಷರ ಬರವಣಿಗೆ, ಸುತ್ತಳತೆ ಮತ್ತು ವಿಸ್ತೀರ್ಣ, ಬಹುಭುಜಾಕೃತಿಗಳು ಹಾಗೂ ಗಣಿತದ ಹೇಳಿಕೆಗಳು ಮತ್ತು ಸೂಕ್ತಿಗಳ ಬಗ್ಗೆ ಪ್ರಾಯೋಗಿಕವಾಗಿ ಕಲಿಸಲಾಗುತ್ತಿದೆ.

ಕಡಿಮೆ ಖರ್ಚಿನಲ್ಲಿ ಲ್ಯಾಬ್: ಸ್ವಂತ ಖರ್ಚಿನ ಜೊತೆಗೆ ಹಳೇ ವಿದ್ಯಾರ್ಥಿಗಳ ಸಂಘದ ಪುನೀತ್ ರಾಯಣ್ಣ ಹಾಗೂ ಇಲಾಖೆ ಅಧಿಕಾರಿಗಳ ಸಹಕಾರದಿಂದ ಗಣಿತ ಲ್ಯಾಬ್ ರೂಪುಗೊಂಡಿದೆ. ಪೇಪರ್, ಪ್ಲಾಸ್ಟಿಕ್ ಪದಾರ್ಥಗಳ ಬಳಸಿ ಸುಮಾರು 25 ಸಾವಿರ ರೂ.ಗಳಲ್ಲಿ ಕೆಲ ಪದಾರ್ಥಗಳನ್ನು ಕೊಂಡುಕೊಂಡು ಗಣಿತ ಕಲಿಕಾ ಮಾಡೆಲ್‌ಗಳನ್ನು ಮಾಡಲಾಗಿದೆ. ಮಕ್ಕಳು ಪ್ರಯೋಗಗಳನ್ನು ಸ್ವತಃ ಮಾಡಿ, ನೋಡಿ ಪರಿಣಾಮಕಾರಿಯಾಗಿ ಕಲಿಯಲು ಲ್ಯಾಬ್ ಅನುಕೂಲಕರವಾಗಿದೆ ಎಂದು ಶಾಲೆಯ ಗಣಿತ ಶಿಕ್ಷಕ ಹಾಗೂ ದಕ್ಷಿಣ ವಲಯದ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಎನ್.ಹರ್ಷ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಫೋಟೋ ಫ್ರೇಮ್ ವಿತರಣೆ!: ಭಾರತೀಯ ಗಣಿತಶಾಸ್ತ್ರಜ್ಞರಾದ ಶ್ರೀನಿವಾಸ ರಾಮಾನುಜನ್ ಅವರ ಜನ್ಮದಿನವಾದ ಡಿ.22ರಂದು ರಾಷ್ಟ್ರೀಯ ಗಣಿತ ದಿನವೆಂದು ದೇಶದಾದ್ಯಂತ ಆಚರಣೆ ಮಾಡಲಾಗುತ್ತಿದ್ದು, ಶ್ರೀನಿವಾಸ ರಾಮಾನುಜನ್ ಅವರ ಸಾಧನೆ ಮಾಹಿತಿಯುಳ್ಳ ಅವರ ಫೋಟೋ ಫ್ರೇಮ್‌ಗಳನ್ನು ಕ್ಷೇತ್ರದಲ್ಲಿನ 31 ಸರ್ಕಾರಿ ಶಾಲೆಗಳಿಗೂ ವಿತರಿಸಿದ್ದೇನೆ. ಕುರುಬಾರಹಳ್ಳಿ ಸರ್ಕಾರಿ ಶಾಲೆಯ ಶಿಕ್ಷಕರು ಆಸಕ್ತಿಯಿಂದ ಗಣಿತ ಲ್ಯಾಬ್ ರೂಪಿಸಿ, ಮಕ್ಕಳ ಕಲಿಕೆಗೆ ಪೂರಕವಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಶ್ಲಾಘಿಸಿದರು.











▶ ಕಳೆದ ಒಂದೂವರೆ ವರ್ಷದಿಂದ ಕೆ.ಆರ್.ಕ್ಷೇತ್ರದಲ್ಲಿರುವ ಸರ್ಕಾರಿ ಶಾಲಾ–ಕಾಲೇಜುಗಳ ಅಭಿವೃದ್ಧಿಗೆ ಗಮನ ಹರಿಸಿದ್ದೇನೆ. ಸರ್ಕಾರಿ ಶಾಲೆಗಳಲ್ಲಿ ಉತ್ತಮ ವಾತಾವರಣ ನಿರ್ಮಾಣವಾದರೆ ಬಡ ಕುಟುಂಬದ ಮಕ್ಕಳು ಶಿಕ್ಷಣ ಪಡೆಯಲು ಅನುಕೂಲವಾಗಲಿದೆ. ಸರ್ಕಾರಿ ಶಾಲಾ–ಕಾಲೇಜಿನ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಕುರುಬಾರಹಳ್ಳಿ ಸರ್ಕಾರಿ ಕಾಲೇಜು, ನೂರಡಿ ರಸ್ತೆಯಲ್ಲಿರುವ ಸರ್ಕಾರಿ ಶಾಲಾ–ಕಾಲೇಜಿಗೆ ಕಂಪ್ಯೂಟರ್‌ಗಳನ್ನು ನೀಡುವುದರ ಜೊತೆಗೆ ಈ ವರ್ಷಾಂತ್ಯಕ್ಕೆ ಕ್ಷೇತ್ರದಲ್ಲಿನ ಎಲ್ಲಾ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವ ಗುರಿ ಇಟ್ಟುಕೊಂಡಿದ್ದೇವೆ.

– ಟಿ.ಎಸ್.ಶ್ರೀವತ್ಸ, ಶಾಸಕ, ಕೆ.ಆರ್.ಕ್ಷೇತ್ರ



▶ ಪ್ರಕೃತಿಯಲ್ಲಿನ ಪ್ರತಿಯೊಂದು ಅಂಶದಲ್ಲಿಯೂ ಗಣಿತ ಅಡಗಿದೆ. ಹೂವಿನ ದಳಗಳಿಂದಲೂ ಮಕ್ಕಳಿಗೆ ರೇಖಾಗಣಿತ ಹೇಳಿಕೊಡಬಹುದು. ಮರದ ತೊಗಟೆಯಿಂದ ಮರದ ಆಯುಸ್ಸನ್ನು ಲೆಕ್ಕಾಚಾರ ಮಾಡಬಹುದು. ಗಣಿತವನ್ನು ನಿತ್ಯ ಜೀವನಕ್ಕೆ ತಂದಾಗ ಅದರ ಅನ್ವಯಿಕ ಚೆನ್ನಾಗಿರುತ್ತದೆ. ಗಣಿತ ಬಲ್ಲವನಿಗೆ ಎಲ್ಲಾ ವಿಷಯಗಳು ಸರಳವೇ. ಪಠ್ಯಕ್ರಮಕ್ಕೆ ಅನುಗುಣವಾಗಿ ಪ್ರಯೋಗಾತ್ಮಕ ಹಾಗೂ ಕೌಶಲತೆ ಆಧಾರದ ಮೇಲೆ ಗಣಿತ ಹಾಗೂ ಇನ್ನಿತರೆ ವಿಷಯಗಳನ್ನು ಮಕ್ಕಳಿಗೆ ಹೇಳಿಕೊಡಲಾಗುತ್ತಿದೆ.

–ಕೆ.ಎನ್.ಹರ್ಷ, ಗಣಿತ ಶಿಕ್ಷಕ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುರುಬಾರಹಳ್ಳಿ

▶ 1 ರಿಂದ 7ನೇ ತರಗತಿವರೆಗಿನ ನಮ್ಮ ಶಾಲೆಯಲ್ಲಿ ಒಂದು ಹಂತದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿತ್ತು. ಆದರೆ ಕೆಲ ವರ್ಷಗಳಿಂದ ಮತ್ತೆ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದೆ. ಮಕ್ಕಳ ಪೋಷಕರು, ಕುರುಬಾರಹಳ್ಳಿಯಲ್ಲಿ ನಿವಾಸಿಗಳಲ್ಲಿ ಶಾಲೆಯ ಬಗ್ಗೆ ಒಳ್ಳೆಯ ಅಭಿಪ್ರಾಯವಿದೆ. – ಅಂಬುಜ, ಮುಖ್ಯ ಶಿಕ್ಷಕರು

ಅಲೆಮಾರಿ, ಅರೆ ಅಲೆಮಾರಿಗಳು, ಮಕ್ಕಳ ಶಿಕ್ಷಣಕ್ಕಾಗಿ ರಂಗಾಯಣ ಸ್ಥಾಪನೆಯಾಗಬೇಕು

ರಂಗಾಯಣ ಮಾಜಿ ನಿರ್ದೇಶಕ ಡಾ.ಬಸವಲಿಂಗಯ್ಯ ಸರ್ಕಾರಕ್ಕೆ ಆಗ್ರಹ



'ಡಾ.ಸುಜಾತ ಅಕ್ಕಿ ನಾಟಕೋತ್ಸವ' ಸಮಾರೋಪ ಸಮಾರಂಭದಲ್ಲಿ ರಂಗಾಯಣ ಮಾಜಿ ನಿರ್ದೇಶಕ ಡಾ. ಬಸವಲಿಂಗಯ್ಯ, ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಗೋಪಿನಾಥ್, ನಾಟಕಕಾರರಾದ ಡಾ.ಸುಜಾತ ಅಕ್ಕಿ ಇದ್ದರು.

ಮೈಸೂರು,ಫೆ.10(ಎಸ್‌ಪಿಎನ್)– ಈಗಿರುವ ಆರು ರಂಗಾಯಣಗಳ ಜೊತೆಗೆ ಅಲೆಮಾರಿ, ಅರೆಮಾರಿಗಳ ಕಲೆ ಪ್ರದರ್ಶನಕ್ಕೆ ಹಾಗೂ ಮಕ್ಕಳ ಶಿಕ್ಷಣಕ್ಕಾಗಿ ಮಕ್ಕಳ ರಂಗಾಯಣ ಸೇರಿ ಎರಡು ರಂಗಾಯಣ ಸ್ಥಾಪಿಸಲು ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ರಂಗಾಯಣ ಮಾಜಿ ನಿರ್ದೇಶಕ ಡಾ.ಬಸವಲಿಂಗಯ್ಯ ಸಲಹೆ ನೀಡಿದರು.

ಮೈಸೂರು ಕಲಾಮಂದಿರ ಆವರಣದ ಕಿರುಮಂದಿರದ ಮುಂಭಾಗದಲ್ಲಿ ರಂಗಯಾನ ಟ್ರಸ್ಟ್ ಏರ್ಪಡಿಸಿದ್ದ 'ಡಾ.ಸುಜಾತ ಅಕ್ಕಿ ನಾಟಕೋತ್ಸವ' ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಂಗಾಯಣ ಸಾರ್ವಜನಿಕರ ಆಸ್ತಿ. ರಂಗಯಾನ ಖಾಸಗಿ ಟ್ರಸ್ಟ್, ಇಲ್ಲಿಗೆ ಯಾರಾದರೂ ಕರೆದಾಗ ಮಾತ್ರ ಬರಬಹುದು. ಆದರೆ, ರಂಗಾಯಣಕ್ಕೆ ಯಾವಾಗ ಬೇಕಾದರೂ ನಾನು ಬರಬಹುದು. ಹಾಗಾಗಿ ರಂಗಾಯಣದ ಮೂಲಕ ಸಮಾಜಕ್ಕೆ ಹೇಳಬೇಕಾದ ಪ್ರಜಾಪ್ರಭುತ್ವದ ಸಂದೇಶವನ್ನು ನಾಟಕದ ಮೂಲಕ ತಲುಪಿಸುವಲ್ಲಿ ಅದು ಯಶಸ್ವಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಾಟಕದಲ್ಲಿ ಓರ್ವ ಕಲಾವಿದ 'ನವರಸ'ಗಳನ್ನು ತನ್ನ ಅಭಿನಯದ ಮೂಲಕ ಜನರಿಗೆ ತೋರಿಸಬೇಕು. ಆದರೆ, ಇಲ್ಲಿಯವರೆಗೆ 'ದ್ವೇಷ ಮತ್ತು ಶೃಂಗಾರ' ರಸಗಳನ್ನು ಮಾತ್ರ ಜನರಿಗೆ ಪರಿಚಯಿಸಿದ್ದೇವೆ. ಉಳಿದ ರಸಗಳನ್ನು ಪರಿಚಯಿಸಿಲ್ಲ. ಇಂದು ಸಾಂಸ್ಕೃತಿಕ ಕ್ಷೇತ್ರದಲ್ಲೂ ಜಾತಿವಾದ ಆಕ್ರಮಿಸಿದೆ. ಇದನ್ನು ಮೀರಿದ ರಂಗಭೂಮಿ ಕಟ್ಟಬೇಕಾದುದು ನಮ್ಮೆಲ್ಲರ ಹೊಣೆ ಎಂದರು.

ಪುರಾಣ ಕಥೆಗಳನ್ನೂ ಪಠ್ಯವಾಗಿಸಬಹುದು: ನಮ್ಮ ದೇಶದಲ್ಲಿ ಶಿವನ ಕುರಿತು ಅನೇಕ ಕಥೆಗಳು ಹುಟ್ಟಿಕೊಂಡಿವೆ. ಅದರ ಭಾಗವಾಗಿ 'ಚಾಮಚೆಲುವೆ' ನೋಡಬಹುದು. ಅಲ್ಲದೆ, ಬಿಳಿಗಿರಿ ರಂಗನಾಥ ಸ್ವಾಮಿ ಕುರಿತಾದ 'ಸೋಲಿಗರ ಬಾಲೆ' ನಾಟಕ ಅದ್ಭುತವಾಗಿ ಮೂಡಿಬಂದಿದೆ. ಪುರಾಣದಲ್ಲೂ ಪ್ರಜಾಪ್ರಭುತ್ವಕ್ಕೆ ಹತ್ತಿರವಾದ ಕಥೆಗಳಿದ್ದರೆ ಅದನ್ನು ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಪದವಿವರೆಗಿನ ವಿದ್ಯಾರ್ಥಿಗಳಿಗೆ ಪಠ್ಯವನ್ನಾಗಿ ಇಡಬಹುದು ಎಂದು ಪ್ರತಿಪಾದಿಸಿದರು.

ಡಾ.ಸುಜಾತ ಅಕ್ಕಿ ರಚಿತ ಚಾಮಚೆಲುವೆ ನಾಟಕ ನಂಜನಗೂಡು ನಂಜುಂಡ ಮತ್ತು ಚಾಮುಂಡಿ ಕುರಿತಾದ ಕಥೆ. ಇದರಲ್ಲಿ ಗಂಡ–ಹೆಂಡತಿ ಹಾಗೂ ಸವತಿ ನಡುವಿನ ಕಥೆಯಿದೆ. ಅಲ್ಲದೆ, ದೊಂಬಿದಾಸರ ಕಥೆಗಳಲ್ಲಿ ಶಿವ–ಪಾರ್ವತಿ ಹಾಗೂ ಗಂಗೆಯ ಕಥೆ ಎಲ್ಲರ ಸಂಸಾರದಲ್ಲೂ ಜಗಳವೇ ಆಗಿದೆ. ಹಾಗಾಗಿ ಈ ಕಥೆಗಳಲ್ಲಿ ಶಿವ ನ್ಯಾಯ ಸ್ಥಾನದಲ್ಲಿರುತ್ತಾನೆ. ಗಂಗೆ ಮತ್ತು ಪಾರ್ವತಿ ಹೆಣ್ಣಿನ ಪಾತ್ರದಲ್ಲಿವೆ. ಈ ಕಥೆಗಳು ಸಾಮಾನ್ಯ ಜನರ ಜೀವನದಲ್ಲಿ ಬರುವ ಪಾತ್ರಗಳಾಗಿವೆ. ಇದು ಪ್ರಜಾಪ್ರಭುತ್ವ ಮಾದರಿಯಲ್ಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ಪಠ್ಯವನ್ನಾಗಿ ಪರಿಚಯಿಸುವುದರಿಂದ ಯಾವುದೇ ಸಮಸ್ಯೆ ಇಲ್ಲ ಎಂದರು. ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಮಹಾಕುಂಭ ಮೇಳ ನಡೆಯುತ್ತಿದೆ. ಇಲ್ಲಿಗೆ ನಿತ್ಯ ಕೋಟ್ಯಾಂತರ ಜನರು ಹೋಗಿ ನದಿಯಲ್ಲಿ ಪುಣ್ಯಸ್ನಾನ ಮಾಡುತ್ತಿದ್ದಾರೆ. ಅಂದರೆ, ನಮ್ಮ ಜನರೆಲ್ಲಾ ಅಷ್ಟೊಂದು ಪಾಪ ಮಾಡಿದ್ದಾರಾ. ಇಂತಹ ಅನೇಕ ಪ್ರಶ್ನೆಗಳು ಸಾಮಾನ್ಯರಲ್ಲಿ ಮೂಡುತ್ತವೆ. ಮೈಸೂರು ಜಿಲ್ಲೆ ತಿ.ನರಸೀಪುರದಲ್ಲೂ ರಾಜ್ಯ ಸರ್ಕಾರ ಕೋಟ್ಯಾಂತರ ರೂ.ವೆಚ್ಚದಲ್ಲಿ ಕುಂಭಮೇಳ ಆಯೋಜಿಸಿದೆ. ಇದು ತಪ್ಪಲ್ಲ ಎಂದರು.

ಮಹಿಳೆಯರಿಗೆ ಸ್ವಾತಂತ್ರ್ಯ ನೀಡಿದ್ದು, ಡಾ.ಬಿ.ಆರ್. ಅಂಬೇಡ್ಕರ್. ಪ್ರಜಾಪ್ರಭುತ್ವದಲ್ಲಿ ಯಾರು ಮುಖ್ಯ ಎಂಬ ಕುತೂಹಲವಿದೆ. ಮನಸ್ಸಿನಲ್ಲಿ ಇರುವ ಹುಳುಕು ಸರಿಪಡಿಸಬೇಕಾದರೆ, ನಾಟಕ, ಚಿತ್ರಕಲೆ, ಶಿಲ್ಪಕಲೆ ಸೇರಿದಂತೆ ಇವೆಲ್ಲವೂ ಮುಖ್ಯ. ನಮ್ಮ ಸಂವಿಧಾನ ವೈಚಾರಿಕತೆಯನ್ನು ಹೊಂದಿರುವುದು ಹೆಮ್ಮೆಯ ವಿಷಯ. ನನಗೆ ರಂಗಭೂಮಿಯಲ್ಲಿ ಹಲವು ವರ್ಷಗಳಿಂದ ದುಡಿದ ಪರಿಣಾಮ ಡಾಕ್ಟರೇಟ್ ದೊರಕಿದೆ. ರಂಗಭೂಮಿ ಜನರ ಮನಸ್ಸಿಗೆ ಖುಷಿ ನೀಡುವ ಚಿಕಿತ್ಸೆ ಸಾಧನವೂ ಹೌದು ಎಂದರು. ಈ ವೇಳೆ ವಿವಿಧ ನಾಟಕ ಪ್ರದರ್ಶನಗೊಂಡು ಪ್ರೇಕ್ಷಕರ ಮನಗೆದ್ದವು. ವೇದಿಕೆಯಲ್ಲಿ ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಗೋಪಿನಾಥ್, ನಾಟಕಕಾರರಾದ ಡಾ.ಸುಜಾತ ಅಕ್ಕಿ ಸೇರಿದಂತೆ ಇತರರಿದ್ದರು.

ಸಜ್ಜನರಾಗಿ ಬಾಳುವುದಕ್ಕೆ ನಾಟಕಗಳು ಸಹಕಾರಿ...

ಮೈಸೂರು, ಫೆ10(ಎಸ್‌ಪಿಎನ್)–ಒಬ್ಬ ವ್ಯಕ್ತಿಯ ಹೆಸರಿನಲ್ಲಿ ನಾಟಕೋತ್ಸವ ನಡೆಯುವುದು ಸಾಮಾನ್ಯ. ಆದರೆ, ಓರ್ವ ಮಹಿಳೆ ಹೆಸರಿನಲ್ಲಿ ನಾಟಕೋತ್ಸವ ನಡೆಯುತ್ತಿರುವುದು ಅಭಿಮಾನ ಹಾಗೂ ಹೆಮ್ಮೆಯ ವಿಚಾರ ಎಂದು ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ಜನಪದರು ಎಂದಿಗೂ ಜಾನಪದಕ್ಕೆ ಬೌದ್ಧಿಕ ಹಕ್ಕು ಸಾಮ್ಯತೆಗಾಗಿ ಹೊಡೆದಾಡಿದವರಲ್ಲ. ವಚನ ಸಾಹಿತ್ಯ, ದಾಸ ಸಾಹಿತ್ಯಕ್ಕೆ ಅಂಕಿತವಿದೆ. ಆದರೆ, ಜಾನಪದಕ್ಕೆ ಎಂದಿಗೂ ಅಂಕಿತ ಹಾಕಿಲ್ಲ. ಜಾನಪದ ಕಥೆಗಳಿಗೆ ಹೊಸಹೊಸ ಸಂಗತಿಗಳನ್ನು ಸೇರಿಸಿಕೊಂಡು ಹೋಗಬೇಕು. ಅದು ಎಂದಿಗೂ ಸ್ಥಾಯಿಯಾಗಿ ನಿಲ್ಲುವುದಿಲ್ಲ ಎಂದರು. ನಾಟಕವು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುವುದರ ಜೊತೆಗೆ ಸಮಾಜದಲ್ಲಿ ಸಜ್ಜನರಾಗಿ ಬೆಳೆಯುವುದಕ್ಕೆ ಸಹಕಾರ ನೀಡುತ್ತದೆ. ಯಾವುದೇ ಪಾತ್ರ ಆಗಲಿ ಅದು ರಂಗಭೂಮಿಯಲ್ಲಿ ನೋಡುವುದಕ್ಕೂ, ಸಿನಿಮಾದಲ್ಲಿ ನೋಡುವುದಕ್ಕೂ ಬಹಳ ವ್ಯತ್ಯಾಸವಿರುತ್ತದೆ ಎಂದು ಹೇಳಿದರು.

ದೇಶ - ವಿದೇಶ

ಬಾಂಗ್ಲಾದಲ್ಲಿ ಶುರುವಾಯ್ತು 'ಆಪರೇಷನ್ ಡೆವಿಲ್ ಹಂಟ್'



ಢಾಕಾ: ಬಾಂಗ್ಲಾದೇಶದಲ್ಲಿ ಗುಂಪು ಹಲ್ಲೆ ಮತ್ತು ಸಾರ್ವಜನಿಕ ಆಸ್ತಿ ಧ್ವಂಸ ಪ್ರಕರಣಗಳನ್ನು ತಡೆಯಲು, 'ಆಪರೇಷನ್ ಡೆವಿಲ್ ಹಂಟ್' ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ಕಳೆದ ಶನಿವಾರ(ಫೆ8) ಆರಂಭವಾದ ಈ ಕಾರ್ಯಾಚರಣೆಯಲ್ಲಿ ಇದುವರೆಗೂ ಸುಮಾರು 1,308 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ನೊಬೆಲ್ ಪ್ರಶಸ್ತಿ ವಿಜೇತ ಮುಹಮ್ಮದ್ ಯೂನುಸ್ ನೇತೃತ್ವದ ಹಂಗಾಮಿ ಸರ್ಕಾರವು ದೇಶದಲ್ಲಿ ಶಾಂತಿ–ಸುವ್ಯವಸ್ಥೆಯನ್ನು ಖಾತರಿಪಡಿಸಿಕೊಳ್ಳಲು 'ಆಪರೇಷನ್ ಡೆವಿಲ್ ಹಂಟ್' ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ. ಗಾಜಿಪುರದಲ್ಲಿ ವಿದ್ಯಾರ್ಥಿ ಕಾರ್ಯಕರ್ತರ ಮೇಲೆ ನಡೆದ ಹಲ್ಲೆಗೆ ಪ್ರತೀಕಾರವಾಗಿ ಹಂಗಾಮಿ ಸರ್ಕಾರವು ಈ ಕ್ರಮ ಕೈಗೊಂಡಿದೆ. ಬಾಂಗ್ಲಾದೇಶದ ಸೈನ್ಯ, ಪೊಲೀಸ್ ಮತ್ತು ವಿಶೇಷ ರಕ್ಷಣಾ ಪಡೆಗಳು ಈ 'ಆಪರೇಷನ್ ಡೆವಿಲ್ ಹಂಟ್' ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದು, ಪ್ರಮುಖವಾಗಿ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಮತ್ತು ಅದರ ಸಹವರ್ತಿ ಸಂಘಟನೆಗಳ ಸದಸ್ಯರನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಮೂಲಗಳು ಖಚಿತಪಡಿಸಿವೆ.

ಕೋತಿ ಕಾಟಕ್ಕೆ ಕತ್ತಲಲ್ಲಿ ಮುಳುಗಿದ ಶ್ರೀಲಂಕಾ



ಕೊಲಂಬೊ: ವಿದ್ಯುತ್ ಉಪ ಕೇಂದ್ರವೊಂದಕ್ಕೆ ಆಗಮಿಸಿದ ಕೋತಿಯೊಂದು ಎಸಗಿರುವ ಕಿತಾಪತಿಯಿಂದಾಗಿ ಇಡೀ ಶ್ರೀಲಂಕಾ ರಾಷ್ಟ್ರವೇ ಹಲವು ಘಂಟೆಗಳ ಕಾಲ ಕತ್ತಲಲ್ಲಿ ಮುಳುಗಬೇಕಾದ ಪರಿಸ್ಥಿತಿ ಭಾನುವಾರ ಘಟಿಸಿದೆ.

ಶ್ರೀಲಂಕಾದ ಪಣದುರದಲ್ಲಿರುವ ವಿದ್ಯುತ್ ಗ್ರಿಡ್‌ನ ಸಬ್‌ಸ್ಟೇಷನ್‌ನಲ್ಲಿ ಕೋತಿಯೊಂದು ಗ್ರಿಡ್‌ಗೆ ಸಿಲುಕಿತ್ತು. ಪರಿಣಾಮ ವಿದ್ಯುತ್ ಸರಬರಾಜು ಸ್ಥಗಿತವಾಯಿತು. ವಿದ್ಯುತ್ ವ್ಯತ್ಯಯದ ಒಂದು ಗಂಟೆಯ ನಂತರ ರಾಜ್ಯ ವಿದ್ಯುತ್ ಘಟಕವು ರಾಷ್ಟ್ರೀಯ ಆಸ್ಪತ್ರೆ ಮತ್ತು ಇತರ ಪ್ರಮುಖ ಘಟಕಗಳಲ್ಲಿ ವಿದ್ಯುತ್ ಅನ್ನು ಪುನಃಸ್ಥಾಪಿಸಿದೆ. ಸ್ಥಳೀಯ ಕಾಲಮಾನ ಬೆಳಗ್ಗೆ 11.30ರ ವೇಳೆಗೆ ಈ ಘಟನೆ ನಡೆದಿದ್ದು, ಜನತೆಯು ಪರದಾಡುವಂತಾಯಿತು. ತಕ್ಷಣವೇ ವಿದ್ಯುತ್ ಇಲಾಖೆಯ ಎಂಜಿನಿಯರ್‌ಗಳು ಮತ್ತು ಸಹಾಯಕರು ವಿದ್ಯುತ್ ಮಾರ್ಗಗಳನ್ನು ಸರಿಪಡಿಸುವ ಕಾರ್ಯ ಕೈಗೊಂಡಿದ್ದು, ಆಸ್ಪತ್ರೆಗಳು ಸೇರಿದಂತೆ ತುರ್ತು ಅಗತ್ಯವಿರುವ ಇತರೆ ಕೇಂದ್ರಗಳಿಗೆ ವಿದ್ಯುತ್ ವ್ಯವಸ್ಥೆ ಕಲ್ಪಿಸಲಾಗಿದೆ. ಆದಾಗ್ಯೂ ಕೆಲ ಭಾಗಗಳಿಗೆ ವಿದ್ಯುತ್ ಸಂಪರ್ಕ ಇನ್ನೂ ದೊರೆಯಬೇಕಾಗಿದ್ದು, ದುರಸ್ತಿ ಕಾರ್ಯ ಭರದಿಂದ ಸಾಗಿದೆ ಎಂದು ಮೂಲಗಳು ತಿಳಿಸಿವೆ.

ಮಹಾಮಂಡಲೇಶ್ವರ ಸ್ಥಾನಕ್ಕೆ ಬಾಲಿವುಡ್ ನಟಿ ಮಮತಾ ಕುಲಕರ್ಣಿ ರಾಜೀನಾಮೆ



ಮುಂಬೈ: ಇತ್ತೀಚಿಗೆ ಬಾಲಿವುಡ್‌ನ ಗ್ಲಾಮರ್ ಲೋಕಕ್ಕೆ ವಿದಾಯ ಹೇಳಿ ಸನ್ಯಾಸ್ಯತ್ವ ಸ್ವೀಕರಿಸಿದ್ದ ಮಮತಾ ಕುಲಕರ್ಣಿ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳಕ್ಕೆ ತೆರಳಿ ಕಿನ್ನಾರ ಅಖಾಡದ ಮಹಾ ಮಂಡಲೇಶ್ವರ ಆದರು.

ಇನ್‌ಸ್ಟಾಗ್ರಾಮ್‌ನಲ್ಲಿ ವಿಡಿಯೋ ಹಂಚಿಕೊಂಡಿರುವ ಮಮತಾ ಕುಲಕರ್ಣಿ, ಮಮತಾ ನಂದಗಿರಿ ಆದ ನಾನು, ಮಹಾಮಂಡಲೇಶ್ವರ ಹುದ್ದೆಗೆ ರಾಜೀನಾಮೆ ನೀಡಿದ್ದೇನೆ. ನನ್ನನ್ನು ಮಹಾಮಂಡಲೇಶ್ವರನಾಗಿ ನೇಮಿಸಿದ ನಂತರ ಆಕ್ರೋಶ ವ್ಯಕ್ತವಾಗುತ್ತಿದೆ. 25 ವರ್ಷಗಳ ಹಿಂದೆ ಬಾಲಿವುಡ್ ತೊರೆದು ಎಲ್ಲದರಿಂದ ದೂರ ಉಳಿದಿದ್ದೆ. ನಾನು ಮಾಡುವ ಪ್ರತಿಯೊಂದಕ್ಕೂ ಜನರು ಹಲವಾರು ಪ್ರತಿಕ್ರಿಯೆ ನೀಡಿದ್ದಾರೆ. ನನ್ನನ್ನು ಮಹಾಮಂಡಲೇಶ್ವರರಾಗಿ ನೇಮಕಗೊಂಡಿದ್ದಕ್ಕೆ ಬಹಳಷ್ಟು ಮಂದಿಗೆ ತೊಂದರೆ ಆಗಿರುವುದನ್ನು ಗಮನಿಸಿದ್ದೇನೆ. ನಾನು ಯಾವುದೇ ಕೈಲಾಸ ಅಥವಾ ಮಾನಸ ಸರೋವರಕ್ಕೆ ಹೋಗಬೇಕಾಗಿಲ್ಲ. ಕಳೆದ 25 ವರ್ಷಗಳ ತಪಸ್ಸಿನಿಂದ ನನ್ನ ಮುಂದೆ ಬ್ರಹ್ಮಾಂಡವಿದೆ ಎಂದಿದ್ದಾರೆ. 1990ರ ದಶಕದ ಪ್ರಸಿದ್ಧ ಬಾಲಿವುಡ್ ನಟಿ ಮಮತಾ, 2000ರ ದಶಕದ ಆರಂಭದಲ್ಲಿ ಚಿತ್ರೋದ್ಯಮದಿಂದ ದೂರವಿರಲು ನಿರ್ಧರಿಸಿದ್ದರು.

ಡ್ಯಾನ್ಸ್ ಮಾಡುತ್ತಿದ್ದ ಯುವತಿ ಹೃದಯಾಘಾತದಿಂದ ಸಾವು



ಭೋಪಾಲ್: ಮಧ್ಯಪ್ರದೇಶ ವಿದಿಶಾದಲ್ಲಿ ಸಹೋದರಿಯ ವಿವಾಹ ಸಮಾರಂಭದಲ್ಲಿ ವೇದಿಕೆ ಮೇಲೆ ನೃತ್ಯ ಮಾಡುವಾಗ ಹೃದಯಾಘಾತಕ್ಕೆ ಒಳಗಾಗಿ 23 ವರ್ಷದ ಯುವತಿ ಪರಿಣಿತಾ ಜೈನ್ ಕುಸಿದು ಸಾವನ್ನಪ್ಪಿದ್ದಾರೆ. ಪರಿಣಿತಾ ಜೈನ್ ಇಂದೋರ್ ನಿವಾಸಿಯಾಗಿದ್ದು, ಆಕೆ ಎಂಬಿಎ ಪದವಿ ವ್ಯಾಸಂಗ ಮಾಡುತ್ತಿದ್ದರು ಮತ್ತು ಆಕೆಯ ಸಹೋದರಿಯ ಮದುವೆಗಾಗಿ ವಿದಿಶಾಗೆ ಆಗಮಿಸಿದ್ದರು ಎನ್ನಲಾಗಿದೆ. ಯುವತಿಯು ಆಶಾ ಭೋಸ್ಲೆ ಹಾಗೂ ಸೋನು ನಿಗಮ್ ಅವರು ಹಾಡಿರುವ ಶರಾರಾ ಶರಾರಾ ಎಂಬ ಹಿಂದಿ ಗೀತೆಗೆ ಡ್ಯಾನ್ಸ್ ಮಾಡುವಾಗ ಆಕೆಗೆ ಹೃದಯಾಘಾತವಾಗಿದ್ದು, ಕೂಡಲೇ ವೇದಿಕೆ ಮೇಲೆಯೇ ಕುಸಿದು ಸಾವನ್ನಪ್ಪಿದ್ದಾರೆ. ಈ ಕುರಿತ ವಿಡಿಯೋ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಯುವತಿ ವೇದಿಕೆ ಮೇಲೆ ಕುಸಿಯುತ್ತಿದ್ದಂತೆಯೇ ಅಲ್ಲಿದ್ದ ಸಂಬಂಧಿಕರು ಆಕೆಗೆ ಸಿಪಿಆರ್ ನೀಡಿದ್ದು, ಆಗಲೂ ಆಕೆ ಎಚ್ಚರಗೊಳ್ಳದ ಕಾರಣ ಕೂಡಲೇ ಆಕೆಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ಯುವತಿಯ ಪ್ರಾಣ ವೇದಿಕೆಯಲ್ಲಿ ಹೃದಯಾಘಾತವಾಗಿ ಬಿದ್ದಾಗಲೇ ಸಾವಾಗಿದೆ ಎಂದು ವೈದ್ಯರು ಖಚಿತಪಡಿಸಿದ್ದಾರೆ.

ಅಮೆರಿಕಾದಲ್ಲಿ ಸ್ಟೀಲ್, ಅಲ್ಯೂಮಿನಿಯಂ ಆಮದಿನ ಮೇಲೆ ಶೇ.25ರಷ್ಟು ಸುಂಕ



ವಾಷಿಂಗ್ಟನ್: ಜಾಗತಿಕ ವಾಣಿಜ್ಯ ಯುದ್ಧವನ್ನು ಆರಂಭಿಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ವ್ಯಾಪಾರ ನೀತಿಯಲ್ಲಿ ಮತ್ತೊಂದು ದೊಡ್ಡ ಬದಲಾವಣೆ ತಂದಿದ್ದಾರೆ. ಎಲ್ಲಾ ಉಕ್ಕು ಮತ್ತು ಅಲ್ಯೂಮಿನಿಯಂ ಆಮದುಗಳ ಮೇಲೆ ಶೇ.25ರಷ್ಟು ಸುಂಕ ವಿಧಿಸುವುದಾಗಿ ಘೋಷಿಸಿದ್ದಾರೆ. ನಿನ್ನೆ ನ್ಯೂ ಓರ್ಲಿಯನ್ಸ್‌ನಲ್ಲಿ ಮಾತನಾಡಿದ ಅವರು, ಉಕ್ಕು ಮತ್ತು ಅಲ್ಯೂಮಿನಿಯಂ ಮೇಲಿನ ನೂತನ ಸುಂಕ ನೀತಿ ಮಂಗಳವಾರದಿಂದ ಜಾರಿಗೆ ಬರಲಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ಯಾವ ದೇಶಗಳನ್ನು ಗುರಿಯಾಗಿಸಿಕೊಂಡು ಈ ಹೆಚ್ಚುವರಿ ಸುಂಕ ವಿಧಿಸಲಾಗುವುದು ಎಂಬುದನ್ನು ಡೊನಾಲ್ಡ್ ಟ್ರಂಪ್ ಸ್ಪಷ್ಟಪಡಿಸಿಲ್ಲ. ಇತರ ದೇಶಗಳು ವಿಧಿಸುವ ಸುಂಕ ದರಗಳಿಗೆ ಪ್ರತಿಯಾಗಿ ಅಮೆರಿಕ ಕೂಡ ಅದೇ ದರದ ಸುಂಕ ವಿಧಿಸುತ್ತದೆ. ಈ ನೀತಿಯಲ್ಲಿ ಅಮೆರಿಕ ಯಾವುದೇ ರಾಜಿಗೆ ಸಿದ್ಧವಿಲ್ಲ ಎಂದು ಅಮೆರಿಕ ಅಧ್ಯಕ್ಷರು ಘೋಷಿಸಿದ್ದಾರೆ. ಅವರು ನಮಗೆ ಸುಂಕ ವಿಧಿಸಿದರೆ, ನಾವು ಅವರಿಗೆ ಸುಂಕ ವಿಧಿಸುತ್ತೇವೆ ಎಂದು ಟ್ರಂಪ್ ಮಾರ್ಮಿಕವಾಗಿ ಹೇಳಿರುವುದು ಗಮನ ಸೆಳೆದಿದೆ.ಅಧಿಕೃತ ಮಾಹಿತಿಯ ಪ್ರಕಾರ, ಕೆನಡಾ, ಬ್ರೆಜಿಲ್ ಮತ್ತು ಮೆಕ್ಸಿಕೊ ದೇಶಗಳು ಅಮೆರಿಕಕ್ಕೆ ಉಕ್ಕನ್ನು ರಫ್ತು ಮಾಡುತ್ತವೆ. ಇದರ ನಂತರ ದಕ್ಷಿಣ ಕೊರಿಯಾ ಮತ್ತು ವಿಯೆಟ್ನಾಂ ದೇಶಗಳಿವೆ.

ಅಂಬೇಡ್ಕರ್ ಭವನವನ್ನು ಕದಸಂಸ ಮಡಿಕೇರಿ ಶಾಖೆಗೆ ನೀಡುವಂತೆ ಆಗ್ರಹಿಸಿ

ದಲಿತ ಪರ ಸಂಘಟನೆ ಕಾರ್ಯಕರ್ತರ ಧರಣಿ



ಮಡಿಕೇರಿ ಅಂಬೇಡ್ಕರ್ ಭವನ ಎದುರು ವಿವಿಧ ದಲಿತ ಪರ ಸಂಘಟನೆ ಕಾರ್ಯಕರ್ತರು ಧರಣಿ ನಡೆಸಿದರು.

ಮಡಿಕೇರಿ, ಫೆ.10–ಜಿಲ್ಲಾ ಕೇಂದ್ರ ಡಾ. ಬಿ.ಆರ್.ಅಂಬೇಡ್ಕರ್ ಭವನ ಕೆಲವೇ ಕೆಲವು ಮಂದಿಯ ಹಿಡಿತದಲ್ಲಿದ್ದು, ಅದನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮಡಿಕೇರಿ ಶಾಖೆಗೆ ನೀಡುವಂತೆ ಆಗ್ರಹಿಸಿ ವಿವಿಧ ದಲಿತಪರ ಸಂಘಟನೆ ಕಾರ್ಯಕರ್ತರು ನಗರದ ಅಂಬೇಡ್ಕರ್ ಭವನ ಎದುರು ಸೋಮವಾರ ಧರಣಿ ನಡೆಸಿದರು.

ಅಂಬೇಡ್ಕರ್ ಭವನ ಉಳಿಸಿ ಹೋರಾಟ ಸಮಿತಿ ಅಧ್ಯಕ್ಷ ಹೆಚ್.ಎಲ್.ದಿವಾಕರ್ ನೇತೃತ್ವದಲ್ಲಿ ಜಿಲ್ಲೆಯ ವಿವಿಧೆಡೆಗಳಿಂದ ಆಗಮಿಸಿದ್ದ ದಲಿತ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ಧರಣಿ ನಡೆಸಿ, ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಸಮಿತಿ ಅಧ್ಯಕ್ಷ ಹೆಚ್.ಎಲ್.ದಿವಾಕರ್ ಮಾತನಾಡಿ, ದಲಿತ ಸಂಘರ್ಷ ಸಮಿತಿ 1985ರಿಂದಲೇ ಅಂಬೇಡ್ಕರ್ ಭವನಕ್ಕಾಗಿ ನಡೆಸಿದ ಹೋರಾಟದ ಹಿನ್ನೆಲೆ 1991ರಲ್ಲಿ ಸರ್ಕಾರ ಭವನಕ್ಕಾಗಿ ಸುದರ್ಶನ ವೃತ್ತದ ಬಳಿ ಜಾಗ ಮಂಜೂರು ಮಾಡಿಕೊಟ್ಟಿತು. ಆ ಸಂದರ್ಭ ಭವನ ನಿರ್ಮಾಣಕ್ಕಾಗಿ ಡಾ. ನಾಗರಾಜ್ ಅಧ್ಯಕ್ಷರಾಗಿದ್ದ ಸಮಿತಿಯೊಂದನ್ನು ರಚಿಸಿಕೊಳ್ಳಲಾಯಿತು. ಆ ಸಮಿತಿಯಲ್ಲಿ ಜಿಲ್ಲೆಯ ದಲಿತ ಸಂಘಟನೆಗಳ ಪ್ರಮುಖರು ಇದ್ದರೆಂದು ಮಾಹಿತಿ ನೀಡಿದರು. ಆ ಹಂತದಲ್ಲಿ ದಾನಿಗಳ ಸಹಕಾರ, ಲಾಟರಿ ಮೂಲಕ ಹಣ ಸಂಗ್ರಹಿಸಿ ಭವನ ನಿರ್ಮಿಸಲಾಗಿತ್ತು ಎಂದರು.

ನಂತರ ಸಮಿತಿ ಪದಾಧಿಕಾರಿಗಳು ಬದಲಾದರಲ್ಲದೆ, ದಿನ ಕಳೆಯುತ್ತಿದ್ದಂತೆ ಸಮಿತಿಯಲ್ಲಿದ್ದ ದಸಂಸ ಪ್ರಮುಖರನ್ನು ತೆಗೆಯುವ ಕಾರ್ಯ ನಡೆಯುತ್ತಾ ಬಂದು, ಪ್ರಸ್ತುತ ಸಮಿತಿ ಕೆಲವೇ ಕೆಲವು ಮಂದಿಯ ಹಿಡಿತದಲ್ಲಿದೆ. ಇದರಿಂದ ದಲಿತ ಸಮೂಹಕ್ಕೆ ಅನುಕೂಲಕ್ಕೆಂದು ನಿರ್ಮಿಸಿದ ಭವನ ಕೆಲವೇ ಮಂದಿಗೆ ಸೀಮಿತವಾಗಿದೆ. ಈ ಹಿನ್ನೆಲೆ ಅಂಬೇಡ್ಕರ್ ಭವನವನ್ನು ಮರಳಿ ದಲಿತ ಸಂಘರ್ಷ ಸಮಿತಿ ಮಡಿಕೇರಿ ಶಾಖೆಗೆ ನೀಡಬೇಕೆಂದು ಒತ್ತಾಯಿಸಿದರು.

ಸಿಪಿಐಎಂಎಲ್ ಪಕ್ಷದ ಪ್ರಮುಖ ಡಿ.ಎಸ್.ನಿರ್ವಾಣಪ್ಪ ಮಾತನಾಡಿ, ದಲಿತರ ಪ್ರಯೋಜನಕ್ಕೆಂದು ನಿರ್ಮಿಸಲ್ಪಟ್ಟ ಅಂಬೇಡ್ಕರ್ ಭವನವನ್ನು ಕೆಲವೇ ವ್ಯಕ್ತಿಗಳಿಗೆ ಸೀಮಿತವಾಗಬಾರದು. ಇದರ ಪ್ರಯೋಜನ ಎಲ್ಲಾ ದಲಿತರಿಗೆ ದೊರಕಬೇಕೆನ್ನುವ ಕಾರಣದಿಂದ ಹೋರಾಟ ನಡೆಸಲಾಗುತ್ತಿದ್ದು, ಭವನವನ್ನು ಪಡೆದೇ ತೀರುವುದಾಗಿ ಎಚ್ಚರಿದರು.

ಬಳಿಕ ಜಿಲ್ಲಾಡಳಿತಕ್ಕೆ ಅಂಬೇಡ್ಕರ್ ಭವನ ಉಳಿಸಿ ಹೋರಾಟ ಸಮಿತಿಯಿಂದ ಮನವಿ ಸಲ್ಲಿಸಲಾಯಿತು. ಧರಣಿಯಲ್ಲಿ ಬಿಎಸ್‌ಪಿ ಜಿಲ್ಲಾಧ್ಯಕ್ಷ ದಿವಿನ್, ದಲಿತ ಪರ ಸಂಘಟನಗಳ ಹೋರಾಟ ಸಮಿತಿ ಉಪಾಧ್ಯಕ್ಷ ಡಿ.ಜೆ.ಈರಪ್ಪ, ಖಜಾಂಚಿ ಹೆಚ್.ಈ. ದೇವರಾಜು, ನಿರ್ದೇಶಕರಾದ ಹೆಚ್.ಎಲ್.ಕುಮಾರ್, ದೀಪಕ್, ಟಿ.ಎನ್. ಗೋವಿಂದಪ್ಪ, ಹೆಚ್.ಎಂ.ಸೋಮಪ್ಪ ಜಯಪ್ಪ ಹಾನಗಲ್, ಗಾಯತ್ರಿ ನರಸಿಂಹನ್, ಮೋಹನ್ ಮೌರ್ಯ, ಹೆಚ್.ಎಸ್.ಪ್ರೇಂ ಕುಮಾರ್, ಹೆಚ್.ಸಿ.ಸತೀಶ್, ಟಿ.ಈ. ಸುರೇಶ್, ಸಿಂಗಿ ಸತೀಶ್ ಮತ್ತಿತರರು ಭಾಗವಹಿಸಿದ್ದರು.

ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ

ಗ್ರಾಮ ಆಡಳಿತಾಧಿಕಾರಿಗಳ ಪ್ರತಿಭಟನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಗ್ರಾಮ ಆಡಳಿತಾಧಿಕಾರಿಗಳು ಹಾಗೂ ಸಹಾಯಕರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಫೆ.10–ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಕೊಡಗು ಜಿಲ್ಲಾ ಘಟಕದ ನೇತೃತ್ವದಲ್ಲಿ ಗ್ರಾಮ ಆಡಳಿತಾಧಿಕಾರಿಗಳು ಹಾಗೂ ಸಹಾಯಕರು ನಗರದಲ್ಲಿ ಸೋಮವಾರ 2ನೇ ಹಂತದ ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ಪ್ರತಿಭಟನಾಕಾರರು, ಇಲಾಖೆಯಿಂದ ಅಭಿವೃದ್ಧಿಪಡಿಸಿರುವ 17 ಅಧಿಕ ತಂತ್ರಾಂಶಗಳ ಮೊಬೈಲ್, ಲ್ಯಾಪ್‌ಟಾಪ್, ಇಂಟರ್ನೆಟ್ ಹಾಗೂ ಕಾರ್ಯ ನಿರ್ವಹಣೆಗೆ ಅಗತ್ಯವಿರುವ ಸೌಲಭ್ಯ ನೀಡಬೇಕು. ಇವುಗಳನ್ನು ಸಮರ್ಪಕವಾಗಿ ನೀಡದೆ ಕರ್ತವ್ಯದ ಮೇಲೆ ಒತ್ತಡ ಹೇರುತ್ತಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೂಲ ಸೌಲಭ್ಯ ನೀಡಬೇಕು, ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ಗ್ರಾಮ ಸಹಾಯಕರಿಗೆ ಸೇವಾ ಭದ್ರತೆ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು. ಸರ್ಕಾರ ಬೇಡಿಕೆಗಳಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸದ ಕಾರಣ ಕರ್ತವ್ಯ ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ ಮುಂದುವರಿಸುವುದಾಗಿ ತಿಳಿಸಿದರು.

ಬೇಡಿಕೆಗಳು: ಗ್ರಾಮ ಸಹಾಯಕರಿಗೆ 27 ಸಾವಿರ ರೂ. ಕನಿಷ್ಠ ವೇತನ ನೀಡಬೇಕು, ವರ್ಕ್‌ಚಾರ್ಟ್ ನಿಗದಿಪಡಿಸಬೇಕು, ನಿವೃತ್ತಿ ಹೊಂದಿದ, ಹೊಂದುತ್ತಿರುವ ಗ್ರಾಮ ಸಹಕಾಯಕರಿಗೆ 10 ಲಕ್ಷ ರೂ. ಇಡಿಗಂಟು ಹಾಗೂ 15 ಸಾವಿರ ನಿವೃತ್ತಿ ವೇತನ ನೀಡಬೇಕು. ಇಎಸ್, ಪಿಎಫ್ ಹಾಗೂ ಭವಿಷ್ಯ ನಿಧಿ ಸೌಲಭ್ಯ ನೀಡಬೇಕು. ಮಹಿಳಾ ಗ್ರಾಮ ಸಹಾಯಕರಿಗೆ ಹೆರಿಗೆ ರಜೆ ನೀಡಬೇಕು. ಚುನಾವಣೆ ಭತ್ಯೆ ನೀಡಬೇಕು. ಎನ್‌ಪಿಎಸ್ ಸೌಲಭ್ಯ ಒದಗಿಸಬೇಕು ಎಂದು ಬೇಡಿಕೆ ಮುಂದಿಟ್ಟಿದ್ದಾರೆ.

ಕರಿಮೆಣಸು ವ್ಯಾಪಾರಿಯಿಂದ ಲಂಚ

ಎಪಿಎಂಸಿ ಕಾರ್ಯದರ್ಶಿ ಲೋಕಾ ಬಲೆಗೆ



ಕೆ.ಸಿ.ಸಂದೇಶ

ಮಡಿಕೇರಿ, ಫೆ.10–ಕರಿಮೆಣಸು ಸಾಗಣೆ ಲಾರಿ ಸಂಚಾರಕ್ಕೆ ಹಣದ ಬೇಡಿಕೆ ಇಟ್ಟ ಆರೋಪದಲ್ಲಿ ಕುಶಾಲನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಕೆ.ಸಿ.ಸಂದೇಶ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ತಿಂಗಳಿಗೆ 60 ಸಾವಿರ ಮಾಮೂಲಿ ನೀಡುವಂತೆ ವ್ಯಾಪಾರಿಗೆ ಒತ್ತಡ

ವಿರಾಜಪೇಟೆಯ ಕರಿಮೆಣಸು ವ್ಯಾಪಾರಿ ಸಾತ್ವಿಕ್ ಎಂಬುವವರ ಕರಿಮೆಣಸು ಸಾಗಿಸುತ್ತಿದ್ದ ವಾಹನವನ್ನು ಕೆ.ಸಿ. ಸಂದೇಶ ಅವರು ಜ.31ರಂದು ತಪಾಸಣೆ ನಡೆಸಿ, ಕರಿಮೆಣಸಿಗೆ ಪ್ರತಿ ಕೆಜಿಗೆ 600 ರೂ. ಬದಲು 300 ರೂ. ನಮೂದಿಸಲಾಗಿದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗಿದೆ ಎಂದು ದಂಡ ವಿಧಿಸಿದ್ದರು.

ನಂತರ ಸಾತ್ವಿಕ್ ಅವರನ್ನು ಕರೆಸಿಕೊಂಡ ಸಂದೇಶ್, ನಿಮ್ಮ ಲಾರಿ ಜಿಲ್ಲೆಯಲ್ಲಿ ಸಂಚರಿಸಲು ಪ್ರತಿ ತಿಂಗಳು 60 ಸಾವಿರ ರೂ. ನೀಡುವಂತೆ ಬೇಡಿಕೆ ಇಟ್ಟಿದ್ದರು. ಈ ಕುರಿತು ಕರಿಮೆಣಸು ವ್ಯಾಪಾರಿ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಇಂದು ಸಾತ್ವಿಕ್ ಅವರು ಸಂದೇಶ್ ಅವರಿಗೆ 60 ಸಾವಿರ ರೂ, ನೀಡಲು ಹೋದಾಗ, ಭತ್ತ, ರಾಗಿ ಖರೀದಿ ಅಧಿಕಾರಿ ಹುಸೇನಪ್ಪ ಬಿ.ಶಂಕದ ಅವರನ್ನು ಕರೆದು ಹಣ ಅವರಿಗೆ ಕೊಡುವಂತೆ ಸಂದೇಶ್ ತಿಳಿಸಿದ್ದಾರೆ.

ಈ ವೇಳೆ ದಾಳಿ ನಡೆಸಿದ ಕೊಡಗು ಲೋಕಾಯುಕ್ತ ಡಿವೈಎಸ್‌ಪಿ ಪ್ರಕಾಶ್ ನೇತೃತ್ವದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಕೆ.ಸಿ.ಸಂದೇಶ್ ಅವರನ್ನು ಬಂಧಿಸಿ, ತನಿಖೆ ಮುಂದುವರಿಸಿದ್ದಾರೆ.

ಲಲಿತಾ ನಿಧನ



ಕುಶಾಲನಗರ, ಫೆ.10–ಪಟ್ಟಣದ ಕರಿಯಪ್ಪ ಬಡಾವಣೆ ನಿವಾಸಿ ಲಲಿತಾ (67) ಅನಾರೋಗ್ಯದಿಂದ ನಿಧನರಾದರು.

ಮೃತರು ಪತಿ, ಇಬ್ಬರು ಪುತ್ರಿಯರು, ಪುತ್ರನನ್ನು ಅಗಲಿದ್ದಾರೆ. ಮೃತರ ಆಸೆಯದಂತೆ ಮೃತದೇಹವನ್ನು ಮಡಿಕೇರಿ ವೈದ್ಯಕೀಯ ಸಂಸ್ಥೆಗೆ ದಾನ ಮಾಡಲಾಗಿದೆ.

ನನ್ನ ತೇಜೋವಧೆ ಬೇಡ: ಅರ್ಚಕ ವಿಘ್ನೇಶ್ ಭಟ್

ಮಡಿಕೇರಿ: ಕಟ್ಟೆಮಾಡು ಮಹಾಮೃತ್ಯುಂಜಯ ಮಾದೇಶ್ವರ ದೇವಾಲಯ ಪ್ರಕರಣಕ್ಕೆ ಸಂಬಂಧಿಸಿದಂತೆ ವಿನಾಕಾರಣ ನನ್ನ ವಿರುದ್ಧ ಆರೋಪ ಹೊರಿಸಿ ತೇಜೋವಧೆ ಮಾಡಬೇಡಿ ಎಂದು ದೇವಾಲಯ ಪ್ರಧಾನ ಅರ್ಚಕ ವಿಘ್ನೇಶ್ ಭಟ್ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೃತ್ಯುಂಜಯ ದೇವಾಲಯ ಆಡಳಿತ ಮಂಡಳಿ ಸಂಭಾವನೆ ನೀಡಿ ನನ್ನನ್ನು ಅರ್ಚಕನನ್ನಾಗಿ ನೇಮಿಸಿಕೊಂಡಿದೆ. ನಾನು ದೇವಾಲಯದಲ್ಲಿ ಅರ್ಚಕ ವೃತ್ತಿಯನ್ನಷ್ಟೇ ಮಾಡುತ್ತಿದ್ದು, ಆಡಳಿತ ಮಂಡಳಿ ತೆಗೆದುಕೊಳ್ಳುವ ನಿರ್ಧಾರಗಳಿಗೂ ನನಗೂ ಯಾವುದೇ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸಿದರು.

ಭಕ್ತರು ಅಪೇಕ್ಷಿಸಿದ ಸೇವೆ, ಪ್ರಾರ್ಥನೆಯನ್ನು ಸಲ್ಲಿಸುವುದರೊಂದಿಗೆ ದೇವರ ಪೂಜಾ ವಿಧಿವಿಧಾನಗಳನ್ನು ಉತ್ತಮವಾಗಿ ನಡೆಸಿಕೊಂಡು ಬರುವುದು ಮಾತ್ರ ನನ್ನ ಕಾಯಕವಾಗಿದೆ. ಅರ್ಚಕನಾಗಿ ನನಗೆ ನನ್ನದೇ ಆದ ಗೌರವವಿದೆ. ಕಟ್ಟೆಮಾಡಿನಲ್ಲಿ ನಡೆದ ಮತ್ತು ನಡೆಯುತ್ತಿರುವ ಯಾವುದೇ ಪ್ರಕರಣಗಳಲ್ಲಿ ನನ್ನನ್ನು ಶಾಮೀಲು ಮಾಡಿ ತೇಜೋವಧೆ ಮಾಡಬೇಡಿ ಎಂದು ಕೋರಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಕೊಡವರಿಗೆ ನೀಡಿ

ಸಭೆಯಲ್ಲಿ ತಾಪಂ ಮಾಜಿ ಸದಸ್ಯ ಮೊಳ್ಳೇರ ಸದಾ ಅಪ್ಪಚ್ಚು ಒತ್ತಾಯ



ವಿರಾಜಪೇಟೆ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾಂಗ್ರೆಸ್ ಕೊಡವ ಪ್ರಮುಖರ ಸಭೆಯಲ್ಲಿ ತಾಪಂ ಮಾಜಿ ಸದಸ್ಯ ಮೊಳ್ಳೇರ ಸದಾ ಅಪ್ಪಚ್ಚು ಮಾತನಾಡಿದರು.

ವಿರಾಜಪೇಟೆ, ಫೆ.10–ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಕೊಡವರಿಗೆ ನೀಡಬೇಕು ಎಂದು ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮೊಳ್ಳೇರ ಸದಾ ಅಪ್ಪಚ್ಚು ಒತ್ತಾಯಿಸಿದರು.

ಪಟ್ಟಣದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಪಕ್ಷದ ಕೊಡವ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಜನಾಂಗದ ಇಂತಹವರಿಗೆ ಅಧ್ಯಕ್ಷ ಸ್ಥಾನ ನೀಡಿ ಎಂದು ನಾವು ಆಗ್ರಹಿಸುವುದಿಲ್ಲ, ಆದರೆ, ತಾಲೂಕಿನಲ್ಲಿ ಪಕ್ಷ ಸಂಘಟಿಸಿ ಮುನ್ನಡೆಸುವ ಜವಾಬ್ದಾರಿ ಇರುವ ಕೊಡವರಿಗೆ ನೀಡಬೇಕು. ನಗರಕ್ಕಿಂತ ಗ್ರಾಮಗಳಲ್ಲಿ ಬಿಜೆಪಿ ಒಲವು ಹೆಚ್ಚಾಗಿದೆ. ಇಂದು ಹಣ ಮುಖ್ಯವಲ್ಲ, ಸೇವಾ ಮನೋಭಾವನೆಯಿಂದ ಕೆಲಸ ಮಾಡುವವರ ಅಗತ್ಯವಿದೆ. ಆದ್ದರಿಂದ ಸಮರ್ಥ ನಾಯಕತ್ವವನ್ನು ಕೊಡವರಿಗೆ ನೀಡಿದರೆ ಮಾತ್ರ ಪಕ್ಷ ಸಂಘಟನೆ ಸಾಧ್ಯವಾಗಲಿದೆ. ಈ ಕುರಿತು ವರಿಷ್ಠರಿಗೆ ಮನವಿ ಸಲ್ಲಿಸುವುದಾಗಿ ತಿಳಿಸಿದರು.

ಕಾಂಗ್ರೆಸ್ ಮುಖಂಡ ವಕೀಲ ಎಂ.ಎಸ್. ಪೂವಯ್ಯ ಮಾತನಾಡಿ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಕೊಡವರಿಗೆ ನೀಡಿ ಎಂದು ಕೇಳುವುದರಲ್ಲಿ ತಪ್ಪೇನು ಇಲ್ಲ. ಕೊಡವರು ಪಕ್ಷಕ್ಕಾಗಿ ದುಡಿಯುತ್ತಿದ್ದಾರೆ. ಆದ್ದರಿಂದ ಸಮರ್ಥವಾಗಿ ಪಕ್ಷ ಮುನ್ನಡೆಸಲು ಕೊಡವರಿಗೆ ಅವಕಾಶ ನೀಡುವಂತಾಗಬೇಕು. ವಿರಾಜಪೇಟೆ ಕ್ಷೇತ್ರದಲ್ಲಿ ಮತ್ತೆ ಕಾಂಗ್ರೆಸ್ ಶಾಸಕರು ಆಯ್ಕೆಯಾಗಬೇಕು. ಇದಕ್ಕೆ ಪಕ್ಷದ ವರಿಷ್ಠರು ಬ್ಲಾಕ್ ಕಾಂಗ್ರೆಸ್ ಸ್ಥಾನವನ್ನು ಕೊಡವರಿಗೆ ನೀಡಬೇಕೆಂದು ಆಗ್ರಹಿಸಿದರು.

ಸಭೆಯಲ್ಲಿ ಪ್ರಮುಖರಾದ ಮಾಳೇಟಿರ ಕಾಶಿ, ಜಿಪಂ ಮಾಜಿ ಸದಸ್ಯ ಚಂಬಾಂಡ ಕರುಣ್ ಕಾಳಯ್ಯ, ಕೊಳುವಂಡ ಮಂದಪ್ಪ, ಮಾಳೇಟಿರ ಕಾಳಯ್ಯ, ಕಾಳಮಂಡ ಮೋಹನ್, ಕುಟ್ಟಂಡ ರಾಜೀನ್, ಉಳ್ಳಿಯಡ ಜೀವನ್, ಮಾಚಿಮಂಡ ಪುಟ್ಟು, ಐಚೆಟ್ಟಿರ ರಂಜಿ, ಮುಕ್ಕಾಟಿರ ವಿನಿತಾ ಕಾವೇರಮ್ಮ ಮುಂತಾದವರು ಉಪಸ್ಥಿತರಿದ್ದರು.

ಪೊಲೀಸ್ ಠಾಣೆಯಲ್ಲಿ ಬೈಕ್ ಕದ್ದ ಇಬ್ಬರ ಬಂಧನ

ಚಾಮರಾಜನಗರ, ಫೆ.10–ನಗರದ ಸತ್ತಿ ರಸ್ತೆಯಲ್ಲಿರುವ ಸೈಬರ್, ಆರ್ಥಿಕ ಮತ್ತು ಮಾದಕ ದ್ರವ್ಯ ತಡೆ (ಸಿಇಎನ್) ಪೊಲೀಸ್ ಠಾಣೆಯಲ್ಲಿ ಬೈಕ್‌ಗಳನ್ನು ಕಳವು ಮಾಡಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ನಗರದ ಗಾಳೀಪುರ ಬಡಾವಣೆಯ ಅರ್ಫಾಜ್(30) ಹಾಗೂ ಇಮ್ರಾನ್(29) ಬಂಧಿತರು. ಠಾಣೆ ಕಾಂಪೌಂಡ್ ನೆಗೆದು ಬಂದ ಈ ಇಬ್ಬರು ಗೇಟ್ ಮುರಿದು ಬೈಕ್ ಕದ್ದು ಹೋಗಿದ್ದರು ಈ ಬಗ್ಗೆ ಪೊಲೀಸ್ ಸಿಬ್ಬಂದಿ ಶಿವಕುಮಾರ್ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಶನಿವಾರ ರಾತ್ರಿ ಪೊಲೀಸ್ ಸಿಬ್ಬಂದಿ ಕರ್ತವ್ಯ ಮುಗಿಸಿ, ಠಾಣೆ ಗೇಟ್‌ಗೆ ಬೀಗ ಹಾಕಿ ಹೋಗಿದ್ದರು. ಭಾನುವಾರ ಬೆಳಗ್ಗೆ 7 ಗಂಟೆಗೆ ಫೈರಿಂಗ್ ತರಬೇತಿಗೆ ಹೋಗುವ ಸಲುವಾಗಿ ಠಾಣೆಗೆ ಸಿಬ್ಬಂದಿ ಬಂದಾಗ ಬೈಕ್ ಕಳ್ಳತನವಾಗಿರುವುದು ತಿಳಿದು ಬಂದಿದೆ.

ಕೂಡಲೇ ಪೊಲೀಸರು ಸಿಸಿಟಿವಿ ಪರಿಶೀಲನೆ ಮಾಡಿದ್ದು, ಇಬ್ಬರು ಮಧ್ಯರಾತ್ರಿ 1.20ರಲ್ಲಿ ಕಾಂಪೌಂಡ್‌ನಿಂದ ಜಿಗಿದು ಠಾಣೆ ಆವರಣಕ್ಕೆ ಬಂದಿದ್ದಾರೆ. ನಂತರ ಸುಮಾರು ಅರ್ಧ ತಾಸು ಅಲ್ಲೇ ಇದ್ದು, ಬಳಿಕ ಕಾಂಪೌಂಡ್ ಹಾರಿ ಹೊರಗಡೆ ಹೋಗಿ ರಾಡಿನಿಂದ ಗೇಟ್ ಬೀಗ ಮುರಿದು ಠಾಣೆ ಶೆಡ್‌ನಲ್ಲಿ ನಿಲ್ಲಿಸಿದ್ದ ಎರಡು ದ್ವಿಚಕ್ರ ವಾಹನವನ್ನು ಕಳ್ಳತನ ಮಾಡಿದ್ದರು.

ಪ್ರಕರಣ ಸಂಬಂಧ ತನಿಖೆ ಆರಂಭಿಸಿದ ಪಟ್ಟಣ ಠಾಣೆ ಪೊಲೀಸರು 24 ಗಂಟೆಯಲ್ಲೇ ಇಬ್ಬರನ್ನು ಬಂಧಿಸಿದ್ದಾರೆ. ಖದೀಮರಿಂದ ಬೈಕ್ ಅನ್ನು ವಶಪಡಿಸಿಕೊಂಡು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಾಯಂ ಸರ್ಕಾರಿ ಉದ್ಯೋಗ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ

ಆಕ್ಸಿಜನ್ ದುರಂತ ಕುಟುಂಬದವರ ಪ್ರತಿಭಟನೆ



ಚಾಮರಾಜನಗರದಲ್ಲಿ ಆಕ್ಸಿಜನ್ ದುರಂತದಿಂದ ಮೃತಪಟ್ಟ ಕುಟುಂಬದವರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಫೆ.10– ಆಕ್ಸಿಜನ್ ದುರಂತ ಸಂತ್ರಸ್ತ ಕುಟುಂಬಗಳಿಗೆ ಕಾಯಂ ಸರ್ಕಾರಿ ಉದ್ಯೋಗ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಆಕ್ಸಿಜನ್ ದುರಂತದಿಂದ ಮೃತಪಟ್ಟವರ ಕುಟುಂಬದವರು, ಎಸ್‌ಡಿಪಿಐನ ಜಿಲ್ಲಾ ಘಟಕ ಹಾಗೂ ವಿವಿಧ ಪ್ರಗತಿಪರ ಸಂಘಟನೆ ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಮುಂಭಾಗದ ಉದ್ಯಾನದ ಆವರಣದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.

ಇದೇ ವೇಳೆ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, 4 ವರ್ಷದ ಹಿಂದೆ ಕೋವಿಡ್ ಸಂದರ್ಭದಲ್ಲಿ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದ 36 ಮಂದಿ ಮೃತಪಟ್ಟಿದ್ದರು. ಆ ವೇಳೆ ಮೃತ ಕುಟುಂಬಗಳಿಗೆ ಉದ್ಯೋಗ ನೀಡುವ ಭರವಸೆ ನೀಡಿ, ಕೇವಲ 3 ರಿಂದ 4 ಸಂತ್ರಸ್ತರಿಗೆ ತಾತ್ಕಾಲಿಕ ಉದ್ಯೋಗ ನೀಡಲಾಗಿದೆ. ಅಲ್ಲದೇ, ಘಟನೆಗೆ ಕಾರಣರಾದ ಯಾವೊಬ್ಬ ವೈದ್ಯಾಧಿಕಾರಿ ಅಥವಾ ಅಂದಿನ ಜಿಲ್ಲಾಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಿಲ್ಲ ಎಂದು ದೂರಿದರು.

ದುರಂತಕ್ಕೆ ಕಾರಣರಾದ ಅಧಿಕಾರಿಗಳಿಗೆ ಶಿಕ್ಷೆ ನೀಡಬೇಕು. ಸಂತ್ರಸ್ತರಿಗೆ ಕಾಯಂ ಉದ್ಯೋಗ ನೀಡಬೇಕು. ಈ ಬಗ್ಗೆ ಸರ್ಕಾರ ನಿರ್ಲಕ್ಷ್ಯ ವಹಿಸಿದರೆ. ಫೆ.16ರಂದು ಚಾಮರಾಜನಗರದಲ್ಲಿ ನಡೆಯುವ ಬೃಹತ್ ಸಮಾವೇಶದಲ್ಲಿ ಭಾಗವಹಿಸುವ ಸಿಎಂ ಸಿದ್ದರಾಮಯ್ಯ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲಾಗುವುದು ಎಂದು ಎಚ್ಚರಿಸಿದರು.

ಎಸ್‌ಡಿಪಿಐ ರಾಜ್ಯ ಕಾರ್ಯದರ್ಶಿ ಅಬ್ರಾರ್ ಅಹಮದ್ ಮಾತನಾಡಿ, 2015ರಲ್ಲಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಸುಮಾರು 170 ಕೋಟಿ ರೂ. ಖರ್ಚು ಮಾಡಿ ರಾಜ್ಯದ ಮನೆ, ಮನೆಗಳಿಗೆ ಸಿಬ್ಬಂದಿ ಕಳುಹಿಸಿ 55 ಪ್ರಶ್ನೆಗಳನ್ನು ಕೇಳುವ ಮೂಲಕ ಆ ಕುಟುಂಬದ ಸಾಮಾಜಿಕ ಮತ್ತು ಶೈಕ್ಷಣಿಕ ಮಾಹಿತಿ ಪಡೆದು ಅಧ್ಯಯನ ನಡೆಸಿ 10 ವರ್ಷ ಕಳೆದಿವೆ. ಆದರೆ, ಸರ್ಕಾರ ಇಲ್ಲಿಯವರೆಗೂ ಈ ವರದಿಯನ್ನು ಜಾರಿ ಮಾಡಿಲ್ಲ. ಅನೇಕ ಬಾರಿ ಸಿದ್ದರಾಮಯ್ಯ ಶೀಘ್ರದಲ್ಲೇ ವರದಿ ಬಿಡುಗಡೆಗೊಳಿಸುವುದಾಗಿ ಹೇಳಿ ನಂತರ ರಾಜಕೀಯ ಒತ್ತಡಕ್ಕೆ ಮಣಿದು ತಮ್ಮ ನಿರ್ಧಾರವನ್ನು ಬದಲಾಯಿಸುತ್ತಾ ಬಂದಿದ್ದಾರೆ ಎಂದರು.

ಫೆ.17ರಂದು ಮಹದೇಶ್ವರಬೆಟ್ಟದಲ್ಲಿ ನಡೆಯಲಿರುವ ಸಂಪುಟ ಸಭೆಯಲ್ಲಿ ಈ ವರದಿಯನ್ನು ಮಂಡಿಸಿ ನಿಯಮಾನುಸಾರ ಶೋಷಿತ ಸಮುದಾಯಗಳ ಪರ ಯೋಜನೆ ರೂಪಿಸುವ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಮುಸ್ಲಿಂ ಸಮುದಾಯಕ್ಕೆ ಮೀಸಲಿದ್ದ 2(ಬಿ) ಮೀಸಲಾತಿಯನ್ನು ಮರುಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್‌ಡಿಪಿಐ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ಜಿಲ್ಲಾಧ್ಯಕ್ಷ ಕಲೀಲ್‌ಉಲ್ಲಾ, ಪ್ರಧಾನ ಕಾರ್ಯದರ್ಶಿ ಎಂ.ಮಹೇಶ್, ಸಿ.ಕೆ.ನಯಾಜುಲ್ಲಾ, ಪ್ರಗತಿಪರ ಸಂಘಟನೆಗಳ ಮುಖಂಡರಾದ ಸಂಘ ಸೇನಾ, ವೆಂಕಟರಮಣಸ್ವಾಮಿ ಬಂಗಾರಸ್ವಾಮಿ, ಸಿ.ಎಂ.ಕೃಷ್ಣಮೂರ್ತಿ, ಪಿಯುಸಿಎಲ್ ಉಪಾಧ್ಯಕ್ಷ ವೆಂಕಟರಾಜು, ನಮ್ಮನೆ ಪ್ರಶಾಂತ್, ಮುಖಂಡರಾದ ರಾಮಸಮುದ್ರ ಶಿವಣ್ಣ, ಮಹೇಂದ್ರ, ಸಂತ್ರಸ್ತರು ಭಾಗವಹಿಸಿದ್ದರು.

ಪುರಸಭೆ ಅಧ್ಯಕ್ಷರಾಗಿ ಮಧುಸೂದನ್, ಉಪಾಧ್ಯಕ್ಷರಾಗಿ ಅಣ್ಣಯ್ಯಸ್ವಾಮಿ ಆಯ್ಕೆ



ಗುಂಡ್ಲುಪೇಟೆ ಪುರಸಭೆಯ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಸಂಸದ ಸುನೀಲ್ ಬೋಸ್, ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅಭಿನಂದಿಸಿದರು.

ಗುಂಡ್ಲುಪೇಟೆ, ಫೆ.10–ಪುರಸಭೆ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್‌ನ ಮಧುಸೂದನ್ ಮತ್ತು ಉಪಾಧ್ಯಕ್ಷರಾಗಿ ಅಣ್ಣಯ್ಯಸ್ವಾಮಿ ಅವಿರೋಧವಾಗಿ ಆಯ್ಕೆಯಾದರು.

ಒಪ್ಪಂದದಂತೆ ಹಿಂದಿನ ಅಧ್ಯಕ್ಷ ಕಿರಣ್ ಗೌಡ ಹಾಗೂ ಉಪಾಧ್ಯಕ್ಷೆ ಹೀನಾ ಕೌಸರ್ ರಾಜೀನಾಮೆ ನೀಡಿದ್ದರು. ಇದರಿಂದ ತೆರವಾದ ಸ್ಥಾನಗಳಿಗೆ ಸೋಮವಾರ ಪುರಸಭೆಯ ಸಭಾಂಗಣದಲ್ಲಿ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಮಧುಸೂದನ್ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಅಣ್ಣಯ್ಯಸ್ವಾಮಿ ಮಾತ್ರ ನಾಮಪತ್ರ ಸಲ್ಲಿಸಿದ್ದರು. ನಂತರ ಚುನಾಣಾಧಿಕಾರಿ ಆದ ತಹಸೀಲ್ದಾರ್ ಟಿ.ರಮೇಶ್ ಬಾಬು ಅವಿರೋಧ ಆಯ್ಕೆ ಘೋಷಿಸಿದರು.

ಇದೇ ವೇಳೆ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಿ, ಪಟ್ಟಣವನ್ನು ಮಾದರಿಯನ್ನಾಗಿಸಲು ಶ್ರಮಿಸಲು ಸೂಚನೆ ನೀಡಿದರು.

ಸಂಸದ ಸುನೀಲ್ ಬೋಸ್ ಮಾತನಾಡಿ, ಪಟ್ಟಣದ ಸಮಗ್ರ ಅಭಿವೃದ್ಧಿಗೆ ಎಲ್ಲಾ ಸದಸ್ಯರು ಸಹಕಾರ ನೀಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ವಸಂತಕುಮಾರಿ, ಮುಖಂಡರಾದ ಕಬ್ಬಳ್ಳಿ ಮಹೇಶ್, ಹೆಚ್.ಎಸ್. ನಂಜಪ್ಪ, ಪಿ.ಸುರೇಂದ್ರ, ಆಲತ್ತೂರು ಜಯರಾಮು ಮತ್ತು ಪುರಸಭೆ ಸದಸ್ಯರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.

ಪಟಾಕಿ ಸಿಡಿಸಿ ಸಂಭ್ರಮ

ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು.

ಇಂದು ಗುರು ವಿದ್ಯಾಲಯೋತ್ಸವ

ಆಲೂರು, ಫೆ.10–ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದ ಶ್ರೀ ಗುರುಮಲ್ಲೇಶ್ವರ ಶಾಲೆಯಲ್ಲಿ ಮಂಗಳವಾರ (ಫೆ.11) ಶ್ರೀ ಗುರು ವಿದ್ಯಾಲಯೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಶಾಸಕ ಸಿ.ಪುಟ್ಟರಂಗಶೆಟ್ಟಿ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಶಾಸಕ ಎ.ಆರ್. ಕೃಷ್ಣಮೂರ್ತಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಿದ್ದಾರೆ. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎ.ಸಿ.ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಲಿದ್ದು, ಶಾಲಾ ಕ್ಯಾಲೆಂಡರ್ ಅನ್ನು ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ ಹಾಗೂ ಜಿಲ್ಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇಅರಸ್ ಶಾಲಾ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ ಎಂದು ಶಾಲಾ ಮುಖ್ಯಶಿಕ್ಷಕ ಎಸ್.ಶಂಕರಪ್ಪ ತಿಳಿಸಿದ್ದಾರೆ.

ಕಾಳಯ್ಯ ನಿಧನ



ಗುಂಡ್ಲುಪೇಟೆ, ಫೆ.10–ತಾಲೂಕಿನ ಹಂಗಳ ಹೋಬಳಿಯ ಕಲೀಗೌಡನಹಳ್ಳಿ ಗ್ರಾಮದ ನಿವಾಸಿ, ಕಂದಾಯ ಇಲಾಖೆ ಗ್ರಾಮ ಸಹಾಯಕ ಕಾಳಯ್ಯ (58) ಹೃದಯಾಘಾತದಿಂದ ಸೋಮವಾರ ಮುಂಜಾನೆ ನಿಧನರಾದರು.

ಮೃತರು ಪತ್ನಿ ಗೋಪಮ್ಮ, ಮಕ್ಕಳಾದ ಕೃಷ್ಣ, ಪುಷ್ಪಾ, ಭಾಗ್ಯ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮ ಕಲೀಗೌಡನಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಚಾಮುಲ್ ನೂತನ ಅಧ್ಯಕ್ಷರಾಗಿ ನಂಜುಂಡಸ್ವಾಮಿ ಆಯ್ಕೆ

ಕುದೇರು ಗ್ರಾಮದ ಚಾಮುಲ್ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅವಿರೋಧ ಆಯ್ಕೆ



ಚಾಮುಲ್ ಅಧ್ಯಕ್ಷರಾಗಿ ಆಯ್ಕೆಯಾದ ಮಧುವನಹಳ್ಳಿ ನಂಜುಂಡಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ಚಾಮರಾಜನಗರ, ಫೆ.10–ನಿರೀಕ್ಷೆಯಂತೆ ಜಿಲ್ಲಾ ಹಾಲು ಒಕ್ಕೂಟದ ನೂತನ ಅಧ್ಯಕ್ಷರಾಗಿ ಮಧುವನಹಳ್ಳಿ ನಂಜುಂಡಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಾಲೂಕಿನ ಸಂತೇಮರಹಳ್ಳಿ ಸಮೀಪದ ಕುದೇರು ಗ್ರಾಮದ ಚಾಮುಲ್ ಕಚೇರಿಯಲ್ಲಿ ನಡೆದ ಅಧ್ಯಕ್ಷರ ಆಯ್ಕೆ ಚುನಾವಣೆಯಲ್ಲಿ ನಂಜುಂಡಸ್ವಾಮಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಹಿಂದಿನ ಅಧ್ಯಕ್ಷ ವೈ.ಸಿ.ನಾಗೇಂದ್ರ ಅವರನ್ನು ಆಡಳಿತ ಮಂಡಳಿ ಕಾಂಗ್ರೆಸ್ ಬೆಂಬಲಿತ ನಿರ್ದೇಶಕರು ಸೇರಿದಂತೆ ಇತರೇ ನಿರ್ದೇಶಕರು ಒಗ್ಗೂಡಿ ಅವಿಶ್ವಾಸ ಗೊತ್ತುವಳಿ ಮಂಡಿಸಿ ಪದಚ್ಯುತಿಗೊಳಿಸಿದ್ದರು. ಈ ಹಿನ್ನೆಲೆಯಲ್ಲಿ ತೆರವಾಗಿದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣೆ ನಡೆಯಿತು.

ಚುನಾವಣೆ ಪ್ರಕ್ರಿಯೆಯಲ್ಲಿ ನಿರ್ದೇಶಕರಾದ ಎಚ್.ಎಸ್.ನಂಜುಂಡಪ್ರಸಾದ್, ಶೀಲಾ, ಮಹದೇವಸ್ವಾಮಿ, ನಂಜುಂಡಸ್ವಾಮಿ, ಸದಾಶಿವಮೂರ್ತಿ, ತಾರೀಕ್ ಅಹಮ್ಮದ್, ನಾಮ ನಿರ್ದೇಶಕ ಕಮರವಾಡಿ ರೇವಣ್ಣ, ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ.ಹನುಮೇಗೌಡ, ಸಹಕಾರ ಇಲಾಖೆ ಉಪನಿರ್ದೇಶಕಿ ಜ್ಯೋತಿ ಅರಸ್, ಕೆಎಂಎಫ್ ನಿರ್ದೇಶಕ ಕೆ.ಎಸ್.ಬಸವರಾಜು ಹಾಜರಿದ್ದರು. ನಿರ್ದೇಶಕರಾದ ವೈ.ಸಿ.ನಾಗೇಂದ್ರ, ಬಸವರಾಜು, ಸುನೀಲ್ ಹಾಗೂ ಎನ್‌ಡಿಡಿಬಿ ರಜಿನಿ ತ್ರಿಪಾರ್ಟಿ ಗೈರಾಗಿದ್ದರು.

ಉತ್ಪಾದಕರ ಹಿತ ಕಾಪಾಡಲು ಬದ್ಧ: ಈ ವೇಳೆ ನೂತನ ಅಧ್ಯಕ್ಷ ಮಧುವನಹಳ್ಳಿ ನಂಜುಂಡಸ್ವಾಮಿ ಮಾತನಾಡಿ, ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ನಿರ್ದೇಶಕರ ಸಹಕಾರ ಪಡೆದು ಮುಂದಿನ ದಿನಗಳಲ್ಲಿ ರೈತರು ಹಾಗೂ ಉತ್ಪಾದಕರ ಹಿತ ಕಾಪಾಡಲು ಬದ್ಧನಾಗಿರುತ್ತೇನೆ ಎಂದು ಭರವಸೆ ನೀಡಿದರು.

ರೈತರು ಹಾಗೂ ಉತ್ಪಾದಕರು ಚಾಮುಲ್‌ಗೆ ಬೆನ್ನೆಲುಬಾಗಿದ್ದು, ಈ ನಿಟ್ಟಿನಲ್ಲಿ ರೈತರ ಹಿತಕ್ಕಾಗಿ 1 ರೂ. ಹೆಚ್ಚಳ ಮಾಡಲಾಗಿದೆ. ಒಕ್ಕೂಟಕ್ಕೆ ಸರ್ಕಾರದಿಂದ 52 ಕೋಟಿ ರೂ. ಬಾಕಿ ಬಿಡುಗಡೆಯಾಗಬೇಕಾಗಿದೆ. ಈ ನಿಮಿತ್ತ ಸರ್ಕಾರಕ್ಕೆ ಬಾಕಿ ಹಣ ಬಿಡುಗಡೆ ಮಾಡಿಕೊಡುವ ನಿಟ್ಟಿನಲ್ಲಿ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಚಾಮುಲ್ ಘಟಕದಲ್ಲಿ 67 ಕೋಟಿ ರೂ. ವೆಚ್ಚದಲ್ಲಿ ದಿನಕ್ಕೆ 10 ಸಾವಿರ ಐಸ್‌ಕ್ರೀಮ್ ತಯಾರಿಸುವ ಪ್ರತ್ಯೇಕ ಘಟಕ ಸ್ಥಾಪನೆ ಮಾಡುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗಿದೆ ಎಂದರು.

ಸಂಭ್ರಮಾಚರಣೆ: ಚಾಮುಲ್ ಅಧ್ಯಕ್ಷರಾಗಿ ಮಧುವನಹಳ್ಳಿ ನಂಜುಂಡಸ್ವಾಮಿ ಅವಿರೋಧವಾಗಿ ಆಯ್ಕೆಯಾಗುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಸಿಹಿ ಹಂಚಿ ಸಂಭ್ರಮಿಸಿದರು.

ಇದೇ ವೇಳೆ ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಮುಖಂಡರಾದ ಬಿ.ಕೆ.ರವಿಕುಮಾರ್, ಕೆ.ಪಿ.ಸದಾಶಿವಮೂರ್ತಿ, ಆರ್.ಮಹದೇವ್ ಇತರರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

ಬಾಯಿ ಆರೋಗ್ಯ ಅರಿವು



ಮೈಸೂರಿನ ಫಾರೂಖಿಯಾ ಡೆಂಟಲ್ ಕಾಲೇಜಿನಲ್ಲಿ ವಾಕಥಾನ್ ಮತ್ತು ಕ್ರೀಡಾ ಚಟುವಟಿಕೆಗಳ ಮೂಲಕ ಬಾಯಿ ಆರೋಗ್ಯ ಅರಿವು ಮೂಡಿಸಲಾಯಿತು. ವಾಕಥಾನ್ ಕೆ.ಆರ್.ಆಸ್ಪತ್ರೆಯಿಂದ ಆರಂಭವಾಗಿ ಡೆಂಟಲ್ ಕಾಲೇಜಿನಲ್ಲಿ ಅಂತ್ಯಗೊಂಡಿತು. ಈ ವೇಳೆ ಉಚಿತ ಬಾಯಿ ಆರೋಗ್ಯ ತಪಾಸಣಾ ಮತ್ತು ಚಿಕಿತ್ಸಾ ಶಿಬಿರದ ಪ್ರಯೋಜನವನ್ನು ಸಾವಿರಾರು ಮಂದಿ ಪಡೆದುಕೊಂಡರು. ರಾಜೀವ್ ಗಾಂಧಿ ಯೂನಿವರ್ಸಿಟಿ ಆಫ್ ಹೆಲ್ತ್ ಸೈನ್ಸಸ್‌ನ ಸೆನೆಟ್ ಸದಸ್ಯ ಮತ್ತು ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಾಧ್ಯಾಪಕ ಡಾ.ಕೆ.ಸಿ.ಶಶಿಧರ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಇಂಡಿಯನ್ ಡೆಂಟಲ್ ಅಸೋಸಿಯೇಷನ್ ಕಾರ್ಯದರ್ಶಿ ಡಾ.ಟಿ.ಕೆ.ಸಂದೀಪ್, ಡಾ.ಹೆಚ್.ಪಿ.ಶ್ರೀನಾಥ್, ಡಾ.ಸಂಜಯ್ ಮುರಗೋಡ್ ಮತ್ತಿತರರು ಉಪಸ್ಥಿತರಿದ್ದರು.

ಬಸವಾದಿ ಶರಣರ ಸಣ್ಣ ಸಣ್ಣ ಸಂಗತಿಗಳಿಂದ ಸಮಾಜ ತಿದ್ದುವ ಕೆಲಸ

ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕುರಿತ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರೊ.ಮೊರಬದ ಮಲ್ಲಿಕಾರ್ಜುನ ಅಭಿಮತ

ಮೈಸೂರು,ಫೆ.10–ಬಸವಾದಿ ಶರಣರು ಸಣ್ಣ, ಸಣ್ಣ ಸಂಗತಿಗಳ ಮೂಲಕ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದಾರೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಹೇಳಿದರು.

ಮೈಸೂರು ಜಿಲ್ಲಾ ಹಾಗೂ ನಂಜನಗೂಡು ತಾಲೂಕು ಶರಣ ಸಾಹಿತ್ಯ ಪರಿಷತ್ತು ವತಿಯಿಂದ ಹುಲ್ಲಹಳ್ಳಿಯ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ದೇವಮ್ಮ ಹೊನ್ನಪ್ಪ ಕೆಬ್ಬೇಪುರ ದತ್ತಿ, ಗೌರಮ್ಮ ಎಂ. ಬಸಪ್ಪ ಅರಳಿಕಟ್ಟೆ ದತ್ತಿ ಉಪನ್ಯಾಸದಲ್ಲಿ ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಕುರಿತು ಅವರು ಮಾತನಾಡಿ, ವಚನ ಸಾಹಿತ್ಯ ಎಲ್ಲದಕ್ಕೂ ಸೂಕ್ಷ್ಮವಾಗಿ ಸ್ಪಂದಿಸಿದೆ. ಆ ಮೂಲಕ ಜೀವನ ಮೌಲ್ಯವನ್ನು ಹೆಚ್ಚಿಸುವ ಕೆಲಸ ಮಾಡಿದೆ ಎಂದರು.

ಬಸವಣ್ಣನವರು ಮನೋವಿಜ್ಞಾನಿ, ತತ್ವಜ್ಞಾನಿಯಾಗಿದ್ದರು. ಸಣ್ಣ, ಸಣ್ಣ ಸಂಗತಿಗಳ ಮೂಲಕವೇ ಸಮಾಜದ ಸತ್ವವನ್ನು ಹೆಚ್ಚಿಸುವ ಕೆಲಸ ಮಾಡಿದರು. ಮೌಲ್ಯ ಬದುಕಿಗೆ ಸಂಬಂಧಿಸಿದ್ದು, ಬಸವಾದಿ ಶರಣರು ಸೂಕ್ಷ್ಮವಾಗಿ ಬದುಕನ್ನು ಗಮನಿಸುತ್ತಿದ್ದರು. ಹೀಗಾಗಿ ಶರಣರ ಕಾಳಜಿಯನ್ನು ಅರ್ಥಮಾಡಿಕೊಂಡು ನಮ್ಮಲ್ಲಿ



ಹುಲ್ಲಹಳ್ಳಿ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ನಡೆದ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು. ಪ್ರೊ.ಮೊರಬದ ಮಲ್ಲಿಕಾರ್ಜುನ, ಹೆಳವರಹುಂಡಿ ಸಿದ್ದಪ್ಪ, ಎಂ.ಚಂದ್ರಶೇಖರ್, ಎಂ.ಪಿ.ರೇವಣ್ಣ, ಮಹದೇವಸ್ವಾಮಿ, ಎಚ್.ರಾಜು ಕೆಬ್ಬೇಪುರ, ಆರ್.ಬಿ.ಪುಟ್ಟಮಾದಪ್ಪ ಚಿತ್ರದಲ್ಲಿದ್ದಾರೆ.

ರುವ ಅಪೂರ್ವ ಶಕ್ತಿ, ಸಾಮರ್ಥ್ಯವನ್ನು ಬಳಸಬೇಕು. ಬದುಕಿನ ಮೌಲ್ಯಗಳನ್ನು ನಮ್ಮೊಂದಿಗೆ ಗುರುತಿಸುವ ಕೆಲಸ ಮಾಡಬೇಕು. ಈ ಮೂಲಕ ಘನ ಬದುಕನ್ನು ಸಾಗಿಸುವ ಕೆಲಸ ಮಾಡಬೇಕು ಎಂದು ಅವರು ಕರೆ ನೀಡಿದರು.

ಬಸವಾದಿ ಶರಣರ ಕಾಲದಲ್ಲಿ ಅನುಭವ ಮಂಟಪ ಓದುವ–ಕೇಳುವ ವೇದಿಕೆಯಾದಂತೆ ಪ್ರಸ್ತುತ ವಿದ್ಯಾರ್ಥಿಗಳಲ್ಲಿ ಕೇಳುವ, ಸಂಸ್ಕಾರ, ಸಂಸ್ಕೃತಿ ಬೆಳೆಯಬೇಕು. ಇದಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಗುರುಗಳು ತಯಾರು ಮಾಡಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸಮಾನತೆ, ಮಾನವೀಯತೆ, ಸ್ತ್ರೀಸಮಾನತೆ, ಸತ್ಯ, ಅಹಿಂಸೆ, ನಿಸ್ವಾರ್ಥ, ಪ್ರೀತಿ, ತ್ಯಾಗ, ಸ್ನೇಹ, ಪ್ರಾಮಾಣಿಕತೆ, ಕಾಯಕ, ದಾಸೋಹ– ಈ ಎಲ್ಲಾ ಅಂಶಗಳು ವಚನ ಸಾಹಿತ್ಯದಲ್ಲಿ ಅಡಕವಾಗಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಮಾತನಾಡಿ, ವಿದ್ಯಾರ್ಥಿಗಳು ಕಂಪ್ಯೂಟರ್ ಜ್ಞಾನ ಹೊಂದಿರಬೇಕು ಜೊತೆಗೆ ಇಂಗ್ಲಿಷ್ ಕಲಿಯಬೇಕು. ಹೊಸ ಹೊಸ ಕ್ಷೇತ್ರಗಳ ಅನುಭವಗಳನ್ನು ಪಡೆಯಬೇಕು. ಈ ರೀತಿಯಾದಲ್ಲಿ ಮಾತ್ರ ಉದ್ಯೋಗವಕಾಶಗಳು ಸಿಗುತ್ತವೆ ಎಂದು ಹೇಳಿದರು.

ನಂಜನಗೂಡು ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿಂಧುವಳ್ಳಿ ಕೆಂಪಣ್ಣ ಮಾತನಾಡಿ, ಪ್ರಸ್ತುತ ದೃಶ್ಯ ಮಾಧ್ಯಮ ಹಾಗೂ ಮೊಬೈಲ್ ಹಾವಳಿ ನಡುವೆ ಶರಣರ ಸಂದೇಶಗಳನ್ನು ತಿಳಿದು ನೀತಿನೆಲೆಗಟ್ಟಿನ ಮೇಲೆ ಜೀವನ ಸಾಗಿಸಬೇಕು ಎಂದರು.

ದತ್ತಿ ದಾಸೋಹಿ, ನಿವೃತ್ತ ಉಪನ್ಯಾಸಕ ಎಚ್.ರಾಜು ಕೆಬ್ಬೇಪುರ ಮಾತನಾಡಿ, ಬಸವಣ್ಣನವರ ಸಾಹಿತ್ಯ ಕಾಲ್‌ಮಾರ್ಕ್ಸ್‌ನ ದಾಸ್ ಕ್ಯಾಪಿಟಲ್‌ಗಿಂತಲೂ ಮಿಗಿಲಾದುದು. ವರ್ಣ ಹಾಗೂ ವರ್ಗ ಭೇದದ ವಿರುದ್ಧ ಅಂತಹ ಕ್ರಾಂತಿಕಾರಿ ಸಂದೇಶಗಳು ವಚನ ಸಾಹಿತ್ಯದಲ್ಲಿ ಇದೆ ಎಂದರು.

ಜೆಎಸ್‌ಎಸ್ ಪ್ರೌಢಶಾಲಾ ಮುಖ್ಯ ಶಿಕ್ಷಕ ಮಹದೇವಸ್ವಾಮಿ ಮಾತನಾಡಿ, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ, ಎದೆತುಂಬಿ ಹಾಡುವೆನು... ಗೀತೆಯ ಮೂಲಕ ಕೇಳುವ ಸಂಸ್ಕೃತಿಯ ಮಹತ್ವವನ್ನು ವಿವರಿಸಿದರು.

ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಎಂ.ಪಿ.ರೇವಣ್ಣ, ಶೈಲಜಾ, ಶಿವಲಿಂಗಪ್ಪ, ರಾಜಪ್ಪ, ಸಿದ್ದಪ್ಪ ಇದ್ದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಪ್ರಾಸ್ತಾವಿಕ ಭಾಷಣ ಮಾಡಿ, ಸ್ವಾಗತಿಸಿದರು. ಉಪನ್ಯಾಸಕ ಶಿವಕುಮಾರಸ್ವಾಮಿ ನಿರೂಪಿಸಿದರು. ಉಪನ್ಯಾಸಕ ಆರ್.ಬಿ. ಪುಟ್ಟಮಾದಪ್ಪ ವಂದಿಸಿದರು. ಲಾವಣ್ಯ ಪ್ರಾರ್ಥಿಸಿದರು.

ಉಗ್ರರ ಅಡಗುತಾಣದಲ್ಲಿ 7 ಮಂದಿ ಬಂಧನ



ಇಂಫಾಲ್: ಮಣಿಪುರದ ಇಂಫಾಲ್ ಪೂರ್ವ ಜಿಲ್ಲೆಯಲ್ಲಿ ನಿಷೇಧಿತ ಸಂಘಟನೆಯಾದ ನ್ಯಾಷನಲ್ ರೆವಲ್ಯೂಷನರಿ ಫ್ರಂಟ್ ಆಫ್ ಮಣಿಪುರ(NRFM)ದ ಅಡಗುತಾಣವನ್ನು ಭದ್ರತಾ ಪಡೆಗಳು ಭೇದಿಸಿದ್ದು, 7 ಉಗ್ರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಖಚಿತ ಸುಳಿವಿನ ಮೇರೆಗೆ ಪೊಲೀಸರು ಭಾನುವಾರ ಟೆಲ್ಲೌ ಮಖಾ ಲೈಕೈನಲ್ಲಿ ದಾಳಿ ನಡೆಸಿ ಉಗ್ರರನ್ನು ಬಂಧಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಬಂಧಿತ ಉಗ್ರರಿಂದ ಮ್ಯಾಗಜೀನ್ ಮತ್ತು 15 ಕಾರ್ಟ್ರಿಡ್ಜ್‌ಗಳನ್ನು ಹೊಂದಿರುವ A1 ಅಸಾಲ್ಟ್ ರೈಫಲ್, ಮ್ಯಾಗಜೀನ್ ಮತ್ತು 13 ಕಾರ್ಟ್ರಿಡ್ಜ್‌ಗಳನ್ನು ಹೊಂದಿರುವ AK-47 ರೈಫಲ್, ಮ್ಯಾಗಜೀನ್ ಮತ್ತು 12 ಕಾರ್ಟ್ರಿಡ್ಜ್‌ಗಳನ್ನು ಹೊಂದಿರುವ ಎರಡು INSAS ರೈಫಲ್‌ಗಳು, ಮ್ಯಾಗಜೀನ್‌ಗಳು ಮತ್ತು 30 ಕಾರ್ಟ್ರಿಡ್ಜ್‌ಗಳನ್ನು ಹೊಂದಿರುವ ಎರಡು ಸ್ವಯಂ–ಲೋಡಿಂಗ್ ರೈಫಲ್‌ಗಳು, ಐದು ಬುಲೆಟ್ ಪ್ರೂಫ್ ಜಾಕೆಟ್‌ಗಳು ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮೊಬೈಲ್ ಫೋಟೋಗ್ರಫಿ ಕಾರ್ಯಾಗಾರ



ಮೈಸೂರಿನ ನಟರಾಜ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಮೊಬೈಲ್ ಫೋನ್ ಫೋಟೋಗ್ರಫಿ ಕಾರ್ಯಾಗಾರ ನಡೆಯಿತು.

ಮೈಸೂರು, ಫೆ. 10–ಮೈಸೂರಿನಲ್ಲಿ ಪ್ರಥಮ ಬಾರಿಗೆ ಮೊಬೈಲ್ ಫೋನ್ ಫೋಟೋಗ್ರಫಿ ಹಾಗೂ ವಿಡಿಯೋಗ್ರಫಿಯ ಒಂದು ದಿನದ ಕಾರ್ಯಾಗಾರವನ್ನು ಅಗ್ರಹಾರದ ನಟರಾಜ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಆಯೋಜಿಸಲಾಗಿತ್ತು.

ಹಿರಿಯ ಛಾಯಾಗ್ರಾಹಕ ಎಸ್.ಎಂ. ಜಂಬುಕೇಶ್ವರ ಕಾರ್ಯಾಗಾರವನ್ನು ಉದ್ಘಾಟಿಸಿ, ಶುಭ ಹಾರೈಸಿದರು.

20ಕ್ಕೂ ಹೆಚ್ಚು ಸದಸ್ಯರು ಪಾಲ್ಗೊಂಡಿದ್ದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ರಾಜಾರಾಮ್, ಜಿ.ಎಲ್. ತ್ರಿಪುರಾಂತಕ ಮೊಬೈಲ್ ಫೋನ್ ಕ್ಯಾಮೆರಾದಲ್ಲಿ ಅತ್ಯುತ್ತಮ ಚಿತ್ರಗಳನ್ನು ಸೆರೆಹಿಡಿಯುವ ಹಾಗೂ ವಿಡಿಯೋ ಮಾಡುವ ಕೌಶಲ್ಯಗಳನ್ನು ತಿಳಿಸುವುದರೊಂದಿಗೆ ಅವುಗಳನ್ನು ಎಡಿಟ್ ಮಾಡುವ ವಿಧಾನಗಳನ್ನು ಪ್ರಾತ್ಯಕ್ಷಿಕೆ ಸಮೇತ ತಿಳಿಸಿದರು. ಕಾರ್ಯಾಗಾರ ತುಂಬ ಉಪಯುಕ್ತಕಾರಿಯಾಗಿತ್ತು ಎಂದು ಭಾಗವಹಿಸಿದ್ದವರು ಅಭಿಪ್ರಾಯ ವ್ಯಕ್ತಪಡಿಸಿದರು. ಇದೇ ವೇಳೆ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಹಿಂದೂಗಳ ನಂಬಿಕೆ ಜತೆ ಚೆಲ್ಲಾಟವಾಡಬೇಡಿ

ಸಚಿವ ಮಹದೇವಪ್ಪ ವಿರುದ್ಧ ಅಶೋಕ ಕಿಡಿ

ಬೆಂಗಳೂರು: ಅಯೋಧ್ಯೆಯಲ್ಲಿ ಶ್ರೀರಾಮನ ಪ್ರತಿಷ್ಠಾಪನೆಯಾಗಿ ಒಂದು ವರ್ಷ ಕಳೆದರೂ ಕೆಲ ಕಾಂಗ್ರೆಸ್ ನಾಯಕರಿಗೆ ಈಗಲೂ ಇದನ್ನು ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ. ನಿಮ್ಮ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಹಿಂದೂಗಳ ಶ್ರದ್ಧೆ, ನಂಬಿಕೆಗಳ ಜತೆ ಚೆಲ್ಲಾಟವಾಡುವುದನ್ನು ಬಿಟ್ಟುಬಿಡಿ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ವಾಗ್ದಾಳಿ ನಡೆಸಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಸಚಿವ ಮಹಾದೇವಪ್ಪನವರೇ, ಹಿಂದೂಗಳ ಒಗ್ಗಟ್ಟು, ಸಂಭ್ರಮ ಕಂಡರೆ ನಿಮಗೆ ಯಾಕಿಷ್ಟು ಅಸೂಯೆ ಎಂದು ಪ್ರಶ್ನಿಸಿದ್ದಾರೆ.

ಆದಿಕವಿ ಮಹರ್ಷಿ ವಾಲ್ಮೀಕಿಯ ಶ್ರೀರಾಮನೇ ಬೇರೆ, ಅಯೋಧ್ಯೆಯ ಶ್ರೀರಾಮನೇ ಬೇರೆ ಎಂದು ಹೇಳಿದ್ದೀರಲ್ಲ ಹಾಗಾದರೆ ರಾಷ್ಟ್ರಕವಿ ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಕೃತಿಯಲ್ಲಿ ಬರುವ ರಾಮ ಯಾರು ವಾಲ್ಮೀಕಿಯ ರಾಮನೋ ಅಥವಾ ಅಯೋಧ್ಯೆಯ ರಾಮನೋ ಹಿಂದೂಗಳ ಒಗ್ಗಟ್ಟನ್ನು ಒಡೆಯುವ, ಹಿಂದೂ ಸಮಾಜದಲ್ಲಿ ಒಡಕು ಮೂಡಿಸುವ ಈ ಕಮ್ಯುನಿಸ್ಟ್ ಸಿದ್ಧಾಂತಗಳಿಗೆ ನವ ಭಾರತದಲ್ಲಿ ಜಾಗವಿಲ್ಲ. ಎಡಪಂಥೀಯ ವಿಚಾರಧಾರೆಯಿಂದ ಪ್ರಣೀತವಾದ ಇಂತಹ ಕಪೋಲಕಲ್ಪಿತ ಕಟ್ಟುಕಥೆಗಳನ್ನ, ವಿತಂಡವಾದವನ್ನ ನಂಬುವವರೂ ಇಲ್ಲ. ನಿಮ್ಮ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಹಿಂದೂಗಳ ಶ್ರದ್ಧೆ, ನಂಬಿಕೆಗಳ ಜೊತೆ ಚೆಲ್ಲಾಟವಾಡುವುದನ್ನ ಬಿಟ್ಟುಬಿಡಿ ಎಂದು ಅಶೋಕ್ ಕಿಡಿಕಾರಿದ್ದಾರೆ.

ಹೊತ್ತಿ ಉರಿದ 12 ಲೋಡ್ ಮೇವು

ಅಗ್ನಿಶಾಮಕ ವಾಹನ ಸಿಗದೇ ರೈತನ ಪರದಾಟ

ದಾವಣಗೆರೆ: ಜಾನುವಾರುಗಳಿಗೆ ಸಂಗ್ರಹಣೆ ಮಾಡಿದ್ದ 12 ಲೋಡ್ ರಾಗಿ ಹುಲ್ಲಿನ ಬಣವೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ, ಸಂಪೂರ್ಣ ಭಸ್ಮವಾದ ಘಟನೆ ಜಗಳೂರು ತಾಲೂಕಿನ ವ್ಯಾಸಗೊಂಡನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ತಿಪ್ಪೇಸ್ವಾಮಿ ಎನ್ನುವ ರೈತರಿಗೆ ಸೇರಿದ್ದ ರಾಗಿ ಹುಲ್ಲಿನ ಬಣವೆಯಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ ಗ್ರಾಮಸ್ಥರು ಬೆಂಕಿ ನಂದಿಸಲು ಹರ ಸಾಹಸಪಟ್ಟಿದ್ದಾರೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ.

ಬೆಂಗಳೂರಿನ ಏರ್ ಶೋಗೆ ಅಗ್ನಿಶಾಮಕ ವಾಹನಗಳು ತೆರಳಿದ್ದವು. ಇದರಿಂದ ಬೆಂಕಿ ನಂದಿಸಲು ಅಗ್ನಿಶಾಮಕ ವಾಹನಗಳು ಸಿಗದೆ ರೈತರು ಪರದಾಡಿದ್ದಾರೆ. ಅಗ್ನಿ ಅವಘಡದಿಂದ ಸುಮಾರು 2 ಲಕ್ಷ ರೂ. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಜಗಳೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಮಹಾ ಕುಂಭಮೇಳ: ಜಗತ್ತಿನಲ್ಲೇ ಅತಿ ಉದ್ದದ 300 ಕಿಮೀ ಟ್ರಾಫಿಕ್ ಜಾಮ್!

ಪ್ರಯಾಗ್‌ರಾಜ್: ಮಹಾ ಕುಂಭ ಮೇಳವು ಈಗ ಅಂತಿಮ ಹಂತದಲ್ಲಿದ್ದು, ಲಕ್ಷಾಂತರ ಭಕ್ತರು ತಮ್ಮ ವಾಹನಗಳಲ್ಲಿ ಆಗಮಿಸುತ್ತಿರುವುದರಿಂದ, ನಗರದ ಸಂಚಾರ ವ್ಯವಸ್ಥೆ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಮಹಾ ಕುಂಭ ನಗರದಿಂದ ನಗರದ ಪ್ರಮುಖ ಪ್ರದೇಶಗಳಿಗೆ ವಾಹನಗಳ ಉದ್ದನೆಯ ಸಾಲುಗಳು ರೂಪುಗೊಂಡಿದ್ದು, ಭಕ್ತರು 20 ಕಿಲೋಮೀಟರ್‌ಗಳವರೆಗೆ ನಡೆದುಕೊಂಡು ಹೋಗಬೇಕಾಗಿದೆ. ಧೂಮನ್‌ಗಂಜ್, ಚೌಫಟ್ಕಾ, ರೈಲ್ವೆ ಸ್ಟೇಷನ್ ಸಿಟಿ ಸೈಡ್, ದಾರಾಗಂಜ್ ಮತ್ತು ಬಕ್ಷಿ ಅಣೆಕಟ್ಟು ಮುಂತಾದ ಪ್ರಮುಖ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ಗಂಭೀರವಾಗಿದೆ.

ಇಷ್ಟೆಲ್ಲಾ ಇದ್ದರೂ, ಸಂಗಮದ ನಡೆಯುತ್ತಿರುವ ಕುಂಭ ಸ್ಥಾನದಲ್ಲಿ ಭಕ್ತರ ಉತ್ಸಾಹ ಕಡಿಮೆಯಾಗುತ್ತಿಲ್ಲ. ಪ್ರತಾಪಗಢದ ಮೂಲಕ ಲಕ್ಷಾಂತರ ಭಕ್ತರು ಪ್ರಯಾಗರಾಜ್ ತಲುಪುತ್ತಿದ್ದಾರೆ. ಅವರ ಪ್ರಯಾಣ ಮಾರ್ಗಗಳಲ್ಲಿಯೂ ಭಾರೀ ಸಂಚಾರ ದಟ್ಟಣೆ ಉಂಟಾಗಿದೆ. ಆದಾಗ್ಯೂ, ಭಾದೋಹಿ ಹೆದ್ದಾರಿಯಲ್ಲಿ ಸ್ವಲ್ಪ ಪರಿಹಾರ ಕಂಡುಬಂದಿದೆ. ಆದರೆ ವಾರಣಾಸಿ–

12 ಗಂಟೆಗಳಿಂದ ರಸ್ತೆ ಮಧ್ಯೆ ನಿಂತು ಭಕ್ತರ ಪರದಾಟ!



ಪ್ರಯಾಗರಾಜ್ ರಾಷ್ಟ್ರೀಯ ಹೆದ್ದಾರಿ 19ರಲ್ಲಿ ಬೆಳಿಗ್ಗೆ ಸಂಚಾರ ದಟ್ಟಣೆ ಸಾಮಾನ್ಯವಾಗಿದ್ದರೂ, ಮಧ್ಯಾಹ್ನದ ನಂತರ ಇಲ್ಲಿ ವಾಹನಗಳ ಒತ್ತಡ ಹೆಚ್ಚಾಗುವ ಸಾಧ್ಯತೆಯಿದೆ.

ಮಧ್ಯಪ್ರದೇಶದ ಜಬಲ್ಪುರದಿಂದ ಪ್ರಯಾಗ್‌ರಾಜ್‌ಗೆ 350 ಕಿ.ಮೀ ಮಾರ್ಗದಲ್ಲಿ ಭಾರೀ ಸಂಚಾರ ದಟ್ಟಣೆ ಉಂಟಾಗಿದೆ. ರಾಷ್ಟ್ರೀಯ ಹೆದ್ದಾರಿ–30ರಲ್ಲಿ ಲಕ್ಷಾಂತರ ವಾಹನಗಳು ಸಿಲುಕಿಕೊಂಡಿದೆ. ಭಕ್ತರು ನಿಧಾನವಾಗಿಯಾದರೂ ಮಹಾ ಕುಂಭ ತಲುಪಲು ಪ್ರಯತ್ನಿಸುತ್ತಿದ್ದಾರೆ. ಮೊದಲು ಜಬಲ್ಪುರದಿಂದ ಪ್ರಯಾಗ್‌ರಾಜ್‌ಗೆ ಪ್ರಯಾಣ 5 ರಿಂದ 6 ಗಂಟೆಗಳಲ್ಲಿ ಪೂರ್ಣಗೊಳ್ಳುತ್ತಿತ್ತು. ಆದರೆ ಈಗ ಈ ಸಮಯ 24 ಗಂಟೆಗಳಿಗೂ ಹೆಚ್ಚಾಗಿದೆ. ರೇವಾ ಸುತ್ತಮುತ್ತ ಅತ್ಯಂತ ಕೆಟ್ಟ ಜನದಟ್ಟಣೆ ಉಂಟಾಗಿದ್ದು, ಅಲ್ಲಿ ವಾಹನಗಳ ಉದ್ದನೆಯ ಸಾಲುಗಳು ಮತ್ತು ಭಾರೀ ಸಂಚಾರ ದಟ್ಟಣೆ ಇತ್ತು.

ಆಡಳಿತವು ಮಾರ್ಗವನ್ನು ತೆರವುಗೊಳಿಸಲು ಪ್ರಯತ್ನಗಳನ್ನು ಮಾಡುತ್ತಿದೆ. ಆದರೆ ದಟ್ಟಣೆಯ ತೀವ್ರತೆಯಿಂದಾಗಿ, ಭಕ್ತರು ಹಲವಾರು ಕಿಲೋಮೀಟರ್ ನಡೆದುಕೊಂಡು ಹೋಗಬೇಕಾಗಿದೆ. ಮಹಾ ಕುಂಭ ಮೇಳದ ಈ ಅಂತಿಮ ಹಂತದಲ್ಲಿ ಭಕ್ತರ ಉತ್ಸಾಹ ಕಡಿಮೆಯಾಗುತ್ತಿಲ್ಲ. ಆದರೆ ಸಂಚಾರ ಸಮಸ್ಯೆ ಖಂಡಿತವಾಗಿಯೂ ಅವರ ಪ್ರಯಾಣದ ಅನುಭವದ ಮೇಲೆ ಪರಿಣಾಮ ಬೀರುತ್ತಿದೆ.

ಮಹಾ ಕುಂಭಮೇಳದಿಂದಾಗಿ, ಕಾಶಿಯಲ್ಲಿಯೂ ಜನಸಂದಣಿ ಕಂಡುಬರುತ್ತಿದೆ. ಕಾಶಿಗೆ ಹೋಗುವ ಪ್ರತಿಯೊಂದು ರಸ್ತೆಯಲ್ಲೂ ವಾಹನಗಳ ಉದ್ದನೆಯ ಸಾಲುಗಳಿವೆ. ಒಂದು ನಿಮಿಷದಲ್ಲಿ 40 ದೋಣಿಗಳು ಸಹ ಘಾಟ್‌ನಿಂದ ಹೊರಡುತ್ತಿವೆ. ಫೆಬ್ರವರಿ 3 ರಿಂದ 9 ರವರೆಗೆ 35 ಲಕ್ಷಕ್ಕೂ ಹೆಚ್ಚು ಭಕ್ತರು ಕಾಶಿಯನ್ನು ತಲುಪಿದರು. ಅಯೋಧ್ಯೆಯಲ್ಲಿಯೂ ಸಹ, ಮಹಾ ಕುಂಭದ ನಂತರ, ರಾಮಲಲ್ಲಾ ದರ್ಶನ ಪಡೆಯಲು ಭಕ್ತರ ಅಪಾರ ಗುಂಪು ಸೇರಿದೆ.

ಮೈಸೂರು ಜಿಲ್ಲಾ ಔಷಧಿ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ವಿಶ್ವ ಕ್ಯಾನ್ಸರ್ ದಿನ ಆಚರಣೆ

ಪೋಸ್ಟರ್ ಬಿಡುಗಡೆಯೊಂದಿಗೆ ಮಾರಕ ರೋಗದ ಬಗ್ಗೆ ಜಾಗೃತಿ

ಮೈಸೂರು, ಫೆ.10– ಮೈಸೂರು ಜಿಲ್ಲಾ ಔಷಧಿ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ (ಎಂಡಿಸಿಡಿಡಬ್ಲ್ಯೂಎ) ವತಿಯಿಂದ ಔಷಧ ಇಲಾಖೆಯ ಸಹಯೋಗದೊಂದಿಗೆ ವಿಶ್ವ ಕ್ಯಾನ್ಸರ್ ದಿನವನ್ನು ಮೈಸೂರಿನ ವಿಜಯನಗರದ ಔಷಧ ಕಚೇರಿಯಲ್ಲಿ ಆಚರಿಸಲಾಯಿತು.

ಈ ಉಪಕ್ರಮವು ಕ್ಯಾನ್ಸರ್‌ನ ಆರಂಭಿಕ ಪತ್ತೆಹಚ್ಚುವಿಕೆ, ತಡೆಗಟ್ಟುವಿಕೆ ಮತ್ತು ಚಿಕಿತ್ಸೆ ಮೇಲೆ ಕೇಂದ್ರೀಕರಿಸಿದೆ. ಸಾರ್ವಜನಿಕ ಆರೋಗ್ಯದಲ್ಲಿ ಫಾರ್ಮಾಸಿಸ್ಟ್‌ಗಳು ಮತ್ತು ಆರೋಗ್ಯ ವೃತ್ತಿಪರರ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಈ ಕಾರ್ಯಕ್ರಮದಲ್ಲಿ ಎಂಡಿಸಿಡಿಡಬ್ಲ್ಯೂಎ ಅಧ್ಯಕ್ಷ ಕುಮಾರಸ್ವಾಮಿ, ಕಾರ್ಯದರ್ಶಿ ಅಮಾನುಲ್ಲಾ ಖಾನ್, ಸಹಾಯಕ ಔಷಧ ನಿಯಂತ್ರಕರಾದ ವಸೀಂ–ಉರ್–ರೆಹಮಾನ್ ಷರೀಫ್ ಮತ್ತು ಶ್ರೀಮತಿ ಬಿ.ವಿ. ಆಶಾಲತಾ; ಡ್ರಗ್ ಇನ್ಸ್‌ಪೆಕ್ಟರ್ ರಮೇಶ್ ಮತ್ತು ನರೇಂದ್ರಬಾಬು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜಾಗೃತಿಯನ್ನು ಹರಡುವಲ್ಲಿ ಮಹತ್ವದ ಹೆಜ್ಜೆಯಾಗಿ, ಅಸೋಸಿಯೇಷನ್ ಕ್ಯಾನ್ಸರ್ ಜಾಗೃತಿ ಪೋಸ್ಟರ್ ಅನ್ನು ಅನಾವರಣಗೊಳಿಸಿತು. ಇದು ಆರಂಭಿಕ ಎಚ್ಚರಿಕೆ ಚಿಹ್ನೆಗಳು ಮತ್ತು ತಡೆಗಟ್ಟುವ ಕ್ರಮಗಳನ್ನು ಎತ್ತಿ ತೋರಿಸುತ್ತದೆ. ಈ ಪೋಸ್ಟರ್ ಅನ್ನು ಮೈಸೂರಿನಾದ್ಯಂತ ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲಿ ಪ್ರದರ್ಶಿಸಲಾಗುತ್ತದೆ. ಸಾರ್ವಜನಿಕರಲ್ಲಿ ವ್ಯಾಪಕವಾದ ಹರಡುವಿಕೆ ಮತ್ತು ಶಿಕ್ಷಣವನ್ನು ಖಚಿತಪಡಿಸುತ್ತದೆ.

ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿ ಆರೋಗ್ಯ ವೃತ್ತಿಪರರು ಮತ್ತು ಫಾರ್ಮಾಸಿಸ್ಟ್‌ಗಳ ಸಾಮೂಹಿಕ ಜವಾಬ್ದಾರಿಯನ್ನು ಬಲಪಡಿಸುತ್ತದೆ. ಸಮುದಾಯವು ತಿಳುವಳಿಕೆಯಿಂದಿರಲು ಮತ್ತು ಆರಂಭಿಕ ಪತ್ತೆಗೆ ಆದ್ಯತೆ ನೀಡುವಂತೆ ಒತ್ತಾಯಿಸುತ್ತದೆ. ಈ ಉಪಕ್ರಮವನ್ನು ಯಶಸ್ವಿಗೊಳಿಸುವಲ್ಲಿ ನೀಡಿದ ಬೆಂಬಲಕ್ಕಾಗಿ ಎಂಡಿಸಿಡಿಡಬ್ಲ್ಯೂಎ ಅಧಿಕಾರಿಗಳು ಹಾಜರಿದ್ದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.



ಮೈಸೂರು ಜಿಲ್ಲಾ ಔಷಧಿ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ವಿಶ್ವ ಕ್ಯಾನ್ಸರ್ ದಿನಾಚರಣೆ ಕಾರ್ಯಕ್ರಮದಲ್ಲಿ ಕ್ಯಾನ್ಸರ್ ಬಗ್ಗೆ ಜಾಗೃತಿ ಪೋಸ್ಟರ್‌ಗಳನ್ನು ಬಿಡುಗಡೆಗೊಳಿಸಲಾಯಿತು.

ತಿರುಮಲ ಲಡ್ಡು ಪ್ರಸಾದ ವಿವಾದಕ್ಕೆ ಮೇಜರ್ ಟ್ವಿಸ್ಟ್; ದೇಶದ 4 ಪ್ರಮುಖ ಡೈರಿ ಮುಖ್ಯಸ್ಥರ ಬಂಧನ

ತಿರುಮಲ: ಹಿಂದೂಗಳ ಖ್ಯಾತ ಪವಿತ್ರ ಯಾತ್ರಾತಾಣ ತಿರುಪತಿ ತಿರುಮಲದಲ್ಲಿ ನಡೆದಿದೆ ಎನ್ನಲಾದ ಲಡ್ಡು ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬು ಮಿಶ್ರಣ ಪ್ರಕರಣಕ್ಕೆ ಸಂಬಂಧಿಸಿ ದಂತೆ ತನಿಖಾಧಿಕಾರಿಗಳು ನಾಲ್ವರನ್ನು ಬಂಧಿಸಿದ್ದಾರೆ.




ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ತನಿಖೆ ನಡೆಸಿದ್ದ ಹೈದರಾಬಾದ್ ವಿಭಾಗದ ಜಂಟಿ ನಿರ್ದೇಶಕ ವೀರೇಶ್ ಪ್ರಭು, ವಿಶಾಖಪಟ್ಟಣಂ ಸಿಬಿಐ ಎಸ್ಪಿ ಮುರಳೀರಾಂಬ, ವಿಶಾಖಪಟ್ಟಣಂ ಡಿಐಜಿ ಗೋಪಿನಾಥ್ ಜೆಟ್ಟಿ, ಗುಂಟೂರು ಐಜಿ ಸರ್ವಶ್ರೇಷ್ಠ ತ್ರಿಪಾಠಿ ಮತ್ತು ಎಫ್‌ಎಸ್‌ಎಸ್‌ಎಐ ಅಧಿಕಾರಿ ಸತ್ಯಕುಮಾರ್ ಪಾಂಡಾ ನೇತೃತ್ವದ ತಂಡ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಭೋಲೆ ಬಾಬಾ ಡೈರಿಯ ಮಾಜಿ ನಿರ್ದೇಶಕರಾದ ವಿಪಿನ್ ಜೈನ್ ಮತ್ತು ಪೊಮಿಲ್ ಜೈನ್ (ರೂರ್ಕಿ, ಉತ್ತರಾಖಂಡ), ವೈಷ್ಣವಿ ಡೈರಿಯ (ಪೂನಂಬಾಕ್ಕಂ) ಸಿಇಒ ಅಪೂರ್ವ ವಿನಯ್ ಕಾಂತ್ ಚಾವ್ಡಾ ಮತ್ತು ಎಆರ್ ಡೈರಿ (ದುಂಡಿಗಲ್) ಎಂಡಿ ರಾಜು ರಾಜಶೇಖರನ್ ಇವರುಗಳು ಲಡ್ಡು ಪ್ರಸಾದ ಕಲಬೆರಕೆ ಹಗರಣದಲ್ಲಿ ಬಂಧಿತರಾಗಿರುವ ಆರೋಪಿಗಳಾಗಿದ್ದಾರೆ.

ಮೂಲಗಳ ಪ್ರಕಾರ ಆರೋಪಿಗಳನ್ನು ಅಪರಾಧ ಸಂಖ್ಯೆ 470/24 ರ ಅಡಿಯಲ್ಲಿ ಬಂಧಿಸಿ ತಿರುಪತಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ತನಿಖೆಯಲ್ಲಿ ತುಪ್ಪ ಪೂರೈಕೆಯಲ್ಲಿ ಪಾಲಿಸಬೇಕಾದ ನಿಯಮಗಳ ಉಲ್ಲಂಘನೆಯಾಗಿರುವುದು ಬಹಿರಂಗವಾಗಿದೆ. ಇದರಲ್ಲಿ ಟೆಂಡರ್ ಪಡೆಯಲು ನಕಲಿ ದಾಖಲೆಗಳು ಮತ್ತು ಸ್ಟ್ಯಾಂಪ್‌ಗಳನ್ನು ಬಳಸಿರುವುದು ಕೂಡ ಸೇರಿಕೊಂಡಿದೆ. ವೈಷ್ಣವಿ ಡೈರಿಯು ಭೋಲೆ ಬಾಬಾ ಡೈರಿಯ ತುಪ್ಪ ಪೂರೈಕೆಯ ನಿಯಮಗಳನ್ನು ತಿರುಚಿರುವುದು ಬೆಳಕಿಗೆ ಬಂದಿದೆ. ವಿಚಾರಣೆಯಲ್ಲಿ ಪೂರೈಕೆಯಲ್ಲಿ ಹಲವು ವ್ಯತ್ಯಾಸಗಳು ಮತ್ತು ಸುಳ್ಳು ದಾಖಲೆಗಳನ್ನು ನೀಡಿರುವುದು ಕಂಡುಬಂದಿವೆ.

ಇತ್ತೀಚೆಗೆ, ಈ ಘಟನೆಯಲ್ಲಿ ಎಸ್‌ಐಟಿ ನಾಲ್ವರನ್ನು ಬಂಧಿಸಿತ್ತು. ಇವುಗಳಲ್ಲಿ ಎಆರ್ ಡೈರಿ, ಪರಾಗ್ ಫುಡ್ಸ್, ಪ್ರೀಮಿಯರ್ ಅಗ್ರಿ ಫುಡ್ಸ್ ಮತ್ತು ಆಲ್ಫಾ ಮಿಲ್ಕ್ ಫುಡ್ಸ್ ಸೇರಿವೆ. ಅಲ್ಲದೆ ವಿಶೇಷವಾಗಿ ತಿರುಮಲ ಲಡ್ಡು ವಿವಾದದ ಕುರಿತು ರಚಿಸಲಾದ ಎಸ್‌ಐಟಿಯಲ್ಲಿ, ಸಿಬಿಐ ಜೆಸಿ ವೀರೇಶ್ ಪ್ರಭು ತಿರುಪತಿಯಲ್ಲಿಯೇ ಇದ್ದು ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಏನಿದು ಪ್ರಕರಣ: ಇತ್ತೀಚೆಗೆ ತಿರುಪತಿ ತಿರುಮಲದಲ್ಲಿ ನೀಡುವ ಲಡ್ಡು ಪ್ರಸಾದದಲ್ಲಿ ದನದ ಕೊಬ್ಬು ಮಿಶ್ರಣ ಮಾಡಲಾಗಿದೆ ಎಂಬ ಆಘಾತಕಾರಿ ಅಂಶ ಇಡೀ ದೇಶವನ್ನೇ ಬೆಚ್ಚಿಬೀಳಿಸಿತ್ತು. ಅಲ್ಲದೆ ಶ್ರೀವಾರಿ ಭಕ್ತರ ನಂಬಿಕೆಗೆ ಘಾಸಿಗೊಳಿಸಲಾಗಿದೆ, ಹಿಂದೂ ಧರ್ಮೀಯರ ನಂಬಿಕೆಗೆ ಅಪಮಾನ ಮಾಡಲಾಗಿದೆ ಎಂದು ದೇಶಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ತಿರುಮಲದಲ್ಲಿ ಪ್ರಸಾದದ ರೂಪದಲ್ಲಿ ನೀಡುವ ಲಡ್ಡುವಿನಲ್ಲಿ ಹಸುವಿನ ಕೊಬ್ಬು ಮತ್ತು ಪ್ರಾಣಿಗಳ ತ್ಯಾಜ್ಯ ಮಿಶ್ರಣ ಮಾಡಲಾಗಿದೆ ಎಂದು ಚಂದ್ರಬಾಬು ನಾಯ್ಡು ಸರ್ಕಾರ ಆರೋಪಿಸಿತ್ತು. ಅವರು ಈ ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರ ತಿರುಮಲ ಲಡ್ಡುವಿನ ಗುಣಮಟ್ಟದ ಬಗ್ಗೆ ಕಾಳಜಿ ವಹಿಸಲಿಲ್ಲ ಎಂದು ಗಂಭೀರ ಆರೋಪ ಮಾಡಿದ್ದರು.

ಪರೀಕ್ಷಾ ಪೆ ಚರ್ಚೆ: ಸವಾಲು ಸ್ವೀಕರಿಸಿ, ಒತ್ತಡ ಕಡಿಮೆ ಮಾಡಿಕೊಳ್ಳಿ; ವಿದ್ಯಾರ್ಥಿಗಳಿಗೆ ಮೋದಿ ಪಾಠ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಸೋಮವಾರ ತಮ್ಮ ವಾರ್ಷಿಕ 'ಪರೀಕ್ಷಾ ಪೆ ಚರ್ಚಾ' ಪ್ರಸಾರದ ಎಂಟನೇ ಆವೃತ್ತಿಯ ಸಂದರ್ಭದಲ್ಲಿ ಶಾಲಾ ವಿದ್ಯಾರ್ಥಿಗಳೊಂದಿಗೆ ಮುಕ್ತವಾಗಿ ನಡೆಸಿದ ಸಂವಾದದಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪಿಸಿದರು.

ಈ ಬಾರಿ ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮವನ್ನು ದೆಹಲಿಯ ಸುಂದರ್ ನರ್ಸರಿಯಲ್ಲಿ ಚಿತ್ರೀಕರಿಸಲಾಗಿದ್ದು, ಮೋದಿ ಸುಮಾರು 35 ವಿದ್ಯಾರ್ಥಿಗಳೊಂದಿಗೆ ಮುಕ್ತ ವಾತಾವರಣದಲ್ಲಿ ಸಂವಹನ ನಡೆಸಿದರು.

ವಿದ್ಯಾರ್ಥಿಗಳಿಗೆ 'ಜ್ಞಾನ' (ಜ್ಞಾನ) ಮತ್ತು ಪರೀಕ್ಷೆಗಳು ಎರಡು ವಿಭಿನ್ನ ವಿಷಯಗಳು ಎಂದು ಹೇಳಿದ ಪ್ರಧಾನಿ ಮೋದಿ, ಮೋದಿ ಮಕ್ಕಳ ಬೆಳವಣಿಗೆಗಾಗಿ ಅವರನ್ನು ಹೊರಗೆ ಕರೆದುಕೊಂಡು ಹೋಗುವುದು ಮುಖ್ಯ. ಅವರನ್ನು ಪುಸ್ತಕಗಳ ಸೆರೆಮನೆಯಲ್ಲಿ ಬಂಧಿಸಬಾರದು ಎಂದು ಹೇಳಿದರು. ನಿಮ್ಮ ಸಮಯವನ್ನು ಸದುಪಯೋಗಪಡಿಸಿಕೊಳ್ಳಿ, ನಿಮ್ಮ ಜೀವನವನ್ನು ಸದುಪಯೋಗಪಡಿಸಿಕೊಳ್ಳಿ, ಈ ಕ್ಷಣ ನಿಮ್ಮದು ಎಂದು ಜೀವಿಸಿ. ಸಕಾರಾತ್ಮಕ ಅಂಶಗಳನ್ನು ಕಂಡುಕೊಳ್ಳಿ ಎಂದು ಪ್ರಧಾನಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಪೋಷಕರು ತಮ್ಮ ಮಕ್ಕಳನ್ನು ಪ್ರದರ್ಶನ ಮಾದರಿಗಳಾಗಿ ಬಳಸಬಾರದು. ಅವರನ್ನು ಇತರರೊಂದಿಗೆ ಹೋಲಿಸಬಾರದು ಮತ್ತು ಬದಲಿಗೆ ಅವರನ್ನು ಬೆಂಬಲಿಸಬೇಕು ಎಂದು ಮೋದಿ ಹೇಳಿದರು.

ದುರದೃಷ್ಟವಶಾತ್ ಯಾರಾದರೂ 10 ಮತ್ತು 12 ನೇ ತರಗತಿಯಲ್ಲಿ ಉತ್ತಮ ಅಂಕಗಳನ್ನು ಗಳಿಸದಿದ್ದರೆ, ಅವರ ಜೀವನ ಹಾಳಾಗುತ್ತದೆ ಎಂಬ ಸಾಮಾನ್ಯ ನಂಬಿಕೆ ಇದೆ. ನಮ್ಮ ಸಮಾಜವು ಕಡಿಮೆ ಅಂಕಗಳಿಗಾಗಿ ಮನೆಯಲ್ಲಿ ರಾದ್ಧಾಂತವನ್ನೇ ಸೃಷ್ಟಿಸುತ್ತದೆ. ನೀವು ಒತ್ತಡದಿಂದ ಹೊರಬರಬೇಕು. ಅದರ ಬಗ್ಗೆ ಚಿಂತಿಸದೆ ಸಿದ್ಧರಾಗಿ ಎಂದು ಪ್ರಧಾನಿ ಹೇಳಿದರು.

ಇನ್ನು ಪರೀಕ್ಷಾ ಪೆ ಚರ್ಚಾ ಕಾರ್ತಕ್ರಮದಲ್ಲಿ ಬಿಹಾರದ ವಿದ್ಯಾರ್ಥಿಯೊಬ್ಬರು ಪ್ರಧಾನಿ ಮೋದಿಯವರಿಗೆ ನಾಯಕತ್ವಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಕೇಳಿದರು. ಇದಕ್ಕೆ ಪ್ರಧಾನಿ ಮೋದಿ ತಮಾಷೆಯಾಗಿ, ಬಿಹಾರದ ವಿದ್ಯಾರ್ಥಿಯೊಬ್ಬರು ರಾಜಕೀಯಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಯನ್ನು ಕೇಳದೇ ಇರಲು ಸಾಧ್ಯವಿಲ್ಲ ಎಂದು ಹೇಳಿದರು. ಅಲ್ಲದೇ, ಬಿಹಾರದ ಜನರನ್ನು ಪ್ರತಿಭಾನ್ವಿತರು ಎಂದು ಮೋದಿ ಬಣ್ಣಿಸಿದರು. ನಂತರ ವಿದ್ಯಾರ್ಥಿಗಳೊಂದಿಗೆ ನಾಯಕತ್ವದ ಬಗ್ಗೆ ಮೋದಿ ಚರ್ಚಿಸಿ ನಿಮ್ಮ ನಂಬಿಕೆಯು ನಾಯಕತ್ವವನ್ನು ಬಲಪಡಿಸುತ್ತದೆ ಎಂದು ಹೇಳಿದರು. ಪರೀಕ್ಷಾ ಪೆ ಚರ್ಚಾ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಗಮನ ಸೆಳೆದ ಕೇರಳದ ವಿದ್ಯಾರ್ಥಿನಿ ಹಿಂದಿಯಲ್ಲಿ ಮಾತನಾಡಿ ಮೋದಿಗೆ ಅಚ್ಚರಿ ಮೂಡಿಸಿದರು. ಆ ಹುಡುಗಿ ತನಗೆ ಕವಿತೆ ಬರೆಯುವುದರಲ್ಲಿ ಆಸಕ್ತಿ ಇದೆ, ಹಿಂದಿಯಲ್ಲಿ ಕವಿತೆ ಬರೆಯುತ್ತೇನೆಂದು ಹೇಳಿದಳು.

ಆಹಾರ ಪದ್ಧತಿ ಮತ್ತು ಫಿಟ್‌ನೆಸ್ ಬಗ್ಗೆಯೂ ಮಾತನಾಡಿ ಮೋದಿ, ರಾಗಿಯ ಪ್ರಯೋಜನಗಳನ್ನು ಸಹ ಹೇಳಿದ ಮೋದಿ, ರೈತರ ಉದಾಹರಣೆಯನ್ನು ನೀಡುವ ಮೂಲಕ ಆರೋಗ್ಯಕರ ಆಹಾರ ಪದ್ಧತಿಯ ಬಗ್ಗೆ ಗಮನವಹಿಸಬೇಕು ಎಂದು ಹೇಳಿದರು. ಅಲ್ಲದೇ, ಮಕ್ಕಳು ತಮ್ಮ ಆಹಾರವನ್ನು 32 ಬಾರಿ ಅಗಿಯಬೇಕು. ಏನು ತಿನ್ನಬೇಕು ಮತ್ತು ಯಾವಾಗ ತಿನ್ನಬೇಕು ಎಂಬುದನ್ನು ಸಹ ತಿಳಿದುಕೊಳ್ಳಬೇಕು ಎಂದು ಹೇಳಿದರು.

ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ಮಹಾ ಕುಂಭಮೇಳ

ಪುಣ್ಯ ಸ್ನಾನದಿಂದ ಮನಸ್ಸು, ದೇಹ ಹಗುರ

ಧಾರ್ಮಿಕ ಸಭೆಯಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ

ತಿ.ನರಸೀಪುರ, ಫೆ.10– ಪುಣ್ಯ ನದಿಗಳಲ್ಲಿ ಸ್ನಾನ ಮಾಡುವುದರಿಂದ ಮನಸ್ಸು, ದೇಹ ಹಗುರವಾಗುತ್ತದೆ ಎಂದು ಆದಿ ಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ ತಿಳಿಸಿದರು.

ತಾಲೂಕಿನ ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ 13ನೇ ಮಹಾ ಕುಂಭಮೇಳದ ಧಾರ್ಮಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಉತ್ತರ ಭಾರತದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದಲ್ಲಿ ಕೋಟ್ಯಾಂತರ ಮಂದಿ ಪುಣ್ಯಸ್ನಾನ ಮಾಡಿದ್ದಾರೆ. ದಕ್ಷಿಣ ಭಾರತದ ಪ್ರಯಾಗವೆಂದೇ ಪ್ರಸಿದ್ಧಿ ಪಡೆದಿರುವ ತ್ರಿವೇಣಿ ಸಂಗಮದ ಕಾವೇರಿ, ಕಪಿಲ, ಸ್ಫಟಿಕ ಸರೋವರಗಳ ಸಂಗಮದಲ್ಲಿ 1989ರಿಂದ ಕುಂಭಮೇಳಗಳು ನಡೆಯುತ್ತಾ ಬಂದಿದ್ದು, ನಾವಿಂದು 13ನೇ ಕುಂಭಮೇಳದಲ್ಲಿ ಸಾಕ್ಷಿಯಾಗಿದ್ದೇವೆ. ಕುಂಭಮೇಳದ ಪುಣ್ಯ ನದಿಗಳಲ್ಲಿ ಕುಂಭ ಸ್ನಾನ ಮಾಡುವುದರಿಂದ ನಮ್ಮ ದೇಹಕ್ಕೆ ಔಷಧಿ ದೊರತಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಅನಾದಿ ಕಾಲದಿಂದಲೂ ಕುಂಭಮೇಳಗಳು ನಡೆಯುತ್ತಾ ಬಂದಿದ್ದು, ದಕ್ಷಿಣ ಭಾರತದಲ್ಲಿ ಈ ಕ್ಷೇತ್ರ ಪ್ರಸಿದ್ಧಿಯಾಗಿದೆ ಎಂದರು.

ಸ್ನಾನ ಮಾಡಿದಾಗ ನಮ್ಮ ದೇಹದ ನರನಾಡಿಗಳು ಸಡಿಲಗೊಂಡು ರಕ್ತ ಪರಿಚಲನೆ ಸರಾಗವಾಗಿ ನಡೆಯುತ್ತದೆ. ಸಪ್ತ ನದಿಗಳಲ್ಲಿ ಒಂದಾದ ಕಾವೇರಿಯು ಇಲ್ಲಿ ಹರಿಯುತ್ತಿದ್ದು, ಸಂಗಮದಲ್ಲಿ ಮಿಂದೆದ್ದು ನಮ್ಮ ಪಾಪ ಕರ್ಮಗಳನ್ನು ತೊಳೆದುಕೊಳ್ಳಲು ಪರಿಶುದ್ಧವಾದ ಭಕ್ತಿ ಭಾವದೊಂದಿಗೆ ಹೊಸ ಚೈತನ್ಯ ದೊಂದಿಗೆ ನಾವು ಮುಂದುವರಿಯೋಣ ಎಂದು ಕರೆ ನೀಡಿದರು.

ನಾಳೆ ಮತ್ತು ನಾಡಿದ್ದು ರಾಜ್ಯದ ವಿವಿಧೆಡೆಗಳಿಂದ ಮಠಾಧೀಶರು ಆಗಮಿಸಲಿದ್ದು, ಪುಣ್ಯ ಸ್ನಾನದಲ್ಲಿ ಭಾಗವಹಿಸಿ ತಮ್ಮೆಲ್ಲರಿಗೂ ಆಶೀರ್ವಚನ ನೀಡಲಿದ್ದಾರೆ. ಜಿಲ್ಲಾಡಳಿತ 13ನೇ ಕುಂಭಮೇಳಕ್ಕೆ ಬರುವ ಎಲ್ಲಾ ಭಕ್ತರಿಗೆ ಸಕಲ ವ್ಯವಸ್ಥೆ ಮಾಡಿದೆ ಎಂದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ಪ್ರಾಧ್ಯಾಪಕಿ ಭುವನೇಶ್ವರಿ, ಶಿವಗುಣ ದೇಶಿಕೇಂದ್ರ ಸ್ವಾಮೀಜಿ, ಪಟ್ಟಣದ ದೊರೆ ಸ್ವಾಮೀಜಿ, ನಿರೂಪಕಿ ಸೌಮ್ಯಗೌಡ, ಸಂಗೀತ ವಿದ್ವಾನ್ ಕಿರಗಸೂರು ರಾಜಪ್ಪ, ಮಲ್ಲೇಶಪ್ಪ, ಮುಖಂಡರಾದ ಚನ್ನೇಗೌಡ, ತಿರುಮಕೂಡಲು ಲಕ್ಷ್ಮಣ್ ಹಾಜರಿದ್ದರು.



ಕುಂಭಮೇಳದ ಧಾರ್ಮಿಕ ಸಭೆಯಲ್ಲಿ ಆದಿಚುಂಚನಗಿರಿ ಶಾಖಾ ಮಠದ ಸೋಮನಾಥ ಸ್ವಾಮೀಜಿ ಮಾತನಾಡಿದರು.

ತ್ರಿವೇಣಿ ಸಂಗಮದಲ್ಲಿ 1989ರಲ್ಲಿ ಮೊಟ್ಟಮೊದಲ ಬಾರಿಗೆ ಕುಂಭಮೇಳ ಪ್ರಾರಂಭವಾಗಲು ತಿರುಚ್ಚಿ ಸ್ವಾಮೀಜಿ, ಶಿವಪುರಿ ಸ್ವಾಮೀಜಿ, ಸುತ್ತೂರು ಹಾಗೂ ಆದಿ ಚುಂಚನಗಿರಿ ಶ್ರೀಮಠದ ಜಗದ್ಗುರುಗಳು ಕಾರಣರಾಗಿದ್ದಾರೆ. ಇಂತಹ ಧಾರ್ಮಿಕ ಕಾರ್ಯಕ್ರಮದಲ್ಲಿ ನಾವೆಲ್ಲರೂ ಭಾಗಿಯಾಗಿರುವುದು ಸಂತೋಷದ ವಿಷಯ. ನಾವು ಪುಣ್ಯ ಸ್ನಾನ ಮಾಡುವ ಸಂದರ್ಭ ಆಕಾಶದಲ್ಲಿ ಗರುಡ ಹಾರಾಡುತ್ತದೆ. ಇಂದಿಗೂ ಅದನ್ನು ನೋಡಲು ಸಾಧ್ಯ. ಇಂತಹ ಒಂದು ಪುಣ್ಯ ಕಾರ್ಯದಲ್ಲಿ ನಾಡಿನ ಜನತೆ ಭಾಗಿಯಾಗಿ ಭಗವಂತನ ಕೃಪೆಗೆ ಪಾತ್ರರಾಗುತ್ತಿರುವುದು ಎಲ್ಲರ ಸೌಭಾಗ್ಯ

- ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ವಾಟಾಳು ಮಠ.

ಕುಂಭಮೇಳದ ಇಂದಿನ ಕಾರ್ಯಕ್ರಮದಲ್ಲಿ ಡಿಸಿಎಂ ಡಿಕೆಶಿ ಭಾಗಿ

ತಿ.ನರಸೀಪುರ, ಫೆ.10– ಮಂಗಳವಾರ ಬೆಳಗ್ಗೆ 6ಕ್ಕೆ ಮಾಘಶುದ್ಧ ಚತುರ್ದಶಿ ಆಶ್ಲೇಷ ನಕ್ಷತ್ರ, ಪುಣ್ಯಾಹ, ನವಗ್ರಹಪೂಜೆ, ಜಪ, ನವಗ್ರಹ ಹೋಮ, ಪೂರ್ಣಾಹುತಿ. ಬೆ.11ಕ್ಕೆ ಧಾರ್ಮಿಕ ಸಭೆ ನಡೆಯಲಿದೆ. ಸಂಜೆ 4 ಗಂಟೆಗೆ ಗುಂಜಾ ನರಸಿಂಹ ಸ್ವಾಮಿ ದೇವಸ್ಥಾನ, ವಿಶ್ವಕರ್ಮ ಬೀದಿ, ಭಗವಾನ್ ಟಾಕೀಸ್ ವೃತ್ತ, ಲಿಂಕ್ ರಸ್ತೆ ಬಸ್ ನಿಲ್ದಾಣದ ಮೂಲಕ ತ್ರಿವೇಣಿ ಸಂಗಮಕ್ಕೆ ಮಂಗಳವಾದ್ಯ, ಕಲಾ ತಂಡ, ಸ್ತಬ್ಧ ಚಿತ್ರಗಳೊಂದಿಗೆ ಸ್ವಾಮೀಜಿಗಳ ಭವ್ಯ ಮೆರವಣಿಗೆ. ಸಂಜೆ 6ಕ್ಕೆ ಸುದರ್ಶನ ಪೂಜೆ, ಹೋಮ, ಪೂರ್ಣಾಹುತಿ ನಡೆಯಲಿದೆ. ಸಂಜೆ 7ಕ್ಕೆ ವಾರಣಾಸಿ ಮಾದರಿಯಲ್ಲಿ ದೀಪಾರತಿ ಕಾರ್ಯಕ್ರಮ ಇರಲಿದೆ.



ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಮಂಗಳವಾರ ಬೆಳಗ್ಗೆ 7 ಗಂಟೆಗೆ ಬೆಂಗಳೂರಿನಿಂದ ಹೊರಟು ರಸ್ತೆ ಮೂಲಕ 9 ಗಂಟೆಗೆ ತಿ.ನರಸೀಪುರಕ್ಕೆ ಆಗಮಿಸಲಿದ್ದಾರೆ. ಕುಂಭಮೇಳದ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾದ ನಂತರ ಬೆಂಗಳೂರಿಗೆ ಹಿಂತಿರುಗಲಿದ್ದಾರೆ.

ಆಕಸ್ಮಿಕ ಬೆಂಕಿ: ರಾಗಿ, ಭತ್ತದ ಹುಲ್ಲಿನ ಮೆದೆ ಭಸ್ಮ


ಒಕ್ಕಣೆ ಮಾಡಲು ಹಾಕಿದ್ದ ರಾಗಿ, ಭತ್ತದ ಹುಲ್ಲಿನ ಮೆದೆ ಸಂಪೂರ್ಣ ಭಸ್ಮವಾಗಿರುವುದು.

ಹೆಚ್.ಡಿ.ಕೋಟೆ, ಫೆ.10– ಆಕಸ್ಮಿಕ ಬೆಂಕಿ ತಗುಲಿ ಜಮೀನಿನಲ್ಲಿ ಒಕ್ಕಣೆ ಮಾಡಲು ಹಾಕಿದ್ದ ರಾಗಿ, ಭತ್ತದ ಹುಲ್ಲಿನ ಮೆದೆ ಸಂಪೂರ್ಣ ಭಸ್ಮವಾಗಿರುವ ಘಟನೆ ತಾಲೂಕಿನ ಹ್ಯಾಂಡ್‌ಪೋಸ್ಟ್ ಬಳಿಯ ಯರಳ್ಳಿ ಗ್ರಾಮದಲ್ಲಿ ನಡೆದಿದೆ.

ಯರಳ್ಳಿ ಗ್ರಾಮದ ನಿವಾಸಿ, ರೈತ ಶಿವನಂಜು ಅವರು ತಮ್ಮ ಜಮೀನಿನಲ್ಲಿ ಬೆಳೆದಿದ್ದ ಭತ್ತ, ರಾಗಿ ಫಸಲನ್ನು ಕಟಾವು ಮಾಡಿ ಒಕ್ಕಣೆ ಮಾಡಲು ಮೆದೆ ಹಾಕಿದ್ದರು. ಆದರೆ ಆಕಸ್ಮಿಕ ಬೆಂಕಿ ಕಾಣಿಸಿಕೊಂಡ ಪರಿಣಾಮ ರಾಗಿ, ಭತ್ತದ ಹುಲ್ಲಿನ ಮೆದೆ ಸಂಪೂರ್ಣ ಭಸ್ಮವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕಾಗಮಿಸಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.

ರೈತ ಶಿವನಂಜು ಮಾತನಾಡಿ, ಹ್ಯಾಂಡ್ ಪೋಸ್ಟ್‌ನಲ್ಲಿರುವ ಕೆಲ ಮದ್ಯದ ಅಂಗಡಿ ಹಾಗೂ ಬಾರ್‌ನವರು ಮದ್ಯ ಸೇವನೆ ಮಾಡಿರುವ ತ್ಯಾಜ್ಯಗಳನ್ನು ತಮ್ಮ ಜಮೀನಿನ ಬಳಿ ಸುರಿದು ಸುಟ್ಟು ಹಾಕುವುದರಿಂದ ಇಂತಹ ಘಟನೆ ನಡೆದಿದೆ. ಇಲ್ಲಿ ತ್ಯಾಜ್ಯ ಸುಡದಂತೆ ಅವರಿಗೆ ಹಲವು ಬಾರಿ ಹೇಳಿದರೂ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ಕಷ್ಟಪಟ್ಟು ಬೆಳೆದ ಬೆಳೆ ಕೈಸೇರದೆ ನಷ್ಟ ಸಂಭವಿಸುವಂತಾಗಿದೆ ಎಂದರು.

ಈ ಸಂಬಂಧ ರೈತ ಶಿವನಂಜು ಹೆಚ್.ಡಿ.ಕೋಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ವೇಳೆ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಎಂ.ಜಿ. ಸೋಮಣ್ಣ, ಅಗ್ನಿಶಾಮಕ ಅಧಿಕಾರಿ ಎಸ್.ಮಂಜು, ವೈ.ಎಂ.ಗಣೇಶ್, ಟಿ.ಎಸ್. ಸುನೀಲ್, ಹೇಮಂತ್ ಕುಮಾರ್, ಎಂ.ಸಿ.ಮುನಿಸಿದ್ದನಾಯ್ಕ, ಯಲ್ಲಪ್ಪ ಸೇರಿದಂತೆ ಸಿಬ್ಬಂದಿ ಇದ್ದರು.

ಶರಣರ ವಚನ ಸಾಹಿತ್ಯ ಸ್ಮರಿಸಬೇಕು

ತಹಸೀಲ್ದಾರ್ ಮಂಜುನಾಥ್



ವಿವಿಧ ಮಹನೀಯರ ಜಯಂತಿ ನಡೆಯಿತು.

ಹುಣಸೂರು, ಫೆ.10– ಅನುಭವ ಮಂಟಪದ ಮೂಲಕ ಚರ್ಚಿಸಿ ಶರಣರು ನೀಡಿದ ವಚನ ಸಾಹಿತ್ಯ ಸ್ಮರಿಸಬೇಕು ಎಂದು ತಹಸೀಲ್ದಾರ್ ಮಂಜುನಾಥ್ ತಿಳಿಸಿದರು.

ನಗರದ ತಾಲೂಕು ಕಚೇರಿಯಲ್ಲಿ ನಡೆದ ಮಡಿವಾಳ ಮಾಚಿದೇವರು, ಸವಿತಾ ಮಹರ್ಷಿ, ಕಾಯಕ ಶರಣರ ಜಯಂತಿ ಯಲ್ಲಿ ಮಾತನಾಡಿದ ಅವರು ಮಡಿವಾಳ ಮಾಚಿದೇವರು ಸೇರಿದಂತೆ ಎಲ್ಲಾ ಶರಣರು ಸಮಾಜದ ಸೂಕ್ಷ್ಮ ಸಂಗತಿಯನ್ನು ಒಂದೇ ಸೂರಿನಡಿ ಚರ್ಚಿಸಿ ಕಾಯಕವೇ ಕೈಲಾಸ ಎಂಬು ದನ್ನು ತೋರಿಸಿ ಕೊಟ್ಟ ಅವರ ಹೋರಾಟ ನಮಗೆ ದಾರಿ ದೀಪ. ಅವರ ಆದರ್ಶಗಳನ್ನು ನಾವು ಪಾಲಿಸಬೇಕಿದೆ ಎಂದರು.

ಕಾಯಕ ಸಮಾಜದ ತಾಲೂಕು ಅಧ್ಯಕ್ಷ ಹೊನ್ನಪ್ಪ ಮಾತನಾಡಿ, 12ನೇ ಶತಮಾನದಲ್ಲಿ ಅಸ್ಪೃಶ್ಯತೆ ತಾಂಡವವಾಡುತ್ತಿತ್ತು. ಹೀಗಾಗಿ ಬಸವಣ್ಣನವರು ಸಮಾನತೆಗೆ ಒತ್ತು ನೀಡಿ ಎಲ್ಲಾ ತಳ ಸಮುದಾಯದ ಮಹನೀಯರನ್ನು ಒಗ್ಗೂಡಿಸುವಲ್ಲಿ ಸಫಲರಾದರು. ದೇಶ ಕಟ್ಟಿದ್ದು ತಳ ಸಮಾಜದವರೇ ಆದರೂ ಇತ್ತೀಚಿನ ದಿನಗಳಲ್ಲಿ ಜನಪ್ರತಿನಿಧಿಗಳು ನಮ್ಮನ್ನೇ ಮರೆತಿದ್ದಾರೆ. ಚುನಾವಣೆ ಸಂದರ್ಭ ಮಾತ್ರ ನೆನಪಿಕೊಳ್ಳುವವರ ಬಗ್ಗೆ ನಾವು ಜಾಗೃತರಾಗಬೇಕಿದೆ ಎಂದರು.

ಸವಿತ ಸಮಾಜದ ಜಲೇಂದ್ರ ಮಾತನಾಡಿ, ಸಮಾಜದಲ್ಲಿ ಎಲ್ಲರೂ ನಮಗೆ ತಲೆ ಬಾಗುತ್ತಾರೆ. ಆದರೆ ನಾವು ಉಳ್ಳವರ ನಡುವೆ ತಲೆ ಎತ್ತಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು ಸರ್ಕಾರ ನಮ್ಮ ಸಮುದಾಯಕ್ಕೆ ಆರ್ಥಿಕ ನೆರವು ನೀಡಬೇಕು ಎಂದರು.

ಮಡಿವಾಳ ಸಂಘದ ತಾಲೂಕು ಅಧ್ಯಕ್ಷ ರವಿ ಮಾತನಾಡಿ, ಮಡಿವಾಳ ಮಾಚಿದೇವರು ವಚನಗಳ ಮೂಲಕ ಸಮಾಜ ಸುಧಾರಣೆಗೆ ಮುಂದಾದರು. ಆದರೆ ನಮ್ಮ ಸಮಾಜ ಮಾತ್ರ ಇನ್ನೂ ಒಂದು ಸ್ವಂತ ಮನೆ ಇಲ್ಲದೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದೆ. ಒಂದು ಎಕರೆ ಭೂಮಿ ಇಲ್ಲವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ತಾಪಂ ಇಓ ಹೊಂಗಯ್ಯ, ಉಪ ತಹಸೀಲ್ದಾರ್ ನರಸಿಂಹಯ್ಯ, ಸತ್ಯ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ, ಮಡಿವಾಳ ಸಂಘದ ಕಾರ್ಯದರ್ಶಿ ರಘು, ಸವಿತಾ ಸಮಾಜದ ಅಧ್ಯಕ್ಷ ಗೌರಿ ಶಂಕರ್, ನಾಡಹಬ್ಬ ಸಮಿತಿ ಜಯರಾಂ, ರಾಚಪ್ಪ, ಇದ್ದರು.

ರಮಾಬಾಯಿ ಅಂಬೇಡ್ಕರ್ ಅವರ ತ್ಯಾಗ ಸ್ಮರಣೀಯ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ



ರಮಾಬಾಯಿ ಅಂಬೇಡ್ಕರ್ ಜಯಂತಿಯನ್ನು ಧರಣಿದೇವಿ ಮಾಲಗತ್ತಿ ಉದ್ಘಾಟಿಸಿದರು.

ನಂಜನಗೂಡು, ಫೆ.10– ದೇಶಕ್ಕೆ ಸಂವಿಧಾನ ಕೊಡುಗೆ ನೀಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರಂತಹ ಮಹಾನ್ ಮಾನವತಾವಾದಿಯನ್ನು ಸಮಾಜಕ್ಕೆ ನೀಡಿದ್ದಲ್ಲದೆ, ಬಾಬಾ ಸಾಹೇಬರ ಹೋರಾಟಕ್ಕೆ ಸ್ಫೂರ್ತಿಯಾಗಿದ್ದ ರಮಾಬಾಯಿ ಅಂಬೇಡ್ಕರ್ ಅವರ ತ್ಯಾಗ ಸ್ಮರಣೀಯ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ತಿಳಿಸಿದರು.

ನಗರದ ಕನಕ ಭವನದಲ್ಲಿ ಮೈಸೂರಿನ ಅಂಬೇಡ್ಕರ್ ಸಾಹಿತ್ಯ ಅಕಾಡೆಮಿ ಹಾಗೂ ನಂಜನಗೂಡಿನ ರಮಾಬಾಯಿ ಮಹಿಳಾ ವೇದಿಕೆಯಿಂದ ಆಯೋಜಿಸಿದ್ದ ತ್ಯಾಗದ ತಾಯಿ ರಮಾಬಾಯಿ ಅಂಬೇಡ್ಕರ್ ಅವರ 127ನೇ ಜಯಂತ್ಯೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ತಮ್ಮ ಬದುಕಿನುದ್ದಕ್ಕೂ ಕಷ್ಟಗಳನ್ನೇ ಅನುಭವಿಸಿದ್ದ ರಮಾಬಾಯಿ ಅವರು ತಮ್ಮ ವೈಯಕ್ತಿಕ ನೋವು, ಸಂಕಟಗಳನ್ನು ಬದಿಗೊತ್ತಿ ಡಾ.ಬಿ.ಆರ್. ಅಂಬೇಡ್ಕರ್ ಅವರು ನಿರ್ವಹಿಸುತ್ತಿದ್ದ ದೇಶ ಕಟ್ಟುವ ಹಾಗೂ ಸಮ ಸಮಾಜ ನಿರ್ಮಿಸುವ ಕಾಯಕದ ಕಾರ್ಯಕ್ಕೆ ನೆರವಾಗಿದ್ದರು. ತನ್ನ ಕರುಳ ಕುಡಿಗಳನ್ನು ಕಳೆದುಕೊಂಡರೂ ಬಾಬಾ ಸಾಹೇಬರ ಹೋರಾಟಕ್ಕೆ ಯಾವುದೇ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಿದರು. ಅವರ ಹೋರಾಟದ ಬದುಕು ದೇಶದ ಮಹಿಳೆಯರೆಲ್ಲರಿಗೂ ಸ್ಫೂರ್ತಿಯಾಗಬೇಕು ಎಂದರು.

ಇದೇ ವೇಳೆ ಕವಿ ಡಾ.ಸಿದ್ಧಲಿಂಗಯ್ಯ ಅವರ ಪತ್ನಿ ರಮಾ ಸಿದ್ಧಲಿಂಗಯ್ಯ, ಸಾಹಿತಿ ಮುಳ್ಳೂರು ನಾಗರಾಜು ಅವರ ಪತ್ನಿ ಪುಟ್ಟಲಕ್ಷ್ಮಮ್ಮ, ಹೋರಾಟಗಾರ ಮಂಟೇಲಿಂಗಯ್ಯ ಅವರ ಪತ್ನಿ ಪುಷ್ಪವಿಕಾಶಿನಿ, ಸಾಹಿತಿ ದೇವಯ್ಯ ಹರವೆ ಅವರ ಪತ್ನಿ ಪುಷ್ಪ, ಇಂಜಿನಿಯರಿಂಗ್ ಪದವಿಯಲ್ಲಿ ಪ್ರಥಮ ರ್ಯಾಂಕ್ ಪಡೆದ ವಿದ್ಯಾರ್ಥಿನಿ ನಮ್ರತಾ ಹಾಗೂ ಸರಿಗಮಪ ಸ್ಪರ್ಧಿ ಗಾಯಕಿ ರಶ್ಮಿ ಧರ್ಮೇಂದ್ರ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಭಾರತೀಯ ಪ್ರಾದೇಶಿಕ ಸೇನಾಧಿಕಾರಿ ಲೆಫ್ಟಿನೆಂಟ್ ಭವ್ಯ ನರಸಿಂಹಮೂರ್ತಿ, ರೈತ ಹೋರಾಟಗಾರ್ತಿ ಸುನಂದಾ ಜಯರಾಮ್, ಸಮತಾ ಮಹಿಳಾ ವೇದಿಕೆ ರತಿರಾವ್, ಆಂದೋಲನ ಪತ್ರಿಕೆ ವ್ಯವಸ್ಥಾಪಕ ಸಂಪಾದಕಿ ರಶ್ಮಿಕೋಟಿ, ಮಾಜಿ ಮೇಯರ್ ಪುರುಷೋತ್ತಮ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಮಹದೇವಸ್ವಾಮಿ, ದಲಿತ ಸಂಘರ್ಷ ಸಮಿತಿ ಸಂಚಾಲಕರಾದ ಮಲ್ಲೇಶ್, ನಾರಾಯಣ್, ಜನ ಸಂಗ್ರಾಮ ಪರಿಷತ್ ಗೌರವಾಧ್ಯಕ್ಷ ವಿಜಯ್ ಕುಮಾರ್, ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್‌ಇತರರಿದ್ದರು.

ಬಹುಮಾನ ವಿತರಣೆ...


ತಿ.ನರಸೀಪುರ ತಾಲೂಕಿನ ಮುಡುಕುತೊರೆ ಜಾತ್ರಾ ಮಹೋತ್ಸವದಲ್ಲಿ ರಾಸುಗಳ ಪರಿಷೆಯಲ್ಲಿ 3ನೇ ಬಹುಮಾನ ಪಡೆದ ಮೋಹನ್ ಅವರಿಗೆ ಸಂಸದ ಸುನೀಲ್ ಬೋಸ್ ಬಹುಮಾನ ವಿತರಿಸಿದರು. ಮುಡುಕುತೊರೆ ಸಮೂಹ ದೇವಾಲಯದ ಅಧ್ಯಕ್ಷ ನಾಗರಾಜು, ತಾಪಂ ಮಾಜಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನ ಸ್ವಾಮಿ, ಮಾಜಿ ಸದಸ್ಯ ಕುಕ್ಕೂರ್ ಗಣೇಶ್ ಇದ್ದಾರೆ.

ಕಸಬಾ ಪಿಎಸಿಎಸ್‌ಗೆ ಮೂವರು ಅವಿರೋಧ ಆಯ್ಕೆ

ತಿ.ನರಸೀಪುರ, ಫೆ.10– ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಹಾಲಿ ಅಧ್ಯಕ್ಷ ಮಲ್ಲಣ್ಣ ಬಣದ ಮೂವರು ನಿರ್ದೇಶಕರು ಸೋಮವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಮುಂದಿನ 5 ವರ್ಷಗಳ ಆಡಳಿತ ಮಂಡಳಿ ನಿರ್ದೇಶಕರ ಆಯ್ಕೆಗೆ ಫೆ.16ರಂದು ಚುನಾವಣೆ ನಿಗದಿಯಾಗಿರುವ ಹಿನ್ನೆಲೆಯಲ್ಲಿ ಉಮೇದುವಾರಿಕೆ ಹಿಂಪಡೆಯಲು ಸೋಮವಾರ ಕೊನೆ ದಿನವಾಗಿತ್ತು. 2 ಮಹಿಳಾ ಮೀಸಲು ಸ್ಥಾನಗಳಲ್ಲಿ ಸ್ಪರ್ಧೆ ಬಯಸಿ ತಿರುಮಕೂಡಲು ಸಹಕಾರ ಸಂಘದ ಮಾಜಿ ಅಧ್ಯಕ್ಷ ಮಾದು ಅವರ ಪತ್ನಿ ನಾಗಮ್ಮ, ಎಂ.ನಾಗರತ್ನ ಹಾಗೂ ರತ್ನಮ್ಮ ಕಣದಲ್ಲಿದ್ದರು. ರತ್ನಮ್ಮ ನಾಮಪತ್ರ ಹಿಂಪಡೆದ್ದರಿಂದ ನಾಗಮ್ಮ ಮತ್ತು ನಾಗರತ್ನ ಅವಿರೋಧವಾಗಿ ಆಯ್ಕೆಗೊಂಡರು. ಪ.ಪಂಗಡ ಮೀಸಲು ಸ್ಥಾನಕ್ಕೆ ಪ್ರಕಾಶ್ ಕುಮಾರ್ ಅವರೊಬ್ಬರೇ ನಾಮಪತ್ರ ಸಲ್ಲಿಸಿ, ಅವಿರೋಧವಾಗಿ ಆಯ್ಕೆಯಾದರು.


ಕಸಬಾ ಪಿಎಸಿಎಸ್‌ಗೆ ನಾಗಮ್ಮ, ಎಂ.ನಾಗರತ್ನ ಹಾಗೂ ಪ್ರಕಾಶ್ ಕುಮಾರ್ ಅವಿರೋಧವಾಗಿ ಆಯ್ಕೆಗೊಂಡರು.

21 ಮಂದಿ ಅಂತಿಮ ಕಣದಲ್ಲಿ: ಸಂಘದ ಸಾಲಗಾರರ ಕ್ಷೇತ್ರದಿಂದ 8 ಮತ್ತು ಸಾಲಗಾರರಲ್ಲದ ಕ್ಷೇತ್ರದಿಂದ ಓರ್ವ ಆಯ್ಕೆಯಾಗಬೇಕಿದ್ದು, 21 ಮಂದಿ ಕಣದಲ್ಲಿದ್ದಾರೆ. ಸಾಮಾನ್ಯ ಸ್ಥಾನಗಳಲ್ಲಿ ಮಲ್ಲಣ್ಣ, ಎನ್.ಶೇಖರ್, ಟಿ.ಸಿ.ಫಣೀಶ್ ಕುಮಾರ್, ಟಿ.ಎಸ್.ಕೃಷ್ಣ, ಚಂದ್ರು, ಆರ್.ಪುಟ್ಟರಾಜು, ಎಸ್.ಮಹದೇವ, ಮಹಾಲಿಂಗಪ್ಪ, ಬಿ.ಸುಂದರಸ್ವಾಮಿ, ಪಿ.ಸ್ವಾಮಿನಾಥ್ ಹಾಗೂ ಎನ್.ಲೋಕೇಶ್ ಸ್ಪರ್ಧೆಯಲ್ಲಿದ್ದಾರೆ.

ಹಿಂದುಳಿದ ವರ್ಗ 'ಎ' ಸ್ಥಾನಕ್ಕೆ ಚಿಕ್ಕೀರೇಗೌಡ ಮತ್ತು ಬಿ.ರಾಘವೇಂದ್ರ, ಹಿಂದುಳಿದ ವರ್ಗ 'ಬಿ' ಸ್ಥಾನಕ್ಕೆ ಬಿ.ಎಂ.ಮಹದೇವಸ್ವಾಮಿ ಹಾಗೂ ಎಂ.ರಾಜಬುದ್ಧಿ, ಪ.ಜಾತಿ ಮೀಸಲು ಸ್ಥಾನಕ್ಕೆ ಬಿ.ನವೀನ್, ಸಿ.ನಾಗರಾಜಪ್ಪ ಸಿ.ಮಹದೇವ, ಎಂ.ಮಹದೇವಯ್ಯ ಮತ್ತು ಸಾಲಗಾರರಲ್ಲದ ಕ್ಷೇತ್ರದಲ್ಲಿ ಸ್ಪರ್ಧೆ ಬಯಸಿ ಟಿ.ಎನ್.ಗುರುಪ್ರಸಾದ್ ಹಾಗೂ ಬಸವರಾಜ್ ಕಣದಲ್ಲಿದ್ದಾರೆ ಎಂದು ಚುನಾವಣಾಧಿಕಾರಿ ಜೆ.ರಮೇಶ್ ತಿಳಿಸಿದ್ದಾರೆ.

ಅವಿರೋಧವಾಗಿ ಆಯ್ಕೆಗೊಂಡವರನ್ನು ಸನ್ಮಾನಿಸಿದ ಅಧ್ಯಕ್ಷ ಮಲ್ಲಣ್ಣ ಮಾತನಾಡಿದರು. ಸಂಘದ ಸಿಇಓ ಡಿ.ಎಂ.ಶಿವಕುಮಾರ್, ಕಿರಗಸೂರು ಗ್ರಾಪಂ ಅಧ್ಯಕ್ಷ ನಿಂಗರಾಜು, ಮುಖಂಡರಾದ ಲಕ್ಷ್ಮಣ, ಡಿ.ಎಲ್.ಮಹದೇವಪ್ಪ, ಪರಶಿವ, ಅಂಗಡಿ ನಾಗೇಶ್, ಸೀನಪ್ಪ, ಏಳುಮಲೆ ಮಂಜು, ಸ್ವಾಮಿ, ಬಿಳಿಗೆರೆಹುಂಡಿ ಬಸವ ರಾಜು, ಸಿ.ಎಂ.ಮಹದೇವ, ಬಸವರಾಜು, ದೇವರಾಜಪ್ಪ, ಶ್ರೀನಿವಾಸ್, ಮಹದೇವ್, ಮನ್ನೆ ಹುಂಡಿ ಚಿನ್ನಸ್ವಾಮಿ ಇತರರಿದ್ದರು.

ಅತ್ತಿಕುಪ್ಪೆ: ರೈತ ಸಂಘದ ಗ್ರಾಮ ಘಟಕ ಉದ್ಘಾಟನೆ

ಹುಣಸೂರು, ಫೆ.10– ತಾಲೂಕಿನ ಅತ್ತಿಕುಪ್ಪೆ ಗ್ರಾಮದಲ್ಲಿ ರಾಜ್ಯ ರೈತ ಸಂಘದ ಗ್ರಾಮ ಘಟಕವನ್ನು ಸೋಮವಾರ ಉದ್ಘಾಟಿಸಲಾಯಿತು.


ರಾಜ್ಯ ರೈತ ಸಂಘದ ಗ್ರಾಮ ಘಟಕ ಉದ್ಘಾಟಿಸಲಾಯಿತು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ತಾಲೂಕು ರೈತ ಸಂಘದ ಅಧ್ಯಕ್ಷ ಚಿಕ್ಕಣ್ಣ ವಹಿಸಿದ್ದರು. ಈ ವೇಳೆ ಜಿಲ್ಲಾಧ್ಯಕ್ಷ ಕುಮಾರ್, ವಿಷಕಂಠಪ್ಪ, ಈಶ್ವರ್, ಧನಂಜಯ, ಬಸವರಾಜೇಗೌಡ, ತಾಲೂಕು ಪ್ರಗತಿಪರ ಸಂಘಟನೆಯ ಕಾರ್ಯದರ್ಶಿ ರಾಮಕೃಷ್ಣ, ಗ್ರಾಮದ ಯಜಮಾನರು, ರೈತ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ಇದೇ ವೇಳೆ ಫೆ.13ರಂದು ಮೈಸೂರಿನ ಟೌನ್ ಹಾಲ್‌ನಲ್ಲಿ ಪ್ರೊ.ನಂಜುಂಡಸ್ವಾಮಿ ಅವರ ನೆನಪಿನಾರ್ಥ ನಡೆಯುವ ಕಾರ್ಯಕ್ರಮಕ್ಕೆ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ ಮಾಡಲಾಯಿತು.

ಗ್ರಾಮ ಘಟಕದ ಅಧ್ಯಕ್ಷರಾಗಿ ರವಿ, ಉಪಾಧ್ಯಕ್ಷ ಶೇಖರ್, ಪ್ರಧಾನ ಕಾರ್ಯದರ್ಶಿ ಬಸವರಾಜು, ಸಹ ಕಾರ್ಯ ದರ್ಶಿ ಮಹೇಶ, ಖಜಾಂಚಿ ಈಶ್ವರ್, ಗೌರವಾಧ್ಯಕ್ಷ ಗಣೇಶ್, ಪದಾಧಿಕಾರಿಗಳಾಗಿ ಸಿದ್ದಪ್ಪಣ್ಣ, ಶಿವಣ್ಣ, ಪ್ರಮೋದ್, ಪ್ರಕಾಶ್, ಶಿವಣ್ಣ, ಚಂದ್ರಪ್ಪ, ಲೋಕೇಶ್, ನವೀನ್ ಕುಮಾರ್, ಗಂಗಾಧರ್, ಶಂಕರ ಚಾರಿ, ಮಂಜು, ನಾಗರಾಜು, ಎನ್.ಶಿವ ರಾಜು, ನಟರಾಜು, ಸುನೀಲ್, ಶಿವಸ್ವಾಮಿ, ಮನು, ಮಹೇಂದ್ರ ಆಯ್ಕೆಯಾದರು. ಇದೇ ವೇಳೆ ಅರಸು ಕಲ್ಲಹಳ್ಳಿ ರೈತ ಶಿವಮೂರ್ತಿ ಮೈಸೂರಿನಲ್ಲಿ ನಡೆಯುವ ಕಾರ್ಯಕ್ರಮಕ್ಕೆ 5 ಸಾವಿರ ರೂ. ದೇಣಿಗೆ ನೀಡಿದರು.

ಹೈರಿಗೆ ಗ್ರಾಪಂ ಉಪಾಧ್ಯಕ್ಷರ ಆಯ್ಕೆ

ಹೆಚ್.ಡಿ.ಕೋಟೆ ತಾಲೂಕಿನ ಹೈರಿಗೆ ಗ್ರಾಪಂ ಉಪಾಧ್ಯಕ್ಷರಾಗಿ ಅನಿಲ್ ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಕೆ.ಆರ್.ನಗರ ಪಿಎಲ್‌ಡಿ ಬ್ಯಾಂಕ್ ಚುನಾವಣೆ

ಅಧಿಕಾರ ಹಿಡಿಯುವಲ್ಲಿ ಕಾಂಗ್ರೆಸ್ ಯಶಸ್ವಿ


ಪಿಎಲ್‌ಡಿ ಬ್ಯಾಂಕ್ ಚುನಾವಣೆಯಲ್ಲಿ ಆಯ್ಕೆಯಾದ ಕಾಂಗ್ರೆಸ್ ಬೆಂಬಲಿತರು ಸಂಭ್ರಮಾಚರಣೆ ನಡೆಸಿದರು.

ಕೆ.ಆರ್.ನಗರ, ಫೆ.10– ಪಟ್ಟಣದ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ 8 ನಿರ್ದೇಶಕರು ಆಯ್ಕೆಯಾಗಿದ್ದು, ಸತತ 2ನೇ ಬಾರಿಗೆ ಪಿಎಲ್‌ಡಿ ಬ್ಯಾಂಕ್ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಒಟ್ಟು 14 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಮೂವರು ಅವಿರೋಧವಾಗಿ ಆಯ್ಕೆಯಾಗಿದ್ದರು. ಸೋಮವಾರ ನಡೆದ ಮತ ಎಣಿಕೆಯಲ್ಲಿ ಐವರು ಚುನಾಯಿತರಾಗಿದ್ದು, ಇವರೊಂದಿಗೆ ನಾಲ್ವರು ಜೆಡಿಎಸ್ ಬೆಂಬಲಿತರು, ಇಬ್ಬರು ಪಕ್ಷೇತರರು ಚುನಾಯಿತರಾಗಿದ್ದಾರೆ.

ಸಾಲಗಾರರಲ್ಲದ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಿಪಂ ಮಾಜಿ ಸದಸ್ಯೆ ಪುಷ್ಪಲತಾ(283) ಮತಗಳನ್ನು ಪಡೆದು ತಮ್ಮ ಪ್ರತಿಸ್ಪರ್ಧಿ ಪುರಸಭೆ ಸದಸ್ಯ ಉಮೇಶ್ ಅವರನ್ನು 125 ಮತಗಳಿಂದ ಪರಾಭವಗೊಳಿಸಿದರು. ಉಳಿದಂತೆ ಸಾಲಗಾರರ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತರಾಗಿ ಕಣದಲ್ಲಿದ್ದ

ಕಾಂಗ್ರೆಸ್ 8, ಜೆಡಿಎಸ್ 6, ಇಬ್ಬರು ಪಕ್ಷೇತರರು ಆಯ್ಕೆ

ಕುಳ್ಳಬೋರೇಗೌಡ(55), ಚಂದ್ರೇಗೌಡ (51), ಚಂದ್ರಹಾಸ(65), ಹೆಚ್.ಕೆ.ಪ್ರದೀಪ್ ಕುಮಾರ್(56) ಆಯ್ಕೆಯಾಗಿದ್ದು, ಇವರೊಂದಿಗೆ ಜೆಡಿಎಸ್ ಬೆಂಬಲಿತರಾಗಿ ಸ್ಪರ್ಧಿಸಿದ್ದ ಎಸ್.ಎಂ.ಸೋಮಣ್ಣ (25), ದೊಡ್ಡಯ್ಯ (58), ರಮೇಶ್ ನಾಯಕ(76), ಗಾಯಿತ್ರಮ್ಮ (54) ಚುನಾಯಿತರಾಗಿದ್ದಾರೆ.

ಪಕ್ಷೇತರರಾಗಿ ಅಖಾಡದಲ್ಲಿದ್ದ ಎಂ.ಎಸ್. ಹರಿಚಿದಂಬರ(62), ಮಹೇಶ್(61) ನಿರ್ದೇಶಕರಾಗಿ ಗೆಲುವಿನ ನಗೆ ಬೀರಿದ್ದಾರೆ. ಕಾಂಗ್ರೆಸ್ ಬೆಂಬಲಿತರಾಗಿ ಮಂಗಳ ಪ್ರಸಾದ್, ಇಂದ್ರೇಶ್, ಡಿ.ಆರ್.ರಾಹುಲ್ ಅವಿರೋಧವಾಗಿ ಆಯ್ಕೆಯಾಗಿದ್ದರು.

ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ವಿತರಿಸಿ ಶಾಸಕ ಡಿ.ರವಿಶಂಕರ್, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಮತ್ತು ಕಾಂಗ್ರೆಸ್ ಪಕ್ಷದ ಪರ ಘೋಷಣೆ ಕೂಗಿ ಸಂಭ್ರಮಾಚರಣೆ ನಡೆಸಿದರು.

ಪುರಸಭಾಧ್ಯಕ್ಷ ಶಿವು ನಾಯಕ್, ಸದಸ್ಯರಾದ ನಟರಾಜು, ಶಂಕರ್ ಸ್ವಾಮಿ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ಸಿ.ಪಿ. ರಮೇಶ್ ಕುಮಾರ್, ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಎಪಿಎಂಎಸಿ ಮಾಜಿ ಅಧ್ಯಕ್ಷ ನಟರಾಜು, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎನ್.ಸಿ. ಪ್ರಸಾದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್.ಮಹದೇವ್, ಉದಯ ಶಂಕರ್, ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಜೆ. ರಮೇಶ್, ವಕ್ತಾರ ಸೈಯದ್ ಜಾಬೀರ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ, ಅರ್ಜುನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ದಿಲೀಪ್ ಕುಮಾರ್, ಕಾಂಗ್ರೆಸ್ ಮುಖಂಡರಾದ ಬಸವರಾಜು, ಆದರ್ಶ, ಕೆ.ವಿನಯ್, ಪುಟ್ಟರಾಜು, ಬಿ.ಟಿ. ಮೋಹನ್, ಉಮಾಶಂಕರ್, ಸಂಜಯ್ ತಿಲಕ್, ಸಾಗರ್ ಮತ್ತಿತರರು ನೂತನ ನಿರ್ದೇಶಕರನ್ನು ಅಭಿನಂದಿಸಿದರು.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ

ನಂಜನಗೂಡು, ಫೆ.10– ಗ್ರಾಮ ಆಡಳಿತ ಅಧಿಕಾರಿಗಳ (ಗ್ರಾಮ ಲೆಕ್ಕಾಧಿಕಾರಿ) ಹುದ್ದೆಗೆ ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿ ನಿಗದಿಪಡಿಸುವ ಜೊತೆಗೆ ಸುಸಜ್ಜಿತ ಕಚೇರಿ, ಮೂಲ ಸೌಕರ್ಯ ಕಲ್ಪಿಸುವುದು ಸೇರಿದಂತೆ ವಿವಿಧ ಭೇಡಿಕೆ ಈಡೇರಿಕೆಗೆ ಒತ್ತಾಯಿಸಿ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಪದಾಧಿಕಾರಿಗಳು ನಗರದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದರು.

ನಗರದ ತಾಲೂಕು ಕಚೇರಿ ಎದುರು ಜಮಾಯಿಸಿದ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಪದಾಧಿಕಾರಿಗಳು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮ ಆಡಳಿತ ಅಧಿಕಾರಿ ಸಂಘದ ಅಧ್ಯಕ್ಷ ನಿಂಗಯ್ಯ ಮಾತನಾಡಿ, ಗ್ರಾಮ ಆಡಳಿತ ಅಧಿಕಾರಿಗಳಿಗೆ ನಿರ್ದಿಷ್ಟ ಕೆಲಸ ನಿಗದಿಪಡಿಸದಿರುವ ಕಾರಣ ಕಂದಾಯ ಇಲಾಖೆ ಕೆಲಸದ ಜೊತೆಗೆ ಕೃಷಿ, ತೋಟಗಾರಿಕೆ ಇಲಾಖೆ ಕೆಲಸಗಳನ್ನು ವಹಿಸಲಾಗುತ್ತಿದೆ. ಜೊತೆಗೆ ನಿರ್ದಿಷ್ಟವಾದ ಕಚೇರಿ, ಪೀಠೋಪಕರಣಗಳು, ಕುರ್ಚಿಗಳ ಸೌಲಭ್ಯವಿಲ್ಲದೆ ಒತ್ತಡದ ನಡುವೆ ಕೆಲಸ ಮಾಡುತ್ತಿದ್ದೇವೆ ಎಂದರು.


ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.


ರಾಜ್ಯ ಸರ್ಕಾರ ಈ ಕೂಡಲೇ ಗ್ರಾಮ ಆಡಳಿತ ಅಧಿಕಾರಿಗಳಿಗೆ ನಿರ್ದಿಷ್ಟ ಕೆಲಸದ ಜಾಬ್ ಚಾರ್ಟ್ ನಿಗದಿಪಡಿಸಬೇಕು. ಸುಸಜ್ಜಿತ ಕಚೇರಿ ಸೇರಿದಂತೆ ಪೀಠೋಪಕರಣಗಳ ವ್ಯವಸ್ಥೆ ಕಲ್ಪಿಸಬೇಕು. ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗೆ ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿ ನಿಗದಿಪಡಿಸಬೇಕು. ಅಂತರ್ ಜಿಲ್ಲಾ ವರ್ಗಾವಣೆ ವ್ಯವಸ್ಥೆ, ಪದೋನ್ನತಿ ಕಲ್ಪಿಸಬೇಕು. ಮಾತೃ ಇಲಾಖೆಯ ಎಲ್ಲಾ ಕೆಲಸಗಳೊಂದಿಗೆ ಇತರೆ ಇಲಾಖೆಗಳ ಹಲವಾರು ಕೆಲಸಗಳನ್ನು ನಿರ್ವಹಿಸುವ ಜೊತೆಗೆ ಚುನಾವಣೆ, ಅತಿವೃಷ್ಟಿ-ಅನಾವೃಷ್ಟಿ ಇನ್ನಿತರ ಗುರುತರ ಜವಾಬ್ದಾರಿಯುತ ಕರ್ತವ್ಯ ನಿರ್ವಹಿಸುತ್ತಿರುವ ನಮಗೆ ಪೊಲೀಸ್, ಅರಣ್ಯ ಇಲಾಖೆಯಲ್ಲಿರುವಂತೆ 3 ಸಾವಿರ ಆಪತ್ತಿನ ಭತ್ಯೆ ನೀಡಬೇಕು. ಪ್ರಯಾಣ ಭತ್ಯೆ ದರವನ್ನು 500 ರೂ. ಗಳಿಂದ 5 ಸಾವಿರ ರೂ.ಗಳಿಗೆ ಹೆಚ್ಚಿಸಬೇಕು. ಜಿಲ್ಲಾ ಜೇಷ್ಠತೆಯಿಂದ ರಾಜ್ಯ ಜೇಷ್ಠತೆಗೆ ನಮ್ಮ ಹುದ್ದೆಗಳನ್ನು ಪರಿಗಣಿಸಬೇಕು. ಶಿಷ್ಟಾಚಾರ ಪದ್ಧತಿಯಿಂದ ನಮ್ಮನ್ನು ಕೈಬಿಡಬೇಕು. ರಜಾ ದಿನಗಳಲ್ಲಿ ಕರ್ತವ್ಯಕ್ಕೆ ಮೆಮೋ ಹಾಕದಂತೆ ಆದೇಶವಿದ್ದರೂ ಕೆಲವು ಜಿಲ್ಲೆಗಳಲ್ಲಿ ಸರ್ಕಾರದ ಆದೇಶ ಉಲ್ಲಂಘಿಸುತ್ತಿರುವವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಸರ್ಕಾರ ಈಡೇರಿಸುವವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದರು.

ಪ್ರತಿಭಟನೆಯಲ್ಲಿ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಕಾರ್ಯದರ್ಶಿ ಶಿವಶಂಕರ್, ಖಜಾಂಚಿ ವೆಂಕಟಪತಿ, ವಿಎ ವರುಣ್ ಸೇರಿದಂತೆ ಎಲ್ಲಾ ಗ್ರಾಮ ಆಡಳಿತ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 11 ಫೆಬ್ರವರಿ 2025

ಮುಕ್ಕಣ್ಣೇಶ್ವರ ಬಸವನಿಗೆ ದೇವಸ್ಥಾನ; ಬೃಹತ್ ವಿಗ್ರಹ ಪ್ರತಿಷ್ಠಾಪನೆಗೆ ಸಿದ್ಧತೆ

ತಮಿಳುನಾಡಲ್ಲಿ ರೂಪುಗೊಂಡಿದೆ ಬಸವನ ಬೃಹತ್ ಪ್ರತಿಮೆ



ಮುಕ್ಕಣ್ಣೇಶ್ವರನಿಗಾಗಿ ಗ್ರಾಮದಲ್ಲಿ ನಿರ್ಮಾಣವಾಗಿರುವ ದೇವಾಲಯ.




ಪ್ರತಿಷ್ಠಾಪನೆಗಾಗಿ ನಿರ್ಮಿಸಿರುವ ಗರ್ಭಗುಡಿ



ಮೂರು ಕಣ್ಣು–ಮೂರು ಕೊಂಬಿನ ಮುಕ್ಕಣ್ಣೇಶ್ವರ.



ಸಚಿವರಾಗಿದ್ದಾಗ ಸಿ.ಎಚ್.ವಿಜಯಶಂಕರ್ ಮುಕ್ಕಣ್ಣೇಶ್ವರನ ಆಶೀರ್ವಾದ ಪಡೆದಿದ್ದರು.



ಗ್ರಾಮದ ಹೆಬ್ಬಾಗಿಲಿನಲ್ಲಿರುವ ಅರಳಿಮರದ ಅಶ್ವಥಕಟ್ಟೆ

■ ಕೆ.ಕೃಷ್ಣ, ಹುಣಸೂರು

ಮೈಸೂರು ಜಿಲ್ಲೆ, ಹುಣಸೂರು ತಾಲೂಕು, ಗದ್ದಿಗೆ ಶ್ರೀ ಕೆಂಡಗಣ್ಣೇಶ್ವರ ಸ್ವಾಮಿ ಕ್ಷೇತ್ರದ ಬಳಿಯ ಸಂಜೀವನಗರದ ಮುಕ್ಕಣ್ಣೇಶ್ವರ ಬಸವ ತನ್ನ ವಿಶೇಷತೆ ಮೂಲಕ ರಾಜ್ಯದೆಲ್ಲೆಡೆ ಸುದ್ದಿ ಮಾಡಿತ್ತು. ಮೂರು ಕಣ್ಣು ಹಾಗೂ ಮೂರು ಕೊಂಬುಗಳಿದ್ದ ಬಸವ ಹಲವು ಪವಾಡಗಳಿಂದ ಮನೆ ಮಾತಾಗಿತ್ತು. ವಯೋಸಹಜವಾಗಿ ಬಸವ ಕಾಲವಾದ ಬಳಿಕ ಭಕ್ತರೆಲ್ಲಾ ಸೇರಿ ದೇವಸ್ಥಾನ ನಿರ್ಮಿಸಿ, ಪಂಚಲೋಹದ ಬೃಹತ್ ವಿಗ್ರಹ ಪ್ರತಿಷ್ಠಾಪನೆಗೂ ಮುಂದಾಗಿದ್ದಾರೆ.

ವಯೋಸಹಜವಾಗಿ ಕಾಲವಾದ ಬಸವನನ್ನು ಮೆರವಣಿಗೆ ಮಾಡಿ, ಬಳಿಕ ಊರ ಮುಂದೆ ಮಣ್ಣು ಮಾಡಿರುವ ಭಕ್ತರು, ಅದೇ ಸ್ಥಳದಲ್ಲಿ ದೇವಸ್ಥಾನ ಕಟ್ಟಿಸಿದ್ದಾರೆ. ಅಲ್ಲದೆ 800 ಕೆ.ಜಿ. ತಮಿಳುನಾಡಿನಲ್ಲಿ ಪಂಚಲೋಹದ ಮೂರು ಕಣ್ಣು ಹಾಗೂ ಮೂರು ಕೊಂಬಿನ ಬಸವನ ವಿಗ್ರಹವನ್ನು ಮಾಡಿಸಿ, ಮುಂದಿನ ಮೂರು ತಿಂಗಳೊಳಗೆ ಪ್ರತಿಷ್ಠಾಪನೆಗೆ ತಯಾರಿ ನಡೆಸಿದ್ದಾರೆ. ತಮಿಳುನಾಡಿನ ಕುಂಭಕೋಣಂ ಬಳಿಯ ಸ್ವಾಮಿಮಲೈನಲ್ಲಿರುವ ಪ್ರಸಿದ್ಧ ಕಂಚಿನ ವಿಗ್ರಹ ತಯಾರಿಕಾ ಕಂಪನಿಯಲ್ಲಿ ಈ ವಿಗ್ರಹ ತಯಾರಾಗುತ್ತಿದೆ. ರಾಜ್ಯ ಹಾಗೂ ರಾಷ್ಟ್ರಮಟ್ಟದ ಹಲವು ಪ್ರಶಸ್ತಿಗಳಿಗೆ ಭಾಜನರಾಗಿರುವ ದೇವಸೇನಾಪತಿಯ ಮಕ್ಕಳಾದ ರಾಧಾಕೃಷ್ಣ ಸ್ಥಪತಿ, ಶ್ರೀಕಂದ ಸ್ಥಪತಿ ಹಾಗೂ ಸ್ವಾಮಿನಾಥ ಸ್ಥಪತಿ ಅವರು ಮೂರು ಕಣ್ಣು–ಕೊಂಬಿನ ಬಸವನ ಪ್ರತಿಮೆಯನ್ನು ಅತ್ಯಂತ ಶ್ರದ್ಧೆಯಿಂದ ತಯಾರಿಸುತ್ತಿದ್ದಾರೆ.

ಕೋಟೆಯ ಮುದ್ದು ಕರು: ಹೆಚ್.ಡಿ.ಕೋಟೆ ತಾಲೂಕಿನ ಒಂದು ಗ್ರಾಮದಲ್ಲಿ ಜನಿಸಿದ ಮೂರು ಕಣ್ಣು ಹಾಗೂ ಮೂರು ಕೊಂಬುಳ್ಳ ಕರುವನ್ನು ಪವಾಡಪುರುಷ ಶ್ರೀ ಕೆಂಡಗಣ್ಣೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ತಂದು ಬಿಡಲಾಗಿತ್ತು. ದೇವಸ್ಥಾನದ ಆವರಣದಲ್ಲಿ ಪುಟ್ಟ–ಪುಟ್ಟ



ದೇವಾಲಯದ ಉಸ್ತುವಾರಿ ವಹಿಸಿರುವ ಸೂರ್ಯಕುಮಾರ್

ಹೆಜ್ಜೆಗಳೊಂದಿಗೆ ಓಡಾಡುತ್ತಿದ್ದ ಮುದ್ದು ಕರು ಎಲ್ಲರ ಗಮನ ಸೆಳೆಯುತ್ತಿತ್ತು. ದೇವಸ್ಥಾನದವರು ಹಾಗೂ ಭಕ್ತರು ಕರುವನ್ನು ಮುದ್ದಿಸುವುದರೊಂದಿಗೆ ವಿಶೇಷವಾಗಿ ಪೋಷಿಸಿದರು. ಆದರೆ ದಿನ ಕಳೆದಂತೆ ಗದ್ದುಗೆಯ ದೇವಸ್ಥಾನಕ್ಕೆ ಸಮೀಪದ ಸಂಜೀವನಗರದ ಜಮೀನುಗಳಲ್ಲಿ ಹೆಚ್ಚು ಸಮಯ ಕಳೆಯಲಾರಂಭಿಸಿತು. ಬೆಳೆಗೆ ಹಾನಿ ಮಾಡದೇ ಓಡಾಡಿಕೊಂಡಿದ್ದ ಕರುವಿಗೆ ಗ್ರಾಮದ ಜನ ಪ್ರೀತಿಯಿಂದ ಆಹಾರ ನೀಡಿ, ಸಲಹಿದರು. ಮುಕ್ಕಣ್ಣು ಹಾಗೂ ಮೂರು ಕೊಂಬುಗಳಿದ್ದ ಕಾರಣ ಆ ಕರುವನ್ನು ಪೂಜ್ಯ ಭಾವನೆಯೊಂದಿಗೆ ಕಾಣುತ್ತಿದ್ದರು. ಗ್ರಾಮದಲ್ಲೆಲ್ಲಾ ಓಡಾಡಿಕೊಂಡಿದ್ದ ಕರು, ಅಲ್ಲಿನ ಮಾರಮ್ಮನ ದೇವಸ್ಥಾನದ ಬಳಿ ವಿರಮಿಸುತ್ತಿತ್ತು. ಹೀಗೆ ಮುದ್ದಾದ ಕರು ಪೂಜ್ಯ ಬಸವನಾಗಿ ಜನಮಾನಸದಲ್ಲಿ ಉಳಿಯಿತು.

ಅಪಾರ ನಂಬಿಕೆ: ಗದ್ದಿಗೆಯ ಕೆಂಡಗಣ್ಣೇಶ್ವರ ಸ್ವಾಮಿ ದೇವಸ್ಥಾನಕ್ಕೆ ಬರುವ ಭಕ್ತರು ಸಂಜೀವನಗರಕ್ಕೆ ತೆರಳಿ ಈ ಬಸವನ ದರ್ಶನ ಪಡೆಯುತ್ತಿದ್ದರು. ಬಾಯಿಂದ ಬಾಯಿಗೆ ರಾಜ್ಯದೆಲ್ಲೆಡೆ ಬಸವನ ಪ್ರಸಿದ್ಧಿ ಪಸರಿಸಿತು. ದೂರದೂರುಗಳಿಂದ ಭಕ್ತರು ಬಸವನ ದರ್ಶನಕ್ಕೆ ಬರಲಾರಂಭಿಸಿದರು. ಬಸವನ ಮುಂದೆ ನಿಂತು ಭಕ್ತಿಯಿಂದ ಸಂಕಲ್ಪ ಮಾಡಿಕೊಂಡರೆ ಆ ಬೇಡಿಕೆ ಈಡೇರುತ್ತದೆ. ಮುಕ್ಕಣ್ಣೇಶ್ವರ ಬಸವ ಓಡಾಡಿದ ಜಮೀನಿನಲ್ಲಿ ಉತ್ತಮ ಬೆಳೆ ಸಿಗುತ್ತದೆ. ಮನೆ ಬಳಿ ಬಂದು ಹೋದರೆ ಆರ್ಥಿಕ ಸುಧಾರಣೆ ಆಗುತ್ತದೆ ಎಂಬ ಅಪಾರ ನಂಬಿಕೆ ಭಕ್ತರಲ್ಲಿತ್ತು.

ಮುಕ್ಕಣ್ಣ ಬಸವನ ಪವಾಡ: ವ್ಯಕ್ತಿಯೊಬ್ಬ ತನ್ನ ಜಮೀನಿನಲ್ಲಿ ಓಡಾಡುತ್ತಿದ್ದ ಬಸವನಿಗೆ ಕೋಲಿನಿಂದ ಹೊಡೆದು, ಬೆಳೆ ಹಾಳಾಯಿತೆಂದು ಬೈಯ್ದಿದ್ದನಂತೆ. ಅದಾಗಿ ಕೆಲವೇ ದಿನಗಳಲ್ಲಿ ಆತ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದ. ಕಷ್ಟದ ಮೇಲೆ ಕಷ್ಟ ಎದುರಾಗಿ ಆ ಜಮೀನು ಹಾಗೂ ಮನೆಯನ್ನೂ ಮಾರಾಟ



ಕುಂಭಕೋಣಂನಲ್ಲಿ ಸಿದ್ಧವಾಗುತ್ತಿರುವ ಮುಕ್ಕಣ್ಣ ಬಸವನ ವಿಗ್ರಹ

ಮಾಡಿ, ಊರನ್ನೇ ತೊರೆದ. ನಂತರ ತನ್ನ ತಪ್ಪಿನ ಅರಿವಾಗಿ ಊರಿಗೆ ಬಂದು ಬಸವನ ಪಾದಗಳನ್ನಿಡಿದು ಬೇಡಿಕೊಂಡ. ಬುದ್ಧಿಗೆ ಮಂಕು ಬಡಿದು ತಪ್ಪು ಮಾಡಿದೆ, ಕ್ಷಮಿಸು ಎಂದು ಕಣ್ಣೀರು ಹಾಕಿದ. ಬಳಿಕ ಆತನ ಮನೆಯ ಪರಿಸ್ಥಿತಿ ಸುಧಾರಿಸಿತು. ಈ ಘಟನೆ ನಂತರ ಬಸವನ ಮೇಲಿನ ನಂಬಿಕೆ ಮತ್ತಷ್ಟು ಹೆಚ್ಚಾಯಿತು. ಬಳಿಕವೂ ಈ ರೀತಿಯ ಹಲವು ಪವಾಡಗಳು ನಡೆದಿವೆ ಎಂದು ಭಕ್ತರು ಸ್ಮರಿಸಿಕೊಳ್ಳುತ್ತಾರೆ. ನಿಂತಿರುವ ಭಂಗಿಯ ಬಸವನ ವಿಗ್ರಹಕ್ಕೆ ಸುಮಾರು 27 ಲಕ್ಷ ರೂ. ವೆಚ್ಚವಾಗುತ್ತಿದೆ. ಶೀಘ್ರದಲ್ಲೇ ದೇವಾಲಯದಲ್ಲಿ ಪ್ರತಿಷ್ಠಾಪಿಸಿ, ಪ್ರತೀ ವರ್ಷ ಈ ಮುಕ್ಕಣ್ಣ ಬಸವನ ಪುಣ್ಯತಿಥಿಯಂದು ವಿಶೇಷ ಪೂಜೆ ಹಾಗೂ ಭಕ್ತರಿಗೆ ಅನ್ನದಾನ ಮಾಡಲು ಯೋಜಿಸಲಾಗಿದೆ.

ದೈವ ಕ್ಷೇತ್ರವಾಗಲಿದೆ ಗ್ರಾಮ: ನಾಲ್ಕೂವರೆ ದಶಕಗಳ ಹಿಂದೆ ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ಮಂಡ್ಯ ಜಿಲ್ಲೆಯಿಂದ ಬಂದ ಕೆಲವು ಕುಟುಂಬಗಳು ಶ್ರೀಕ್ಷೇತ್ರ ಕೆಂಡಗಣ್ಣಸ್ವಾಮಿ ಗದ್ದಿಗೆಯಿಂದ ಎರಡ್ಮೂರು ಕಿ.ಮೀ. ದೂರದಲ್ಲಿನ ಸರ್ಕಾರಿ ಜಾಗದಲ್ಲಿ ನೆಲೆಗೊಂಡರು. ಆ ಸ್ಥಳ ಮುಂದೆ ಸಂಜೀವನಗರ ಗ್ರಾಮವಾಯಿತು. ಅದನ್ನು ಮಂಡ್ಯ ಶೆಡ್ ಎಂತಲೂ ಗುರುತಿಸಲಾಗುತ್ತದೆ. ಈ ಗ್ರಾಮ ಇದೀಗ ಮುಕ್ಕಣ್ಣು ಬಸವನ ಪುಣ್ಯ ಕ್ಷೇತ್ರವಾಗುವ ಹಂತದಲ್ಲಿದೆ.

ಮೇಘಾಲಯ ರಾಜ್ಯಪಾಲರಾದ ಸಿ.ಹೆಚ್.ವಿಜಯಶಂಕರ್ ಅವರ ಆಪ್ತ, ಬಿಜೆಪಿ ಮುಖಂಡ, ರಾಜ್ಯ ಹಾಪ್‌ಕಾಮ್ಸ್ ಬೆಳೆಗಾರರ ಸಂಘದ ಉಪಾಧ್ಯಕ್ಷ ಸೂರ್ಯಕುಮಾರ್ ಗ್ರಾಮಸ್ಥರೊಂದಿಗೆ ಚರ್ಚಿಸಿದ ನಂತರ ಎಲ್ಲರೂ ಒಗ್ಗೂಡಿ ಮುಕ್ಕಣ್ಣು ಬಸವನ ದೇವಾಲಯ ನಿರ್ಮಿಸಿ, ವಿಗ್ರಹ ಪ್ರತಿಷ್ಠಾಪನೆಗೂ ಸಿದ್ಧತೆ ನಡೆಸಲಾಗಿದೆ. ಸಿ.ಹೆಚ್.ವಿಜಯಶಂಕರ್ ಶಾಸಕ ಹಾಗೂ ಸಚಿವರಾಗಿದ್ದಾಗ ಈ ಬಸವನ ಆಶೀರ್ವಾದ ಪಡೆದ ನಂತರ ಸಾಕಷ್ಟು ಸುಧಾರಣೆ ಆಗಿತ್ತು ಎಂದು ದೇವಾಲಯ ನಿರ್ಮಾಣದ ಉಸ್ತುವಾರಿ ಹೊತ್ತಿರುವ ಸೂರ್ಯಕುಮಾರ್ ತಿಳಿಸಿದ್ದಾರೆ. ಒಟ್ಟಾರೆ ಮುಂದಿನ ದಿನಗಳಲ್ಲಿ ಶ್ರೀಕ್ಷೇತ್ರ ಕೆಂಡಗಣ್ಣಸ್ವಾಮಿ ಗದ್ದಿಗೆಗೆ ಬರುವ ಭಕ್ತರು, ಸಂಜೀವನಗರದ ಮುಕ್ಕಣ್ಣ ಬಸವ ದೇವಾಲಯಕ್ಕೂ ತೆರಳಿ ಪೂಜೆ ಸಲ್ಲಿಸುವಂತಾಗುತ್ತದೆ ಎಂದು ಗ್ರಾಮಸ್ಥರಾದ ಕೆಂಡೇಗೌಡ, ವೆಂಕಟೇಶ್, ಹೇಮಸ್ವಾಮಿ ಸಂತಸ ವ್ಯಕ್ತಪಡಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಡಾಕು ಮಹಾರಾಜ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಂಡೇಲ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ತಲ್ವಾರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಾಕು ಮಹಾರಾಜ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ರಾ.7.05ಕ್ಕೆ, ವಿದ್ದಾಮುಯರ್ಚಿ (ತ): ರಾ.10ಕ್ಕೆ.
ಸ್ಕ್ರೀನ್ 3	ಛೂ ಮಂತರ್ (ಕ): ಬೆ.10.45ಕ್ಕೆ, ರಾ.7.15ಕ್ಕೆ, ಕಾಡು ಮಲ್ಲೆ (ಕ): ಮ.1.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ಪೊನ್ಮನ್ (ಮ): ರಾ.10.15.
ಸ್ಕ್ರೀನ್ 4	ಮ್ಯಾಕ್ಸ್ (ಕ): ಮ.1ಕ್ಕೆ, ದೇವ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರಮ, ಶ್ರದ್ಧೆ, ಶಕ್ತಿಗೆ ಹೆಚ್ಚು ಗಮನ ನೀಡಿ

ಕಾಯಕ ಶರಣರ ಜಯಂತಿ ಉದ್ಘಾಟಿಸಿದ ಶಾಸಕ ಡಾ.ಡಿ.ತಿಮ್ಮಯ್ಯ ಅಭಿಮತ



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ, ಕಾಯಕ ಶರಣರ ಜಯಂತಿ ಕಾರ್ಯಕ್ರಮವನ್ನು ವಿಧಾನಪರಿಷತ್ ಶಾಸಕ ಡಿ.ತಿಮ್ಮಯ್ಯ ಉದ್ಘಾಟಿಸಿದರು.

ಮೈಸೂರು, ಫೆ.10– ಸಂಪ್ರದಾಯಗಳ ಮೂಢನಂಬಿಕೆಗಳಿಗೆ ಒಳಗಾಗದೆ ಶ್ರಮ, ಶ್ರದ್ಧೆ ಹಾಗೂ ಶಕ್ತಿಗೆ ಹೆಚ್ಚು ಗಮನ ನೀಡಿ, ಅಂಧಕಾರಕ್ಕೆ ಒಳಗಾಗದೆ ಮೂಢನಂಬಿಕೆಯಿಂದ ಹೊರಬಂದು ಪ್ರತಿಯೊಬ್ಬರು ಮುಂದೆ ಬರಬೇಕು ಎಂದು ವಿಧಾನಪರಿಷತ್ ಶಾಸಕ ಡಾ.ಡಿ.ತಿಮ್ಮಯ್ಯ ಹೇಳಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕರ್ನಾಟಕ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಹಮ್ಮಿಕೊಂಡಿದ್ದ, ಕಾಯಕ ಶರಣರ ಜಯಂತಿ ಉದ್ಘಾಟಿಸಿ ಮಾತನಾಡಿದರು. ಸರ್ಕಾರ ಇಂತಹ ಕಾರ್ಯಕ್ರಮವನ್ನು ನಡೆಸುತ್ತಾ ಬರುತ್ತಿರುವುದು ಒಂದು ಒಳ್ಳೆಯ ಕೆಲಸವಾಗಿದೆ. ಸಂವಿಧಾನದ ಕಳಕಳಿಯನ್ನು 900 ವರ್ಷಗಳ ಹಿಂದೆ ಬಸವೇಶ್ವರರ ದಿವ್ಯ ಸಾನ್ನಿಧ್ಯದಲ್ಲಿ ಅಲ್ಲಮ್ಮ ಪ್ರಭು ಅವರ ಅಧ್ಯಕ್ಷತೆಯಲ್ಲಿ ಅನುಭವ ಮಂಟಪದಲ್ಲಿ ಈ ಎಲ್ಲಾ ಶರಣರು ನಮಗೆ ತಿಳಿಸಿದ್ದಾರೆ ಎಂದು ಹೇಳಿದರು.

ನಮ್ಮ ಸಂವಿಧಾನದಲ್ಲಿ ಸಮಾನತೆ, ಸೌಹಾರ್ದತೆ, ಭ್ರಾತೃತ್ವವನ್ನು ಪ್ರಜೆಗಳಿಂದ ಪ್ರಜೆಗಳಿಗಾಗಿ ಎಂಬ ಪ್ರಜಾ ಸರ್ಕಾರವನ್ನು ಡಾ.ಬಿ.ಆರ್ ಅಂಬೇಡ್ಕರ್ ಅವರು ನಮಗೆ ಕೊಡುಗೆಯಾಗಿ ನೀಡಿದ್ದಾರೆ. ಅದೇ ರೀತಿ ವಚನಕಾರರು ನಮಗೆ ಕೊಟ್ಟಿರುವ ವಚನ, ಸಾಹಿತ್ಯ ಗಳಂತಹ ಕೊಡುಗೆ ಅಪಾರವಾಗಿವೆ ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು ಮಾತನಾಡಿ, ಕೆಲವರ ಜಯಂತಿಗಳನ್ನು ಅವರ ಹುಟ್ಟುಹಬ್ಬವಾಗಿ ಆಚರಣೆ ಮಾಡುತ್ತೇವೆ. ಆದರೆ ಕಾಯಕ ಶರಣ ಜಯಂತಿಯನ್ನು ಒಂದು ತತ್ವದ ಆಧಾರದ ಮೇಲೆ ಆಚರಿಸುತ್ತಿದ್ದೇವೆ. ಇಡೀ ಜಗತ್ತಿಗೆ ಯಾವುದಾದರೂ ಬೆಳಕಿನ ರೂಪದಲ್ಲಿ ಮಾರ್ಗದರ್ಶನವನ್ನು ನೀಡುತ್ತದೆ ಎಂದರೆ ಅದೇ ಕಾಯಕ ತತ್ವ ಎಂದು ಹೇಳಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಇತಿಹಾಸದ ಚರಿತ್ರೆಯನ್ನು ಪುನರ್‌ನಿರ್ಮಾಣ ಮಾಡಬೇಕು ಎಂಬ ನಿಟ್ಟಿನಲ್ಲಿ ಈ ರೀತಿಯ ಕಾರ್ಯಕ್ರಮವನ್ನು ನಡೆಸುತ್ತಾ ಬರುತ್ತಿದ್ದೇವೆ. ಇಂತಹ ಐದು ಜನ ಮಹನೀಯರು ಬರೀ ಕರ್ನಾಟಕಕ್ಕೆ ಮಾತ್ರ ಸೀಮಿತವಾಗದೆ ಇಡೀ ದೇಶಕ್ಕೆ ಒಂದು ಹೊಸ ಮಾದರಿಯನ್ನು ಕೊಟ್ಟಿದ್ದಾರೆ ಎಂದು ಹೇಳಿದರು.

101 ಶರಣರ ಚಿಂತನೆಗಳು ಮೌಢ್ಯತೆಯಿಂದ ಕೂಡಿದ ಭಾರತಕ್ಕೆ, ಅಜ್ಞಾನಕ್ಕೇ ಸವಾಲನ್ನು ಹಾಕಿ ಒಂದು ದೊಡ್ಡ ಚರಿತ್ರೆಯನ್ನು ನೀಡಿ ಜ್ಞಾನಕ್ಕೆ, ಸುಜ್ಞಾನಕ್ಕೆ ಮಾರ್ಗ ದರ್ಶಕರಾಗಿದ್ದಾರೆ ಎಂದು ಹೇಳಿದರು. ಈ ದೇಶದ ಇತಿಹಾಸವನ್ನು ಬದಲಾವಣೆ ಮಾಡಿರುವುದು ಜಾತಿಯ ಸಂಕೋಲೆಯನ್ನು ತೊಡೆದು ಹಾಕಿರುವುದು ಇವರ ಕಾಯಕದ ಮೂಲಕ. ಕಾಯಕ ಎಂಬುದು ಈ ದೇಶದಲ್ಲಿ ಹುಟ್ಟಿರುವುದು ಇವರಿಂದ ಮಾತ್ರ ಎಂದರು.

ಉರಿಲಿಂಗ ಪೆದ್ದಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ಜಯಂತಿಗಳನ್ನು ಸಾಮರಸ್ಯ ಮತ್ತು ಸಮಾನತೆ ಎಂಬ ಉದ್ದೇಶದಿಂದ ನಾವು ಈ ನಡೆಸುತ್ತಾ ಬರುತ್ತಿದ್ದೇವೆ. ಜಯಂತಿಗಳು ಜಾತಿಗಳಾಗಿ ಮಾರ್ಪಟ್ಟರೆ ದೇಶಕ್ಕೆ, ನಾಡಿಗೆ ಅಪಾಯವಾಗುತ್ತದೆ. ಯಾವುದೇ ಜಯಂತಿಗಳು ಜಾತಿಯ ಜಯಂತಿಗಳಾಗಬಾರದು ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ನಾರಾಯಣ, ಮುಖಂಡರಾದ ಯಡತೊರೆ ನಿಂಗರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಶಿಲೆಯ ಕಲೆಯಲ್ಲಿ ಅರಳುತ್ತಿದೆ ಸಂವಿಧಾನ ಪೀಠಿಕೆ

- ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಕಲಾ ಕೌಶಲದಲ್ಲಿ ಕೆತ್ತನೆ
- ರಾಜಸ್ಥಾನದ ರೆಡ್ ಸ್ಯಾಂಡ್ ಸ್ಟೋನ್ ಬಳಕೆ
- ಪುರಭವನದ ಬಾಬಾ ಸಾಹೇಬರ ಪ್ರತಿಮೆ ಸನಿಹದಲ್ಲೇ ಅನಾವರಣ



ಮೈಸೂರಿನ ಪುರಭವನದ ಆವರಣದಲ್ಲಿ ರಾಜಸ್ಥಾನದ ರೆಡ್ ಸ್ಯಾಂಡ್ ಸ್ಟೋನ್‌ನಲ್ಲಿ ಕೆತ್ತನೆಗೊಂಡು ಅನಾವರಣಕ್ಕೆ ಸಜ್ಜುಗೊಂಡಿರುವ ಸಂವಿಧಾನ ಪೀಠಿಕೆಯ ಶಿಲೆಯನ್ನು ಚಿತ್ರದಲ್ಲಿ ಕಾಣಬಹುದು.

"ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿ ಸೇರಿದಂತೆ ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸಂವಿಧಾನ ಪೀಠಿಕೆಯನ್ನು ಶಿಲೆಯಲ್ಲಿ ಕೆತ್ತಿಸಿ ಅನಾವರಣ ಮಾಡಬೇಕೆಂದು ರಾಜ್ಯ ಸರ್ಕಾರ ಆದೇಶಿಸಿ ಅನುದಾನ ಕಲ್ಪಿಸಿದೆ. ಅದರಂತೆ ಮೈಸೂರಿನಲ್ಲಿ ಸಮಾಜ ಕಲ್ಯಾಣ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ನಿರ್ದೇಶನದಲ್ಲಿ ಪುರಭವನ ಆವರಣ ಸೂಕ್ತವೆಂದು ಆಯ್ಕೆ ಮಾಡಿಕೊಳ್ಳಲಾಯಿತು. ನಿರ್ಮಿತಿ ಕೇಂದ್ರದಿಂದ ಇಲ್ಲಿನ ಪೀಠದ ನವೀಕರಣ ಕಾಮಗಾರಿ ನಡೆಯುತ್ತಿದೆ. ಮೂಲ ಸಂವಿಧಾನ ಪೀಠಿಕೆಯ ಶೈಲಿಯಲ್ಲಿಯೇ ಶಿಲೆಯಲ್ಲಿಯೂ ಕೆತ್ತನೆ ಮಾಡಿಸಲಾಗಿದೆ. ಪೀಠದ ನವೀಕರಣ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಆದಷ್ಟು ಶೀಘ್ರದಲ್ಲಿ ಶಿಲೆಯ ಸಂವಿಧಾನ ಪೀಠಿಕೆಯ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗುವುದು.

–ಬಿ.ರಂಗೇಗೌಡ, ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು



ಮೈಸೂರು,ಫೆ.10(ಪಿಎಂ)– ಶಿಲೆಯಲ್ಲಿ ಕಲೆಯಾಗಿ ಭಾರತದ ಸಂವಿಧಾನ ಪೀಠಿಕೆ ನಗರದಲ್ಲಿ ಅರಳುತ್ತಿದೆ. ಪುರಭವನದ ಆವರಣದಲ್ಲಿರುವ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ ಪಕ್ಕದಲ್ಲಿಯೇ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರ ಕಲಾ ಕೌಶಲದಲ್ಲಿ 'ರೆಡ್ ಸ್ಯಾಂಡ್ ಸ್ಟೋನ್‌ನಲ್ಲಿ (ಕೆಂಪು ಮರಳಿನ ಕಲ್ಲು)' ಕೆತ್ತನೆಗೊಂಡಿರುವ ಸಂವಿಧಾನ ಪೀಠಿಕೆ ಶೀಘ್ರದಲ್ಲಿ ಅನಾವರಣಗೊಳ್ಳಲಿದೆ.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೈಸೂರಿನ ಪುರಭವನ ಆವರಣದಲ್ಲಿ ಸಂವಿಧಾನ ಪೀಠಿಕೆಯನ್ನು ಶಿಲೆಯಲ್ಲಿ ಸಜ್ಜುಗೊಳಿಸಲಾಗುತ್ತಿದೆ. ಈ ಹಿಂದೆ ಇಲ್ಲಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಯ ಪೀಠವನ್ನೇ ನವೀಕರಣ ಮಾಡುತ್ತಿದ್ದು, ಇದೇ ಪೀಠದ ಮೇಲೆ ಈಗಾಗಲೇ ಅರುಣ್ ಯೋಗಿರಾಜ್ ಅವರ ಕೆತ್ತನೆಯಿಂದ ಶಿಲೆಯಲ್ಲಿ ಅರಳಿರುವ ಸಂವಿಧಾನ ಪೀಠಿಕೆಯನ್ನು ಅಳವಡಿಸಲಾಗಿದೆ.

2017ರಲ್ಲಿ ಪುರಭವನದ ಆವರಣದಲ್ಲಿ ಗುಮ್ಮಟ ಒಳಗೊಂಡಂತೆ ಸ್ಥಾಪಿಸಿದ ಬಾಬಾ ಸಾಹೇಬರ ನೂತನ ಪ್ರತಿಮೆ ಉದ್ಘಾಟನೆಗೊಂಡಿತು. ಬಳಿಕ ನೂತನ ಪ್ರತಿಮೆ ಸಮೀಪದಲ್ಲೇ ಇದ್ದಂತಹ ಅಂಬೇಡ್ಕರ್ ಅವರ ಮತ್ತೊಂದು ಪ್ರತಿಮೆಯನ್ನು ಟಿ.ನರಸೀಪುರ ತಹಸೀಲ್ದಾರ್ ಅವರ ಕಚೇರಿ ಆವರಣದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು. ಅಂದಿನಿಂದ ಈ ಹಿಂದೆ ಇದ್ದಂತಹ ಪ್ರತಿಮೆಯ ಪೀಠವು ಖಾಲಿ ಉಳಿದಿತ್ತು. ಇದೀಗ ಇದರ ನವೀಕರಣ ಕಾಮಗಾರಿ ಮಾಡಲಾಗುತ್ತಿದ್ದು, ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಇದೇ ಪೀಠದ ಮೇಲೆ ಶಿಲೆಯಲ್ಲಿ ಕೆತ್ತಿರುವ ಸಂವಿಧಾನ ಪೀಠಿಕೆ ಸಹ ತಲೆ ಎತ್ತುತ್ತಿದೆ.

ಪುರಭವನ ಆವರಣದಲ್ಲಿ ಈಗಿರುವ ಅಂಬೇಡ್ಕರ್ ಅವರ ನೂತನ ಪ್ರತಿಮೆಯ ಶಿಲ್ಪಿ ಕೂಡ ಅರುಣ್ ಯೋಗಿರಾಜ್ ಅವರೇ ಆಗಿದ್ದು, ಅವರಿಂದಲೇ ಶಿಲೆಯ ಸಂವಿಧಾನ ಪೀಠಿಕೆ ಸಹ ಕೆತ್ತನೆಗೊಂಡಿರುವುದು ವಿಶೇಷ. ಪೀಠದ ನವೀಕರಣ ಕಾಮಗಾರಿ ಹೊರತಾಗಿ ಅಂದಾಜು 15 ಲಕ್ಷ ರೂ. ವೆಚ್ಚದಲ್ಲಿ ಸಂವಿಧಾನ ಪೀಠಿಕೆಯ ಶಿಲೆ ಅನಾವರಣಗೊಳ್ಳುತ್ತಿದೆ.

ರಾಜಸ್ಥಾನದಿಂದ ತಂದಿರುವ ರೆಡ್ ಸ್ಯಾಂಡ್ ಸ್ಟೋನ್‌ನಲ್ಲಿ ಅರುಣ್ ಯೋಗಿರಾಜ್ ಸಂವಿಧಾನ ಪೀಠಿಕೆಯನ್ನು ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿಯೂ ಕೆತ್ತನೆ ಮಾಡಿದ್ದಾರೆ. ಒಂದೇ ಬದಿಯಲ್ಲಿ (ಅಶೋಕ ರಸ್ತೆಯತ್ತ ಕಾಣುವಂತೆ) ಮೇಲ್ಭಾಗದಲ್ಲಿ ಕನ್ನಡದಲ್ಲಿ ಮತ್ತು ಕೆಳಭಾಗದಲ್ಲಿ ಇಂಗ್ಲಿಷ್‌ನಲ್ಲಿ ಸಂವಿಧಾನ ಪೀಠಿಕೆಯನ್ನು ಕೆತ್ತನೆ ಮಾಡಿದ್ದು, ಶೀಘ್ರದಲ್ಲಿ ಜನತೆ ಅನುದಿನ, ಅನುಕ್ಷಣ ಇದನ್ನು ಕಣ್ತುಂಬಿಕೊಳ್ಳಬಹುದು. 10 ಅಡಿ ಎತ್ತರ, 6 ಅಡಿ ಅಗಲ ಹಾಗೂ ಒಂದೂಕಾಲು ಅಡಿ ದಪ್ಪದ ಶಿಲೆಯಲ್ಲಿ ಸಂವಿಧಾನ ಪೀಠಿಕೆಯನ್ನು ಕೆತ್ತನೆ ಮಾಡಲಾಗಿದೆ.

1993ರಲ್ಲಿ ಅಂಬೇಡ್ಕರ್ ಪ್ರತಿಮೆ ಉದ್ಘಾಟನೆ: ಶಿಲೆಯಲ್ಲಿ ಸಂವಿಧಾನ ಪೀಠಿಕೆ ಅನಾವರಣಗೊಳ್ಳುತ್ತಿರುವ ಪೀಠದಲ್ಲಿ 1993ರ ಮೇ 26ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಅನಾವರಣಗೊಳಿಸಲಾಗಿತ್ತು. ಮೈಸೂರು ಮಹಾನಗರ ಪಾಲಿಕೆಯಿಂದ ನಿರ್ಮಿಸಿದ್ದ ಅಂಬೇಡ್ಕರ್ ಪ್ರತಿಮೆಯನ್ನು ಅಂದಿನ ಮೇಯರ್ ಸಿದ್ದಪ್ಪ ಅನಾವರಣಗೊಳಿಸಿದ್ದರು. ಅಂದಿನ ಮಾಜಿ ಮೇಯರ್ ಎಂ.ಚಿಕ್ಕತಮ್ಮಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅಂದಿನ ಸಂಸದೆ ಚಂದ್ರಪ್ರಭಾ ಅರಸ್, ಅಂದಿನ ಶಾಸಕರಾದ ಕೆ.ಎಂ.ಸೋಮಸುಂದರಂ, ಹರ್ಷಕುಮಾರ್‌ಗೌಡರು, ಅಜೀಜ್‌ಸೇಟ್, ಅಂದಿನ ಉಪಮೇಯರ್ ಶಾರದಮ್ಮ, ಪಾಲಿಕೆ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಕಾಶ್ ರಾಜೇ ಅರಸ್, ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷೆ ಮೋದಾಮಣಿ, ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಮಜಾರ್‌ಖಾನ್, ತೆರಿಗೆ ಅಪೀಲು ಸ್ಥಾಯಿ ಸಮಿತಿ ಭಾಗ್ಯಮ್ಮ, ಪುರಭವನ ಸಮಿತಿ ಅಧ್ಯಕ್ಷ ನರಸಿಂಹಯ್ಯ, ಪಾಲಿಕೆ ವಿರೋಧ ಪಕ್ಷದ ನಾಯಕ ಕೃಷ್ಣ, ಪಾಲಿಕೆ ಸದಸ್ಯ ಪಿ.ನಾಗರಾಜ್ ಮುಖ್ಯ ಅತಿಥಿಯಾಗಿದ್ದರು. ಇದೀಗ ಹಲವು ವರ್ಷಗಳಿಂದ ಪ್ರತಿಮೆ ಇಲ್ಲದೇ ಇದ್ದ ಪೀಠದಲ್ಲಿ ಸಂವಿಧಾನ ಪೀಠಿಕೆಯ ಶಿಲೆ ಅನಾವರಣಗೊಳ್ಳುತ್ತಿದೆ.

ಇಚ್ಛಾಮರಣ: ನಮ್ಮ ಹೋರಾಟದ ಗೆಲುವು

ದಾವಣಗೆರೆ ನಿವೃತ್ತ ಶಿಕ್ಷಕಿ ಕರಿಬಸಮ್ಮ ಹೇಳಿಕೆ

ದಾವಣಗೆರೆ: ಗುಣಪಡಿಸಲಾಗದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ಘನತೆಯಿಂದ ಮರಣ ಹೊಂದುವ ಹಕ್ಕು ಕರ್ನಾಟಕದಲ್ಲಿ ಜಾರಿಗೆ ಬಂದಿರು ವುದು ದಯಾಮರಣದ ಅನುಷ್ಠಾನಕ್ಕೆ ಕೋರಿ ನಿರಂತರ ವಾಗಿ ನಡೆಸಿದ ಹೋರಾಟದ ಫಲ ಎಂದು ನಿವೃತ್ತ ಶಿಕ್ಷಕಿ ಎಚ್.ಬಿ. ಕರಿಬಸಮ್ಮ ತಿಳಿಸಿದರು.



ಕರಿಬಸಮ್ಮ

ಕರುಳು ಕ್ಯಾನ್ಸರ್‌ನಿಂದ ಬಳಲುತ್ತಿದ್ದ ನಾನು 24 ವರ್ಷ ಗಳಿಂದ ದಯಾ ಮರಣಕ್ಕೆ ಹೋರಾಟ ನಡೆ ಸುತ್ತಿದ್ದೇನೆ. ನ್ಯಾಯಾಲಯದ ಮೆಟ್ಟಿಲು ಏರಿ ಕಾನೂನಾತ್ಮಕ ಹಕ್ಕು ಪಡೆಯಲು ಪ್ರಯತ್ನಿಸಿದ್ದೇನೆ. ಇಚ್ಛಾಮರಣಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿರುವುದು ಹರ್ಷವುಂಟು ಮಾಡಿದೆ. ಕಾನೂನಾತ್ಮಕವಾಗಿ ಇಚ್ಛಾಮರಣ ಪಡೆದ ಮೊದಲ ವ್ಯಕ್ತಿ ನಾನಾಗಬೇಕು ಎಂಬ ಬಯಕೆ ಇದೆ. ಈ ಅವಕಾಶಕ್ಕೆ ಕಾಯುತ್ತಿದ್ದೇನೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಬದುಕಿನಲ್ಲಿ ಹಲವು ಬಾರಿ ಸಾವಿನ ಮನೆಯ ಬಾಗಿಲು ಬಡಿದಿದ್ದೇನೆ. ಕಾಯಿಲೆಯಿಂದ ನರಳಿ ಸಂಕಟ ಅನುಭವಿಸಿದ್ದೇನೆ. ಆತ್ಮಹತ್ಯೆ ಮಾಡಿಕೊಳ್ಳಲು ಮನಸು ಒಪ್ಪಲಿಲ್ಲ. ಮರಣವೂ ಘನತೆಯಿಂದ ಇರಬೇಕು ಎಂಬುದು ನನ್ನ ಬಲವಾದ ನಂಬಿಕೆ. ವಿಶ್ವದ ಹಲವು ದೇಶಗಳಲ್ಲಿರುವ ಈ ಅವಕಾಶ ಭಾರತದಲ್ಲಿ ಏಕಿಲ್ಲ ಎಂಬ ಪ್ರಶ್ನೆ ಕಾಡಿತ್ತು ಎಂದು ಹೇಳಿದರು.

ಮಾರಣಾಂತಿಕ ಕಾಯಿಲೆಗಳಿಂದ ಬಳಲುವ ವೃದ್ಧರ ಸಂಖ್ಯೆ ದೇಶದಲ್ಲಿ ದೊಡ್ಡದಾಗಿದೆ. ಘನತೆಯಿಂದ ಸಾಯುವ ಅವಕಾಶ ಸಿಗದೇ ನನ್ನಂತೆ ನರಳುತ್ತಿದ್ದಾರೆ. ಇಚ್ಛಾಮರಣ ಕಾನೂನು ಜಾರಿಗೆ ಒತ್ತಾಯಿಸಿ ಹೋರಾಟ ಆರಂಭಿಸಿದಾಗ ಎಲ್ಲರೂ ಮೂದಲಿಸಿದ್ದರು. ಕುಟುಂಬದ ಸದಸ್ಯರು, ಸಂಬಂಧಿಕರು ದೂರವಾದರು. 16 ವರ್ಷಗಳಿಂದ ವೃದ್ಧಾಶ್ರಮದಲ್ಲಿ ನೆಲೆಸಿ ಹೋರಾಟ ಮುಂದುವರಿಸಿದೆ ಎಂದು ನೆನಪಿಸಿ ಕೊಂಡರು. ಹೋರಾಟಕ್ಕೆ ನೆರವಾದ ವಿಜಯಕುಮಾರಿ, ಶಾಂತಮ್ಮ, ಟಿ.ಎನ್.ಚಿಕ್ಕಿಸ್ ಹಾಜರಿದ್ದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಚಾಮರಾಜನಗರ ವಿಭಾಗ, ಚಾಮರಾಜನಗರ

ಸಂಖ್ಯೆ: ಕರಾಸಾ/ಚಾನವಿ/ಸಂ/ವಾಣಿಜ್ಯ/2027/2024–25 ದಿನಾಂಕ: 08.02.2025

ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ 05/2024–25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲ ಕ.ರಾ.ರ.ಸಾ. ನಿಗಮ ಬಸ್ ನಿಲ್ದಾಣದ ಖಾಲಿಯಿರುವ ಮತ್ತು ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆಯಲ್ಲಿ ವಾಣಿಜ್ಯ ವ್ಯವಹಾರ ನಡೆಸಲು ಆಸಕ್ತ ಅರ್ಜಿದಾರರನ್ನು ಪರವಾನಗಿದಾರರನ್ನಾಗಿ ಆಯ್ಕೆ ಮಾಡುವ ಸಲುವಾಗಿ ಮತ್ತು ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್‌ಗಳಿಗೆ ಆಸಕ್ತ ಅರ್ಜಿದಾರರನ್ನು ಆಯ್ಕೆ ಮಾಡಲು ಇ–ಟೆಂಡರ್ / ಸಂಧಾನ ಪ್ರಕಟಣೆ ಸಂ. 05/2024–25 ದಿನಾಂಕ: 10.02.2025 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳು ಐದು (05) ವರ್ಷಗಳ ಅವಧಿಗೆ ಎಲ್ಲದೆಯೋ ಹಾಗೂ ಯಾವ ಸ್ಥಿತಿಯಲ್ಲಿದೆಯೋ ಹಾಗೆಯೆ ಇರುವ ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್ ಮತ್ತು ಸಂಧಾನ ಮುಖಾಂತರ ನೀಡಲಾಗುವುದು. ಇ–ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

1. ಸಂಧಾನ ಅರ್ಜಿ ಪಡೆಯಲು ಕೊನೆಯ ದಿನಾಂಕ : 03.03.2025 ಸಮಯ: 16.00 ಗಂಟೆವರೆಗೆ.
2. ಸಂಧಾನ ಅರ್ಜಿ & ಇ.ಎಂ.ಡಿ ಡಿ.ಡಿ ಸಲ್ಲಿಸಲು ದಿನಾಂಕ: 04.03.2025 ಸಮಯ: 16.00 ಗಂಟೆವರೆಗೆ.
3. ಸಂಧಾನ ಸಭೆಯ ದಿನಾಂಕ: 06.03.2025 ಸಮಯ: 12.30 ಗಂಟೆಯಿಂದ.
4. ಇ–ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ : 01.03.2025 ಸಮಯ: 16.00 ಗಂಟೆವರೆಗೆ.
5. ಇ–ಟೆಂಡರ್‌ಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 03.03.2025 ಸಮಯ: 16.00 ಗಂಟೆವರೆಗೆ.
6. ಅರ್ಜಿದಾರರು ಇ–ಟೆಂಡರ್‌ಗಾಗಿ ಕಛೇರಿಯಲ್ಲಿ ಮೂಲ ಇ.ಎಂ.ಡಿ, ಡಿ.ಡಿ ಮತ್ತು ಇತರೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.03.2025 ಸಮಯ: 16:00 ಗಂಟೆವರೆಗೆ.
7. ಇ–ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 04.03.2025 ಸಮಯ: 16.01 ಗಂಟೆಗೆ
8. ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 06.03.2025 ಸಮಯ: ಬೆಳಿಗ್ಗೆ 11.00 ಗಂಟೆಗೆ

ಹೆಚ್ಚಿನ ವಿವರಗಳಿಗೆ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆಯನ್ನು ಸಂಪರ್ಕಿಸಲು ಕೋರಲಾಗಿದೆ. (ದೂ:– 7760990302, 7760990311, 8123714362).

ಯಾವುದೇ ಕಾರಣ ನೀಡದೆ ಸಂಧಾನ/ಮಾತುಕತೆ ಪುರಸ್ಕರಿಸುವ ಹಾಗೂ ತಿರಸ್ಕರಿಸುವ, ಮುಂದೂಡುವ ಮತ್ತು ರದ್ದು ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕರಾರಸಾ ನಿಗಮ, ಚಾಮರಾಜನಗರ ವಿಭಾಗ

ವಾ.ಸಾ.ಸಂ.ಇ/ವಾಪ್ರ/4947/ಅಕಾರ್/2024–25

ರಿಟರ್ನಿಂಗ್ ಆಫೀಸರ್, ಬೆಳಗೊಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.., ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ಕಾರ್ಯಾಲಯ

ಪತ್ರಿಕಾ ಪ್ರಕಟಣೆ

ಬೆಳಗೊಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ಚುನಾವಣೆಯನ್ನು ದಿನಾಂಕ: 02–03–2025 ರಂದು ಭಾನುವಾರ ಬೆಳಿಗ್ಗೆ 09–00 ಗಂಟೆಯಿಂದ ಸಂಜೆ 04–00 ಗಂಟೆಯವರೆಗೆ "ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢ ಶಾಲಾ ವಿಭಾಗ, ಬೆಳಗೊಳ, ಶ್ರೀರಂಗಪಟ್ಟಣ ತಾಲ್ಲೂಕು" ಇಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಯಲ್ಲಿ ಸ್ಪರ್ಧಿಸಲು ಇಚ್ಛಿಸುವವರು ನಾಮಪತ್ರಗಳನ್ನು ದಿನಾಂಕ: 17–02–2025 ರಿಂದ 22–02–2025 ರವರೆಗೆ ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 02–00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು ಹಾಗೂ ನಾಮಪತ್ರಗಳ ಪರಿಶೀಲನೆಯನ್ನು ದಿನಾಂಕ: 23–02–2025 ರಂದು ಬೆಳಿಗ್ಗೆ 11–30 ಗಂಟೆಗೆ ನಡೆಸಲಾಗುವುದು. ಚುನಾವಣಾ ವೇಳಾ ಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೆ ಅಂಚೆ / ಮುದ್ದಾಂ ಮೂಲಕ ಈಗಾಗಲೇ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಮುಖ್ಯಕಾರ್ಯನಿರ್ವಾಹಕರನ್ನು / ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–
(ಮಹೇಂದ್ರ ಪಾಷ), ರಿಟರ್ನಿಂಗ್ ಅಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಬೆಳಗೊಳ,
ಶ್ರೀರಂಗಪಟ್ಟಣ ತಾಲ್ಲೂಕು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಮೈಸೂರು ಗ್ರಾಮಾಂತರ ವಿಭಾಗ, ಮೈಸೂರು

ಸಂ: ಕರಾಸಾ/ಮೈವಿ/ಸಂ/ತಂ/5612/2024–25 ದಿನಾಂಕ: 04.02.2025

ಇ–ಟೆಂಡರ್ ಪ್ರಕಟಣೆ–04/24–25 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕ.ರಾ.ರ.ಸಾ. ಸಂಸ್ಥೆಯ ಮೈಸೂರು ಗ್ರಾಮಾಂತರ ವಿಭಾಗದ ವ್ಯಾಪ್ತಿಗೆ ಒಳಪಡುವ (ಮೈಸೂರು ಕೇಂದ್ರೀಯ ಬಸ್ ನಿಲ್ದಾಣವನ್ನು ಹೊರತು ಪಡಿಸಿ) 17 ಬಸ್ ನಿಲ್ದಾಣಗಳು ಅಲ್ಲದೆ ವಿಭಾಗೀಯ ಕಛೇರಿ, ವಿಭಾಗೀಯ ಕಾರ್ಯಾಗಾರ, ಎಲ್ಲಾ ಘಟಕಗಳ ಶೌಚಾಲಯ / ಮೂತ್ರಾಲಯ ಮತ್ತು ಸ್ವಚ್ಛತಾ ನಿರ್ವಹಣೆ ಕಾರ್ಯದ ಗುತ್ತಿಗೆಯನ್ನು ಯಾಂತ್ರೀಕೃತ ಮತ್ತು ಯಾಂತ್ರೀಕೃತ ರಹಿತ ಹೌಸ್ ಕೀಪಿಂಗ್ ಪದ್ಧತಿನುಗುಣವಾಗಿ ಸಂಸ್ಥೆಯ ಸಾ.ಸ್ಥಾಯಿ.ಆದೇಶ ಸಂಖ್ಯೆ–603/2008ರನ್ವಯ ನಿರ್ವಹಿಸಲು ಅರ್ಹ ಸ್ವಚ್ಛತಾ ಗುತ್ತಿಗೆ ಸಂಸ್ಥೆಗಳು/ಸ್ವಚ್ಛತಾ ಗುತ್ತಿಗೆದಾರರಿಂದ ಅರ್ಜಿಗಳನ್ನು ದಿನಾಂಕ: 05.02.2025 ರಿಂದ 28.02.2025ರವರೆಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕಡಿಮೆ ಮೊತ್ತ ಬಿಡ್ ಮಾಡುವವರನ್ನು (Lowest Bidder) ಆಯ್ಕೆ ಮಾಡಲಾಗುವುದು.

ಸಂಸ್ಥೆಯ ನಿಯಮ ನಿಬಂಧನೆಗಳನ್ನು ಹಾಗೂ ಈ ಸಂಬಂಧದ ಅನುಬಂಧಗಳನ್ನು (ANNEXURES) ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಅದನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ದಾರರು ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ. ಆಸಕ್ತರು ವಿಭಾಗೀಯ ಕಚೇರಿಯಿಂದ ಅನುಬಂಧ–ಸಿ ಯನ್ನು ಪಡೆದುಕೊಂಡು ಇ.ಎಂ.ಡಿ ಹಾಗೂ ಅರ್ಜಿಗಳ ಮೂಲ ಡಿ.ಡಿ ಗಳೊಂದಿಗೆ ದಿನಾಂಕ 04.03.2025 ರಂದು ಸಲ್ಲಿಸಿ ಭಾಗವಹಿಸಬಹುದಾಗಿದೆ. ಸದರಿ ಟೆಂಡರ್‌ನ್ನು ಅಂಗೀಕರಿಸುವ / ನಿರಾಕರಿಸುವ / ಮಾರ್ಪಾಡು ಮಾಡುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಹೆಚ್ಚಿನ ಮಾಹಿತಿಗಾಗಿ/ವಿವರಗಳಿಗಾಗಿ ಸಂಪರ್ಕಿಸಿ ಇ–ಪೋರ್ಟಲ್ ವೆಬ್‌ಸೈಟ್ ವಿಳಾಸ: https://kppp.karnataka.gov.in ಮೊ.ಸಂ–7760880802/7760990811/9740661585

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ಮೈಸೂರು ಗ್ರಾಮಾಂತರ ವಿಭಾಗ,
ಮೈಸೂರು

ವಾ.ಸಾ.ಸಂ.ಇ/ವಾಪ್ರ/4947A/ಅಕಾರ್/2024–25

ಪುರಸಭಾ ಕಾರ್ಯಾಲಯ, ತಿ.ನರಸೀಪುರ

ಮೈಸೂರು ಜಿಲ್ಲೆ – 571124
Email: ka.tnarasipura.tmc@gmail.com
Website : www.tnarasipuratown.mrc.gov.in
Phone: 08227-261232

ಸಂ:ಪುಸ.ತಿನಪು./ಕಂ.ಶಾ./ಪಿ.ಆರ್./ಪ್ರಕಟಣೆ/01/2024–25 ದಿ: 06.02.2025

ಸಾರ್ವಜನಿಕ ಪ್ರಕಟಣೆ

ಸರ್ವೆ ನಂ.370/1 ಮತ್ತು 372/2, ಆಲಗೂಡು ಹೊಸ ಬಡಾವಣೆ, ನಂಜನಗೂಡು ಮುಖ್ಯ ರಸ್ತೆ, ಹೆಳವರಹುಂಡಿ, ತಿನರಸೀಪುರ, ಮೈಸೂರು ಜಿಲ್ಲೆಗೆ ಸೇರಿದ ಆಸ್ತಿ ಸಂಖ್ಯೆ 1087ರಲ್ಲಿ ಅಳತೆ 10631 ಚ.ಅ. (988.10 ಚ.ಮೀ.). ಆಸ್ತಿ ಸಂಖ್ಯೆ 1088 ರಲ್ಲಿ ಅಳತೆ 3505 ಚ.ಅ.ಗಳಿದ್ದು (325.70 ಚ.ಮೀ) ಒಟ್ಟು ಅಳತೆ 14136 ಚ.ಅ.ಗಳಿದ್ದು (1313.80 ಚ.ಮೀ) ಅದರ ಪೈಕಿ ನಿವೇಶನದ ಶೇ10% ಅಂದರೆ 1413.6 ಚ.ಅ. ಸಿ.ಎ.ನಿವೇಶನ (ನಾಗರೀಕ ಸೌಲಭ್ಯಕ್ಕಾಗಿ) ಜಾಗವನ್ನು ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಾಲಯ ಟ್ರಸ್ಟ್(ರಿ) ರವರಿಗೆ ಸಾರ್ವಜನಿಕ ಅನುಕೂಲಕ್ಕಾಗಿ ಅಭಿವೃದ್ಧಿ ಪಡಿಸಲು ಶಾಲಾ ವಿದ್ಯಾರ್ಥಿ ನಿಲಯ, ವೃದ್ಧಾಶ್ರಮ, ದೇವಾಲಯ ಇತ್ಯಾದಿಗಳಿಗಾಗಿ ಈ ಸಿ.ಎ. ಜಾಗವನ್ನು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರು ನಡೆಸುತ್ತಿರುವ ದೇವಾಲಯವಾದ ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಾಲಯ ಟ್ರಸ್ಟ್ (ರಿ)ಗೆ ಮಂಜೂರಾತಿ ಕೋರಿರುತ್ತಾರೆ. ಸದರಿ ಸಿ.ಎ. ಜಾಗದ ಒಟ್ಟು ಅಳತೆ 14136 ಚ.ಅ.ಗಳಿದ್ದು ಚೆಕ್ಕುಬಂಧಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಉದ್ಯಾನವನ, ದಕ್ಷಿಣಕ್ಕೆ ರಸ್ತೆ ಅದರ ಪೈಕಿ ನಿವೇಶನದ ಶೇ 10% ಅಂದರೆ 1413.6 ಚ.ಅ. ಜಾಗವನ್ನು ಸಾಮಾನ್ಯ ಸಭೆಯ ತೀರ್ಮಾನದಂತೆ ಶಾಲಾ ವಿದ್ಯಾರ್ಥಿನಿಲಯ, ವೃದ್ಧಾಶ್ರಮ, ದೇವಾಲಯ ಇತ್ಯಾದಿಗಳಿಗಾಗಿ ಈ ಸಿ.ಎ. ಜಾಗವನ್ನು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರು ನಡೆಸುತ್ತಿರುವ ದೇವಾಲಯವಾದ ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಾಲಯ ಟ್ರಸ್ಟ್(ರಿ) ರವರಿಗೆ ಗುತ್ತಿಗೆ ಆಧಾರದಲ್ಲಿ ನೀಡುವ ಬಗ್ಗೆ ಸಾರ್ವಜನಿಕರು ತಮ್ಮ ಆಕ್ಷೇಪಣೆ/ತಂಟೆ ತಕರಾರುಗಳು ಇದ್ದಲ್ಲಿ ಪ್ರಕಟಣೆಗೊಂಡ 15 ದಿನಗಳೊಳಗಾಗಿ ಲಿಖಿತವಾಗಿ ಈ ಕಛೇರಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಸದರಿ ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಅಧ್ಯಕ್ಷರು, ಪುರಸಭೆ, ತಿ.ನರಸೀಪುರ.
ಸಹಿ/– ಮುಖ್ಯಾಧಿಕಾರಿ, ಪುರಸಭೆ, ತಿ.ನರಸೀಪುರ.

DIPR/DDMYS/1257/KSMCA/880/2024-25

IN THE COURT OF THE HON'BLE I ADDL SENIOR CIVIL JUDGE AND CJM AT MYSURU

P& SC. No. 9/2025

Petitioners: 1.Smt. SHEELA. P, D/o.late. Puttabuddhi, D/o Late K.G. Parvathamma, W/o A.M. Chandrashekara Aradhya, Aged about 42 years, R/at No.1099, 4/10 Main, 2nd Stage, E&F Block, Ramakrishna Nagar, Mysore-570022.

2. Sri PUNITH. P, S/o. Late Puttabuddhi, S/o Late K.G. Parvathamma, Aged about 40 years, R/at No.1118, 4/10 Main, 2nd Stage, E & F Block, Ramakrishna Nagar, Mysore-570022.

V/s

RESPONDENT: Nil

PUBLIC NOTICE

The Petitioners above filed this petition seeking for grant of Succession Certificate in respect of Petition Schedule L.T.A. amount mentioned below which is in the name of Late K.G.Parvathamma who died on 03-12-2017. Any persons has any right and interest in the above said matter may appear on 12-03-2025 at 11.00 AM either in person or through Advocate and may file their objections, failing which the matter will be heard and decided in the absence.

SCHEDULE

Life Time Arrears (L.T.A), Office of the Joint Director, District Treasury, Mysore, P.P.O. No. 521KCS096048. L.T.A. Amount: Rs.3,05,370/-. Total Amount in Words: Rupees Three Lakh Five Thousand Three Hundred and Seventy Only. Given under my hand and seal of this Court, dated this 10th day of February, 2025.

By Order of the Court - Sd/- Chief Ministerial Officer,
I Addl. Civil Judge and CJM Court, Mysuru

Sd/- Prakash R., Advocate, No. 4066, 'H' Block,
11th Main, 5th Cross, Kanakadasa Nagar, Mysuru-570 022

ಜಿಲ್ಲಾ ಪಂಚಾಯತ್, ಚಾಮರಾಜನಗರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಾಮರಾಜನಗರ

ಕೊಠಡಿ ಸಂ: 306, ಜಿಲ್ಲಾ ಆಡಳಿತ ಭವನ, ಫೋ: 08226-222421 Email: dhochamarajanagar@gmail.com

ಸಂಖ್ಯೆ: ಜಆಕುಕ/ಚಾನ/ಸಿವಿ(2)/62/2024–25 ದಿನಾಂಕ: 06.02.2025

–: ಪತ್ರಿಕಾ ಪ್ರಕಟಣೆ :–

ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕೊಳ್ಳೇಗಾಲ ಇಲ್ಲಿನ 02 ಶುಶ್ರೂಷಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಹಾಗೂ ರೋಸ್ಟರ್ ಕಂ ಮೆರಿಟ್ ರನ್ವಯ ಷರತ್ತು ಮತ್ತು ನಿಬಂಧನೆಗೊಳಪಟ್ಟು ನೇಮಕಾತಿ ಮಾಡಲು ನೇರ ಸಂದರ್ಶನವನ್ನು **(walk in interview)** ದಿನಾಂಕ: 20.02.2025 ರಂದು ಸಮಯ **10:00 AM** ರಿಂದ **04:30 PM** ರವರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಕೊಠಡಿ ಸಂಖ್ಯೆ: 312, ಮೂರನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇಲ್ಲಿ ಏರ್ಪಡಿಸಲಾಗಿದೆ.

ಕ್ರ.ಸಂ.	ಹುದ್ದೆಯ ಹೆಸರು	ಹುದ್ದೆಯ ಸಂಖ್ಯೆ ಮತ್ತು ಮೀಸಲಾತಿ ವರ್ಗೀಕರಣ	ವಿದ್ಯಾರ್ಹತೆ	KNC ಪ್ರಮಾಣ ಪತ್ರ	ಸೇವ ಅನುಭವ	ವಯೋಮಿತಿ	ವೇತನ
1	ಶುಶ್ರೂಷಾಧಿಕಾರಿ	ಹುದ್ದೆಗಳ ಸಂಖ್ಯೆ: 02 ಪ.ಜಾ (ಇತರೆ): 1 ಸಾ.ವ. (ಮಹಿಳೆ): 1	GNM/ B.Sc. (Nursing)	ಚಾಲ್ತಿಯಲ್ಲಿರಬೇಕು	2 ವರ್ಷಗಳು	ಗರಿಷ್ಠ 45 ವರ್ಷಗಳು	ಕಾರ್ಮಿಕ ಇಲಾಖೆಯ ನಿಗಧಿಪಡಿಸುವ ಕನಿಷ್ಠ ವೇತನ ಮಾರ್ಗಸೂಚಿಯಂತೆ (Minimum Wages)

ಷರತ್ತು ಮತ್ತು ನಿಬಂಧನೆಗಳು:

[1] ಗುತ್ತಿಗೆ ಆಧಾರದ ನೇಮಕಾತಿಯು ತಾತ್ಕಾಲಿಕವಾಗಿದ್ದು, ಗರಿಷ್ಠ 1 ವರ್ಷದ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. ಕಾರ್ಯಕ್ಷಮತೆಯ ತೃಪ್ತಿಕರವಾಗಿದ್ದಲ್ಲಿ ಮುಂದಿನ ಆರ್ಥಿಕ ವರ್ಷದ ಅನುದಾನ ಅನುಮೋದನೆಯ ಮೇರೆಗೆ ಸೇವೆಯನ್ನು ಮುಂದುವರೆಸಲಾಗುವುದು ಮತ್ತು ರಾಜ್ಯಮಟ್ಟದಿಂದ ಹೊಸ ನೇಮಕಾತಿ / ವರ್ಗಾವಣೆ ಮೂಲಕ ನಿಯೋಜನೆಗೊಂಡಲ್ಲಿ ಹುದ್ದೆಯನ್ನು ತೆರವುಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ. [2] ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. [3] ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಷರತ್ತು ಮತ್ತು ನಿಬಂಧನೆಗಳು ಅನ್ವಯಿಸುತ್ತದೆ. **[4] District Health and Family Welfare Office, Chamarajanagar** ಇವರ ಹೆಸರಿನಲ್ಲಿ ರೂ. 50/– ಗಳ **Registration Fee DD** ಅನ್ನು ಸಲ್ಲಿಸಿ ನೇರ ಸಂದರ್ಶನಕ್ಕೆ ಹಾಜರಾಗುವುದು [5] ಅಭ್ಯರ್ಥಿಗಳು ಹುದ್ದೆಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳು [ವಿದ್ಯಾರ್ಹತೆಯ ಪ್ರಮಾಣ ಪತ್ರ, ಎಲ್ಲಾ ವರ್ಷಗಳ ಸೆಮಿಸ್ಟರ್ ಅಂಕಪಟ್ಟಿ, ಕರ್ನಾಟಕ ರಾಜ್ಯ ನರ್ಸಿಂಗ್ ಬೋರ್ಡ್ ನಿಂದ ಪಡೆದಿರುವ ಚಾಲ್ತಿಯಲ್ಲಿರುವ ನೋಂದಣಿ ಪ್ರಮಾಣ **(KNC)** ಪತ್ರ, "ಎಸ್‌ಎಸ್‌ಎಲ್‌ಸಿ ಅಂಕ ಪಟ್ಟಿ, ಗುರುತಿನ ಚೀಟಿ, ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ * ಸೇವ ಅನುಭವ ಪ್ರಮಾಣ ಪತ್ರ ಸರ್ಕಾರದಿಂದ ಮಾನ್ಯತೆ ಪಡೆದಿರುವ ಸಂಸ್ಥೆಗಳಿಂದ ಕಂಪ್ಯೂಟರ್ ತರಬೇತಿ ಹೊಂದಿದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಬೇಕು. ಹುದ್ದೆಗೆ ಸಂಬಂಧಿಸಿದ ಎಲ್ಲಾ ಪೂರಕ ಚಾಲ್ತಿಯಲ್ಲಿರುವ ದಾಖಲೆಗಳು] ಹಾಗೂ ಅವುಗಳ 2 ಸೆಟ್ ಜೆರಾಕ್ಸ್ ಪ್ರತಿಗಳನ್ನು ಸ್ವಯಂ ದೃಢೀಕರಣದೊಂದಿಗೆ ಸಂದರ್ಶನ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು. [6] ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಯನ್ನು ಕರ್ತವ್ಯದ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂ: ವಾಸಾಸಂಇ:ಚಾನಗರ:599:2024–25